ಯಲ್ಲಿ ಆಳುವ ಪಕ್ಷ ಹಾಗೂ ವಿರೋಧ ಪಕ್ಷಗಳು ತಾವು ಅಪ್ಪಣೆ ಕೊಡಿಸಿದ ಹಾಗೆ ಸಭೆಯಲ್ಲಿ ಹಾಜರಿದ್ದು ಸಕಾಲದಲ್ಲಿ ಕಾರ್ಯಕ್ರಮಗಳನ್ನು ನಿರ್ವಹಿಸುವುದರ ಬಗ್ಗೆ ಒಪ್ಪಿಗೆ ಇದೆ. ಇವತ್ತು ವಾಟಾಳ್ ನಾಗರಾಜ್ ಅವರು ನನ್ನ ಬಗ್ಗೆ ನೇರವಾಗಿ ಪ್ರಸ್ತಾಪ ಮಾಡಿದ್ದಾರೆ. ನಾನು ನನ್ನ ಇಲಾಖೆಗಳಿಗೆ ಸಂಬಂಧ ಪಟ್ಟಹಾಗೆ ಯಾವುದೇ ಸಂದರ್ಭದಲ್ಲಿ ಚರ್ಚೆಯಾದಾಗ ನಾನು ಖುದ್ದಾಗಿ ಬಂದು ಉತ್ತರ ಹೇಳಿದ್ದೇನೆ, ಕಾರ್ಯಕಲಾಪದಲ್ಲಿ ಭಾಗವಹಿಸಿದ್ದೇನೆ. ಯಾವತ್ತೂ ನನಗೆ ಈ ಸಭೆಯ ಬಗ್ಗೆ ಹೆಚ್ಚಿನ ಗೌರವ ಇದೆ. ಆದುದರಿಂದ ತಾವು ಏನು ಸೂಚನೆ ಕೊಟ್ಟಿದ್ದೀರೋ ಅದನ್ನು ಸರ್ಕಾರ ಗಮನಿಸಿದೆ. ಸರ್ಕಾರ ಮತ್ತು ಎಲ್ಲರೂ ಕೂಡ ಸೇರಿ ಸದನದ ಗೌರವವನ್ನು ಅತ್ಯಂತ ಎಚ್ಚರಿಕೆಯಿಂದ ಸಂಸದೀಯ ವ್ಯವಸ್ಥೆಯಲ್ಲಿ ಎತ್ತಿಹಿಡಿಯಬೇಕು. ಈ ದಿಸೆಯಲ್ಲಿ ಮುಂದಾಗೋಣವೆಂದು ಹೇಳಿ, ಮಾನ್ಯ ಸಭಾಧ್ಯಕ್ಷರ ಸೂಚನೆಯನ್ನು ನಾನು ಸ್ವಾಗತ ಮಾಡುತ್ತೇನೆ.

ಪ್ರಕಟಣೆ

ಅಧ್ಯಕ್ಷರು.— ನಿನ್ನೆ ಪ್ರೇಕ್ಷಕರ ಗ್ಯಾಲರಿಯಲ್ಲಿ ನಡೆದ ಅಹಿತಕರ ಘಟನೆಯಿಂದ ವಾಚ್ ಅಂಡ್ ವಾರ್ಡ್ ಸಿಬ್ಬಂದಿಯಲ್ಲಿ ಒಬ್ಬರಿಗೆ ತೀವ್ರ ನೋವಾಗಿದೆ. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕು. ಅವರು ದೈಹಿಕವಾಗಿ ಮಾನಸಿಕವಾಗಿ ಮನಃ ಕ್ಲೇಶಗೊಂಡಿದ್ದಾರೆ. ಪಹರೆ ಸಿಬ್ಬಂದಿ ಸಲ್ಲಿಸತಕ್ಕ ಉತ್ತಮ ಕಾರ್ಯ ನಿರ್ವಹಣೆಯನ್ನು ನಾನು ಶ್ಲಾಘನೆ ಮಾಡಿ, ನಿನ್ನೆ ಯಾರು ಈ ಪ್ರಕರಣದಲ್ಲಿ ಗಾಯಗೊಂಡಿದ್ದಾರೆ ಅವರಿಗೆ ೧ ಸಾವಿರ ರೂಪಾಯಿಗಳನ್ನು ನೀಡಲು ಏರ್ಪಾಡು ಮಾಡುತ್ತೇನೆ,

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ನಾನು ಸದಸ್ಯರ ಪರವಾಗಿ ೧೦೦ ರೂಪಾಯಿಗಳನ್ನು ಕೊಡುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

†ಶ್ರೀ ಎ. ಟಿ. ರಾಮಸ್ವಾಮಿ (ಅರಕಲಗೂಡು).— ಮಾನ್ಯ ಅಧ್ಯಕ್ಷರೆ, ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಮಾನ್ಯ ರಾಜ್ಯಪಾಲರು ಕಳೆದ ತಿಂಗಳು ೧೯ನೇ ತಾರೀಖು ಮಾಡಿದ ಭಾಷಣಕ್ಕೆ ನಾನು ವಂದನೆಯನ್ನು ಸಲ್ಲಿಸುತ್ತಾ ನನ್ನ ಭಾಷಣವನ್ನು ಮುಂದುವರಿಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ರಾಜ್ಯದ ಕಡುಬಡವರಿಗೆ, ಈ ರಾಜ್ಯದ ರೈತಾಪಿ ವರ್ಗದ ಜನರಿಗೆ ಮತ್ತು ಅದಕ್ಕಿಂತ ಹೆಚ್ಚಾಗಿ ಭ್ರಷ್ಟಾಚಾರವನ್ನು ಹತ್ತಿಕ್ಕಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ ಎನ್ನುವುದನ್ನು ತಮ್ಮ ಭಾಷಣದಲ್ಲಿ ಸ್ಪಷ್ಟಪಡಿಸಿದ್ದಾರೆ. ರಾಜ್ಯಪಾಲರ ಭಾಷಣದ ೩೩ನೇ ಪ್ಯಾರಾದಲ್ಲಿ "ನನ್ನ ಸರ್ಕಾರ ರಾಜ್ಯದ ರೈತರ ಹಿತಾಸಕ್ತಿಗಳನ್ನು ಸದಾ ಗಮನದಲ್ಲಿಟ್ಟುಕೊಂಡು ಅವರಿಗೆ ಸಾಧ್ಯವಾದ ಎಲ್ಲಾ ನೆರವನ್ನು ಒದಗಿಸುತ್ತದೆಂದು'' ಹೇಳಿದ್ದಾರೆ. ಈ ಸದನ ಪ್ರಾರಂಭವಾದಾಗಿನಿಂದ ನಾನು ಹೊಸ ಸದಸ್ಯನಾಗಿ ಇಲ್ಲಿ ಕುಳಿತುಕೊಂಡು ನೋಡಿದ್ದೇನೆ, ರೈತರ ಬಗ್ಗೆ ಮಾತು ಬಂದಾಗ, ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಮಿತ್ರಪಕ್ಷಗಳ ಹಿರಿಯ ಸದಸ್ಯರುಗಳು ಬಹಳವಾಗಿ ಮಾತನಾಡಿದ್ದಾರೆ. ನನಗಾದರೂ ಅನಿಸುತ್ತದೆ, ರೈತರ ಸಾಲ ಮನ್ನಾ ಮಾಡುವ ಬಗ್ಗೆ ಪ್ರಸ್ತಾಪ ಮಾಡುವುದಕ್ಕಿಂತ ಪ್ರಮುಖವಾಗಿರತಕ್ಕ ವಿಚಾರ ರೈತರ ಶೋಷಣೆ ನಿರಂತರವಾಗಿ ನಡೆಯುತ್ತಿದೆ. ರೈತರಿಂದ ಭ್ರಷ್ಟಾಚಾರ ಮುಖಾಂತರ ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ ಅದನ್ನು ಮೊದಲು ನಿಲ್ಲಿಸಬೇಕು. ಇದು ನಿಜವಾಗಿಯೂ ರೈತರ ಸಾಲ ಮನ್ನಾ ಮಾಡುವುದಕ್ಕಿಂತ ಬಹಳ ಮುಖ್ಯವಾದ ವಿಚಾರ ಆ ದಿಕ್ಕಿನಲ್ಲಿ ನಮ್ಮ ಸರ್ಕಾರ ಗಮನಹರಿಸಿದೆ. ಭ್ರಷ್ಟಾಚಾರವನ್ನು ಹತ್ತಿಕ್ಕಲಿಕ್ಕೆ ಮೂರು ಅಂಶಗಳನ್ನು ಜಾರಿಗೆ ತರಲಾಗುವುದೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಭ್ರಷ್ಟಾಚಾರವನ್ನು ತಪ್ಪಿಸಿ ಈ ಸಮಾಜದಲ್ಲಿ ಕಡು ಬಡವರಿಗೆ ಏನು ಅನ್ಯಾಯವಾಗುತ್ತಿದೆ ಏನು ಶೋಷಣೆಯಾಗುತ್ತಿದೆ ಅದು ನಿಲ್ಲಬೇಕು. ಆ ದಿಕ್ಕಿನಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡಿರುವುದು ಬಹಳ ಸಂತೋಷದ ವಿಚಾರವೆಂದು ಈ ಸದನದ ಸದಸ್ಯರ ಗಮನಕ್ಕೆ ತರಲಿಕ್ಕೆ ನಾನು ಇಚ್ಛೆಪಡುತ್ತೇನೆ. ಭ್ರಷ್ಟಾಚಾರ ಬಹು ಭೂತಾಕಾರದ ಪ್ರಶ್ನೆ ಈ ಸಮಸ್ಯೆಯನ್ನು ಎತ್ತಿಕೊಂಡು ವಿರೋಧಪಕ್ಷದ ನಾಯಕರು, ವಿರೋಧಪಕ್ಷದ ಇತರೆ ಹಿರಿಯ ನಾಯಕರುಗಳು ಹಾಗೂ ಸ್ನೇಹಿತರು ಮಾತನಾಡಿರತಕ್ಕದ್ದು ನಿಜವಾಗಿಯೂ ದುರ್ದೈವ. ಸಾಲ ಮನ್ನಾ ಮಾಡುವುದು ಬಹಳ ದೊಡ್ಡ ಸಮಸ್ಯೆಯಲ್ಲ.

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಭ್ರಷ್ಟಾಚಾರ ದೊಡ್ಡ ಸಮಸ್ಯೆಯಾಗಿ ಕಾಣಿಸುತ್ತಿದೆ. ರೈತ ತಾಲ್ಲೂಕು ಕಛೇರಿಗೆ, ಸಬ್ ರಿಜಿಸ್ಟ್ರಾರ್ ಆಫೀಸಿಗೆ, ಫಾರೆಸ್ಟ್ ರೇಂಜ್ ಆಫೀಸಿಗೆ ಲ್ಯಾಂಡ್ ರೆಕಾರ್ಡ್ಸ್ ಆಫೀಸಿಗೆ ಹೋದರೆ ಅವರು ಪಡತಕ್ಕ ಬವಣೆ, ತಿರುಗಾಡತಕ್ಕ ದಿನಗಳನ್ನು ಮತ್ತು ಆ ಶ್ರಮಗಳನ್ನು ಲೆಕ್ಕ ಹಾಕಿದರೆ ಅದಕ್ಕೆ ಬೆಲೆ ಕಟ್ಟಲಿಕ್ಕೆ ಆಗುವುದಿಲ್ಲ. ರೈತ ಮಾನ ಮರ್ಯಾದೆಯಿಂದ ಬಾಳಿ ಬದುಕಬೇಕು ಅದಕ್ಕೊಂದು ವ್ಯವಸ್ಥಿತವಾದ ವಾತಾವರಣ ಕಲ್ಪಿಸಿಕೊಡಬೇಕೆಂದೂ ಆ ದಿಕ್ಕಿನಲ್ಲಿ ಭ್ರಷ್ಟಾಚಾರವನ್ನು ಹತ್ತಿಕ್ಕಲಿಕ್ಕೆ ನಮ್ಮ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡಿರುವುದು ಸ್ವಾಗತಾರ್ಹವಾದ ವಿಚಾರ ಎನ್ನುವುದನ್ನು ಸದನದ ಮೂಲಕ ತಮ್ಮ ಗಮನಕ್ಕೆ ತರುತ್ತಿದ್ದೇನೆ. ರಾಜ್ಯದಲ್ಲಿ ಪವರ್ ಕಡಿತ ಬಹಳ ಇದೆ. ೬೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಕೊಳವೆಬಾವಿಗಳನ್ನು ಮಾಡಿಸಿಕೊಂಡಿರುವ ಎಷ್ಟೋ ರೈತರಿಗೆ ಪವರ್ ಕನೆಕ್ಷನ್ ಸಿಗುತ್ತಿಲ್ಲ. ಒಂದು ಕೊಳವೆಬಾವಿ ಮಾಡಿಸಬೇಕಾದರೆ ಸುಮಾರು ೪೦ ಸಾವಿರ ರೂಪಾಯಿಗಳಾದರೂ ಬೇಕಾಗುತ್ತದೆ. ಅಷ್ಟು ಹಣ ಖರ್ಚು ಮಾಡಿ ಪಂಪ್‌ಸೆಟ್ ಜೋಡಿಸಿ ಕೊಂಡರೂ ನೀರನ್ನು ಮೇಲೆ ತಂದು ಹರಿಸಿ ಬೇಸಾಯ ಮಾಡುವುದಕ್ಕೆ ಆಗುತ್ತಿಲ್ಲ.

ನಾನು ಒಂದು ಮಾತನ್ನು ಸದನದ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಈ ಪವರ್ ಸರಬರಾಜಿನಲ್ಲಿ ಎಷ್ಟರಮಟ್ಟಿಗೆ ದುರುಪಯೋಗ ಆಗುತ್ತಿದೆ ? ನಾನು ಅನೇಕ ವರ್ಕ್‌ಶಾಪ್ ಇಂಡಸ್ಟ್ರಿಗಳಿಗೆ ಹೋದಾಗ ಗಮನಿಸಿದ್ದೇನೆ. ಮಾನ್ಯ ಮಂತ್ರಿಗಳು ದಯವಿಟ್ಟು ಗಮನಿಸಬೇಕು. ೫೦ ಸಾವಿರ ರೂಪಾಯಿ ಬಿಲ್ ಬರುವುದಿದ್ದರೆ ಅಡ್ಜಸ್ಟ್‌ಮೆಂಟ್ ಮಾಡಿಕೊಂಡು ೧ ಸಾವಿರ, ೨ ಸಾವಿರ ರೂಪಾಯಿಗಳನ್ನು ಸಂಬಂಧಪಟ್ಟ ನೌಕರರಿಗೆ ಕೊಟ್ಟುಬಿಡುತ್ತಾರೆ. ಮೀಟರನ್ನು ಅಡ್ಜಸ್ಟ್‌ಮೆಂಟ್ ಮಾಡಿಕೊಂಡುಬಿಡುತ್ತಾರೆ. ಬದುಕೇ ಒಂದು ಅಡ್ಜಸ್ಟ್‌ಮೆಂಟ್ ಎನ್ನುವ ಹಾಗೆ ಹೀಗೆ ಅಡ್ಜಸ್ಟ್‌ಮೆಂಟ್ ಮಾಡಿಕೊಂಡುಹೋದರೆ ಸರ್ಕಾರದ ಹಣ ಸೋರಿಕೆಯಾಗುತ್ತದೆ ಬಸ್‌ನಲ್ಲಿ ಪ್ರಯಾಣ ಮಾಡಿದರೂ ಅಡ್ಜಸ್ಟ್‌ಮೆಂಟ್. ಕಂಟ್ರಾಕ್ಟ್ ಬಿಲ್ ಬಂದರೂ ಅಡ್ಜಸ್ಟ್‌ಮೆಂಟ್.... ಇದು ಎಲ್ಲಿಗೆ ಹೋಗಿ ಮುಟ್ಟಿದೆ ಯೆಂದರೆ, ಕಚೇರಿಗಳಲ್ಲಿ ನೌಕರರು ಕೆಲಸಕ್ಕೆ ಸರಿಯಾಗಿ ಬಾರದಿದ್ದರೆ, ಅಲ್ಲಿ ಕೂಡ ಅಡ್ಜಸ್ಟ್‌ಮೆಂಟ್. ಇದನ್ನು ತಪ್ಪಿಸದಿದ್ದರೆ ಈ ಸರ್ಕಾರ ಸುಗಮವಾಗಿ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಮಾತನ್ನು ಸದನದ ಸದಸ್ಯರ ಗಮನಕ್ಕೆ ತರುತ್ತಾ ಮತ್ತೊಂದು ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ.

ನಮ್ಮಲ್ಲಿ ರಿಕ್ರೂಟ್‌ಮೆಂಟ್ ರೂಲ್ಸ್ ಇದೆ. ನಮ್ಮ ಹಾಸನ ಜಿಲ್ಲಾ ಪರಿಷತ್ತಿನಲ್ಲಿ ಒಂದು ಸಾವಿರ ಕ್ಕಿಂತ ಹೆಚ್ಚು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ಶಿಕ್ಷಕರ ನೇಮಕಾತಿ ಆಯಿತು. ಅವರನ್ನು ಇಂಟರ್‌ವ್ಯೂ ಕರೆದಾಗ, ಆ ಒಂದು ರಿಕ್ರೂಟ್‌ಮೆಂಟ್ ಕಮಿಟಿ ಏನಿತ್ತು, ಅದಕ್ಕೆ ೨೦ ಮಾರ್ಕ್ಸ್‌ಗಳನ್ನು ಕೊಡತಕ್ಕಂಥ ಅವಕಾಶ ಇತ್ತು. ನಾನು ನೋಡಿದ್ದೇನೆ. ಫಸ್ಟ್‌ಕ್ಲಾಸ್ ಪಾಸ್ ಆದವರಿಗೆ ೪ ಅಂಕಗಳನ್ನು ಕೊಟ್ಟಿದ್ದಾರೆ. ಅದೇ ಸೆಕೆಂಡ್ ಕ್ಲಾಸಿನಲ್ಲಿ ಪಾಸಾದವರಿಗೆ ೧೬–೧೮ ಅಂಕಗಳನ್ನು ಕೊಟ್ಟಿದ್ದಾರೆ. ಇದೇ ರೀತಿ ರಿಕ್ರೂಟ್‌ಮೆಂಟ್ ರೂಲ್ಸ್ ಇದ್ದರೆ ಪರೋಕ್ಷವಾಗಿ ಅಲ್ಲ, ಪ್ರತ್ಯಕ್ಷವಾಗಿ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಈ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಈ ಸರ್ಕಾರ ವ್ಯವಸ್ಥಿತವಾಗಿ ಮಾರ್ಪಾಡು ಮಾಡಬೇಕೆಂದು ನಾನು ತಮ್ಮ ಮೂಲಕ ಈ ಸದನದ ಗಮನಕ್ಕೆ ತರುತ್ತೇನೆ. ಈ ವರ್ಗಾವರ್ಗಿ ವಿಚಾರದಲ್ಲೂ ಅಷ್ಟೆ. ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಬೇಕು. ನಾನು ಮೊದಲೇ ಹೇಳಿದೆ ರೈತರು ಒಂದು ಅರ್ಜಿಯನ್ನು ತಹಸೀಲ್ದಾರರಿಗೆ ಕೊಡುತ್ತಾರೆ, ಎಂ.ಎಲ್.ಎ ಗೆ ಕೊಡುತ್ತಾರೆ ಮತ್ತು ಮಂತ್ರಿಗಳಿಗೆ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಕೊಡುತ್ತಾರೆ. ಒಂದೇ ಕೆಲಸಕ್ಕೆ ಹತ್ತಾರು ಬಾರಿ ಅರ್ಜಿಗಳನ್ನು ಕೊಡಬೇಕಾಗುತ್ತದೆ. ಇದನ್ನು ತಪ್ಪಿಸದೇ ಇದ್ದರೆ ರೈತಾಪಿ ಜನರಿಗೆ ಒಳ್ಳೆಯದನ್ನು ಮಾಡಿದಹಾಗೆ ಆಗುವುದಿಲ್ಲ. ಇದಕ್ಕಿಂತ ಹೆಚ್ಚಾಗಿ ಸರ್ಕಾರದ ಕಾರ್ಯಕಲಾಪಗಳು ಸುಲಲಿತವಾಗಿ ನಡೆಯುವುದಿಲ್ಲ. ಆದ್ದರಿಂದ ಸರಿಯಾದ ಕಟ್ಟು ನಿಟ್ಟಿನ ಕಾರ್ಯಕ್ರಮ ನಮ್ಮ ಸರ್ಕಾರ ಕೈಗೊಳ್ಳಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ಇನ್ನು ತರುತ್ತಿದ್ದೇನೆ. ನಾನು ಮೊದಲೇ ಹೇಳಿದೆ. ರೈತರ ಬಗ್ಗೆ ಬಹಳ ಶೋಷಣೆ ಆಗುತ್ತಿದೆ ಎಂದು ರೈತರಿಗೆ ಸಾಲ ಮನ್ನಾ ಮಾಡುತ್ತೇವೆ ಎನ್ನುವ ವಿಚಾರಕ್ಕಿಂತ ಪ್ರಾಮುಖ್ಯವಾದ ವಿಚಾರ ಎಂದರೆ ಅವರ ಮೇಲೆ ಶೋಷಣೆ ಆಗುತ್ತಿದೆ, ಅವರಿಂದ ಭ್ರಷ್ಟಾಚಾರದ ಮುಖಾಂತರ ಹಣ ವಸೂಲು ಮಾಡುತ್ತಿದ್ದಾರೆ ಅದನ್ನು ತಪ್ಪಿಸಿದರೆ ರೈತ ಸಮುದಾಯಕ್ಕೆ ಮಹದುಪಕಾರ ಮಾಡಿದಂತಾಗುತ್ತದೆ ಎಂದು ನಾನು ನನ್ನ ಸರ್ಕಾರವನ್ನು ತಮ್ಮ ಮೂಲಕ ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನಗನ್ನಿಸುವುದು ಇಷ್ಟೆ. ಕರ್ನಾಟಕ ರಾಜ್ಯದಲ್ಲಿ ಶ್ರೀ ವೀರೇಂದ್ರಪಾಟೀಲರ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಜನಸಾಮಾನ್ಯರಲ್ಲಿ ಭ್ರಷ್ಟಾಚಾರ ಕಡಿಮೆ ಆಯಿತು ಎಂದು ಅನ್ನಿಸಿದರೆ, ಈ ಶ್ರೇಯಸ್ಸಿಗಿಂತ ಉತ್ತಮವಾದ ಬೇರೆ ಶ್ರೇಯಸ್ಸು ಇಲ್ಲವೆಂದು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ

ತರುತ್ತೇನೆ. ೧೯೮೩ನೇ ಇಸವಿಯಲ್ಲಿ ಈ ರಾಜ್ಯದ ರೈತಸಮುದಾಯ ಸಂಪೂರ್ಣವಾದ ಒಂದು ಬದಲಾವಣೆಯನ್ನು ನಿರೀಕ್ಷಣೆ ಮಾಡಿ ಒಂದು ಅನಿವಾರ್ಯವಾದ ಸಂದರ್ಭದಲ್ಲಿ ದಕ್ಷ, ಸ್ವಚ್ಛ ಪ್ರಾಮಾಣಿಕ ಸರ್ಕಾರ ಬೇಕು ಎಂದು ತೀರ್ಮಾನಿಸಿದ್ದರಿಂದ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂತು ಆದರೆ ಆ ಮೇಲೆ ಗೊತ್ತಾಯಿತು, ಇವರು ದಕ್ಷ ಸರ್ಕಾರ ಕೊಟ್ಟಿಲ್ಲ, ಸ್ವಚ್ಛ ಸರ್ಕಾರ ಕೊಟ್ಟಿಲ್ಲ, ಪ್ರಾಮಾಣಿಕ ಸರ್ಕಾರ ಕೊಟ್ಟಿಲ್ಲ ಎಂದು. ಎಲ್ಲೆಲ್ಲೂ ಕೂಡ ರಾಜಕೀಯ ದೌರ್ಜನ್ಯ, ಆಡಳಿತದಲ್ಲಿ. ರಾಜಕೀಯ ಹಸ್ತಕ್ಷೇಪ ಹೆಚ್ಚಾಗಿತ್ತು. ಇದನ್ನು ಈ ರಾಜ್ಯದ ಜನತೆ ರಾಜ್ಯದ ಚರಿತ್ರೆಯ ಇತಿಹಾಸದಲ್ಲಿ ಮರೆಯಲಿಕ್ಕೆ ಸಾಧ್ಯವಿಲ್ಲವೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮಿತ್ರ ಪಕ್ಷದ ಸ್ನೇಹಿತರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು ನನಗಾದರೂ ಕೂಡ ಆ ಸಂದರ್ಭದಲ್ಲಿ ನನ್ನ ರಕ್ತ ಸ್ವಲ್ಪ ಬಿಸಿಯಾಯಿತು. ಅವರು ಒಂದು ಮಾತನ್ನು ಹೇಳಿದರು ಏನೆಂದರೆ ಎಲ್ಲರೂ ಕೂಡ ಈ ಸರ್ಕಾರದಲ್ಲಿ ಸೀಮಿತವಾಗಿ ಭ್ರಷ್ಟಾಚಾರ ಮಾಡುತ್ತೇವೆ. ಯಾರೂ ನಮ್ಮ ಮನೆಯಿಂದ ದುಡ್ಡು ತಂದು ರಾಜಕೀಯ ಮಾಡುವುದಿಲ್ಲ ಎಂದು ನಿಜಕ್ಕೂ ಇದು ಬಹಳ ಲಘುವಾದ ಮಾತಾಗಿದೆ. ಈ ವಿಚಾರದಲ್ಲಿ ಅವರು ಬಹಳ ಎಚ್ಚರಿಕೆಯಿಂದ ಮಾತನಾಡಬೇಕಿತ್ತು. ಈ ವಿಧಾನಸೌಧ ಕರ್ನಾಟಕ ರಾಜ್ಯದ ಜನರ ಆಶಾಸೌಧ.

ಈ ಆಶಾಸೌಧದಲ್ಲಿ ಕುಳಿತುಕೊಂಡು ಮಾತನಾಡುವುದು ಲಘುವಾದ, ಹಾಸ್ಯಾಸ್ಪದವಾದ ವಿಚಾರವಲ್ಲ ಎಂಬುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಇನ್ನು ಆಡಳಿತವಲ್ಲಿ ದಕ್ಷತೆ ಬಹಳ ಕಡಿಮೆಯಾಗಿದೆ. ನಾನು ಒಂದು ವಿಚಾರವನ್ನು ತಮ್ಮ ಮುಖಾಂತರ ಈ ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನಾನಾದರೂ ತಲೆತಗ್ಗಿಸ ಬೇಕಾದ ವಿಚಾರ. ಇಲ್ಲಿ ನಾವು ಮಾತನಾಡಬೇಕಾದರೆ ಮುಖ್ಯ ಸಚೇತಕರನ್ನು ಕೇಳಿ ಎಂದು ಹೇಳುತ್ತಾರೆ. ಮುಖ್ಯ ಸಚೇತಕರನ್ನು ಕೇಳಿದರೆ, ಅವರು ಸ್ಪೀಕರ್ ಅವರನ್ನು ಕೇಳಿ ಎನ್ನುತ್ತಾರೆ. ಸ್ಪೀಕರ್ ಕೇಳಿದರೆ, ಮುಖ್ಯ ಸಚೇತಕರನ್ನು ಕೇಳಿ ಎಂದು ಹೇಳುತ್ತಾರೆ......

ಅಧ್ಯಕ್ಷರು.—ರಾಜ್ಯಪಾಲರ ಭಾಷಣಕ್ಕೂ, ನೀವು ಇಲ್ಲಿ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದಕ್ಕೂ ಸಂಬಂಧ ಏನು ?......

ಶ್ರೀ ಎ.ಟಿ. ರಾಮಸ್ವಾಮಿ.—ತಮ್ಮ ಗಮನಕ್ಕೆ ತರುವುದಕ್ಕಾಗಿ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ನಾನು ಕಳೆದ ತಿಂಗಳು ೬ ಪ್ರಶ್ನೆಗಳನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದೆ. ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್ ಮೂಲಕ ೬ ಪ್ರಶ್ನೆಗಳ ಪತ್ರಿಕೆಗಳನ್ನೂ ಕಳುಹಿಸಿದ್ದೇನೆ. ಪ್ರಶ್ನೆಗಳ ಶಾಖೆಯಲ್ಲಿ ಕೇಳಿದರೆ, ಪತ್ರಸ್ವೀಕಾರ ಶಾಖೆಯಲ್ಲಿದೆ, ಅಲ್ಲಿ ವಿಚಾರ ಮಾಡಿ ಎಂದು ಹೇಳುತ್ತಾರೆ. ಪತ್ರಸ್ವೀಕಾರ ಶಾಖೆಯಲ್ಲಿ ಕೇಳಿದರೆ, ಪ್ರಶ್ನೆಗಳ ಶಾಖೆಯಲ್ಲಿ ಕೇಳಿ ಎಂದು ಹೇಳುತ್ತಾರೆ, ಹೀಗಾಗಿ ನನ್ನ ಪತ್ರ ಎಲ್ಲಿ ಹೋಗಿದೆ ಎಂದು ಕೇಳಿದಾಗ, ನನ್ನ ಆರು ಪ್ರಶ್ನೆಗಳಲ್ಲಿ ಕೇವಲ ೨ ಪ್ರಶ್ನೆಗಳನ್ನು ಮಾತ್ರ ಗಮನಕ್ಕೆ ತೆಗೆದುಕೊಂಡಿದ್ದಾರೆ ಉಳಿದ ೪ ಪ್ರಶ್ನೆಗಳನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಈ ವಿಚಾರದಲ್ಲಿ ವಿಧಾನ ಮಂಡಲದ ಕಾರ್ಯದರ್ಶಿಗಳ ಗಮನಕ್ಕೂ ಬರವಣಿಗೆಯಲ್ಲಿ ಕೊಟ್ಟಿದ್ದೇನೆ. ಆದರೆ, ಅವರಿಂದ ಏನೂ ಉತ್ತರ ಬಂದಿಲ್ಲ. ನನಗನಿಸುತ್ತದೆ, ಮಾನ್ಯ ಅಧ್ಯಕ್ಷರೇ, ನಿಮ್ಮ ಮೂಗಿನಡಿಯಲ್ಲಿ ಕಾಲು ಬುಡದಲ್ಲಿಯೇ ಅದಕ್ಷತೆ ಈ ರೀತಿ ನಡೆದರೆ, ನಾವು ಕರ್ನಾಟಕ ಜನರ ಆಶಾಸೌಧವನ್ನು ಎಷ್ಟರಮಟ್ಟಿಗೆ ಕಟ್ಟುತ್ತೇವೆ ಮತ್ತು ಈಡೇರಿಸುತ್ತೇವೆ ಹೀಗಾದರೆ ಸಾಮಾಜಿಕ ನ್ಯಾಯವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಸಾರಾಯಿ ಸೇಂದಿ ಬಗ್ಗೆ ನನ್ನ ಸ್ನೇಹಿತರು ಬಹಳವಾಗಿ ಮಾತನಾಡಿದರು. ನನ್ನ ಸರ್ಕಾರ ಸೇಂದಿ ಮಾರಾಟವನ್ನು ಸಂಪೂರ್ಣವಾಗಿ ನಿಷೇಧ ಮಾಡುತ್ತೇವೆಂದು ಹೇಳಿದ್ದಾರೆ. ಕಾನೂನು ಬಾಹಿರವಾಗಿ ಸಾರಾಯಿ ಅಂಗಡಿಗಳು ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆಯಲ್ಲೂ ಇವೆ. ಲೈಸನ್ಸ್ ಇದ್ದು ನಡೆಯುವ ಅಂಗಡಿಗಳಿಗಿಂತ, ಲೈಸೆನ್ಸ್ ಇಲ್ಲದೇ ನಡೆಯುವ ಅಂಗಡಿಗಳೇ ಹೆಚ್ಚು ಇವೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಕಾನೂನು ಬಾಹಿರ ಅಂಗಡಿಗಳೇನಿವೆ ಅವುಗಳನ್ನು ತೆಗೆಸಬೇಕೆಂದು ತಮ್ಮ ಮುಖಾಂತರ, ಸದನದಲ್ಲಿ ಪ್ರಸ್ತಾಪ ಮಾಡಿ, ಸರ್ಕಾರದ ಗಮನಕ್ಕೆ ತರುತ್ತೇನೆ. ಮತ್ತೊಂದು ವಿಚಾರ ಶಿಕ್ಷಣವನ್ನು ಸುಧಾರಣೆ ಮಾಡುವುದಕ್ಕೆ ನನ್ನ ಸರ್ಕಾರ ಕಂಕಣಬದ್ಧವಾಗಿವೆ. ನನಗಾದರೂ ಅನಿಸುತ್ತದೆ, ಇವತ್ತಿನ ಶಿಕ್ಷಣ ನೀತಿಯಿಂದ ವಿದ್ಯಾವಂತ ಪದವೀಧರರು ಶಿಕ್ಷೆ ಅನುಭವಿಸುವಂತಾಗಿದೆ ಎಂದು. ನಮ್ಮ ಶಿಕ್ಷಣ ಸಮಾಜಕ್ಕೆ ವರ ಆಗಬೇಕಾಗಿತ್ತು. ಆದರೆ ಅದು ವರ ಆಗುತ್ತಿಲ್ಲ ಶಾಪ ಆಗುತ್ತಿದೆ. ಶಿಕ್ಷಣದ ಗುಣಮಟ್ಟ ಬಹಳವಾಗಿ ಕುಸಿದುಹೋಗಿದೆ. ಇವತ್ತು ಹಣವಂತರು ಖಾಸಗೀ ಶಾಲೆಗಳನ್ನು ಹುಡುಕಿಕೊಂಡು ಹೋಗಿ ತಮ್ಮ ಮಕ್ಕಳನ್ನು ಸೇರಿಸುತ್ತಾರೆ. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟ ಕಡಿಮೆಯಾಗಿ ಪಾಠಪ್ರವಚನಗಳು ಸರಿಯಾಗಿ ನಡೆಯುತ್ತಿಲ್ಲ. ನನ್ನ ಸರ್ಕಾರ ಈ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತೇನೆ. ಕಡುಬಡವ

ಯಾವುದೇ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲವೆಂದು ನನ್ನ ಸ್ನೇಹಿತರು ಹೇಳಿದರು. ವಿದ್ಯಾರ್ಥಿ ನಿಲಯಗಳಲ್ಲಿ ಬಹಳ ಜನ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಈ ಕಡು ಬಡಮಕ್ಕಳಿಗೆ ಒಂದೇ ಸಲಕ್ಕೆ ಶೇಕಡ ೩೦ ಭಾಗವನ್ನು ಹೆಚ್ಚು ಮಾಡಿರತಕ್ಕದ್ದು ಕರ್ನಾಟಕ ರಾಜ್ಯದ ಇತಿಹಾಸದಲ್ಲಿಯೇ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಸೇಂದಿ ಮಾರಾಟವನ್ನು ಸಂಪೂರ್ಣವಾಗಿ ನಿಷೇಧ ಮಾಡಿದ್ದಾರೆ. ಸೇಂದಿ ಮಾರಾಟದಿಂದ ರಾಜ್ಯದ ಬೊಕ್ಕಸಕ್ಕೆ ೬೦ ಕೋಟಿ ರೂಪಾಯಿಗಳು ಬರುತ್ತಿತ್ತು. ಕಡುಬಡವರ ಹಿತವನ್ನು ಗಮನದಲ್ಲಿಟ್ಟುಕೊಂಡು, ಸೇಂದಿ ಮಾರಾಟವನ್ನು ನಿಷೇಧ ಮಾಡಿದ್ದಾರೆ. ಹಿಂದುಳಿದ ವರ್ಗದವರ ಹಿತವನ್ನು ಗಮನದಲ್ಲಿಟ್ಟುಕೊಂಡು ಈ ನಿಷೇಧ ಮಾಡಿದ್ದಾರೆ. ಇನ್ನು ನಿರ್ಮಲ ಗ್ರಾಮ ಯೋಜನೆ ಇವತ್ತು ಶ್ರೀಮಂತರು ದೊಡ್ಡವರು ಶೌಚಾಲಯಗಳನ್ನು ಮಾಡಿಕೊಂಡಿದ್ದಾರೆ. ಆದರೆ ಕಡುಬಡವರಿಗಾಗಿ ಸರ್ಕಾರ ಹಾಕಿಕೊಂಡಿರುವ ಈ ಕಾರ್ಯಕ್ರಮ ತುಂಬಾ ಅನುಕೂಲವಾಗತಕ್ಕ ಕಾರ್ಯಕ್ರಮ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ನಾನು ಮೊದಲೇ ಹೇಳಿದಹಾಗೆ ನನ್ನ ಸರ್ಕಾರ ರೈತರಿಗೆ ನೆರವಾಗತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಮಳೆ ಬಿದ್ದಾಗ ಬಿತ್ತನೆ ಬೀಜ ಕೊಡುವುದಿಲ್ಲ. ಕರ್ನಾಟಕ ರಾಜ್ಯ ಬೀಜ ನಿಗಮ ಏನಿದೆ ಇದು ರೈತರ ಬೇಡಿಕೆ ಎಷ್ಟಿದೆ, ಅದರಲ್ಲಿ ೨೫ ಪರ್ಸೆಂಟ್ ಮಾತ್ರ ಪೂರೈಸುವುದಕ್ಕೆ ಸಾಧ್ಯ. ಸರಿಯಾಗಿ ಮಳೆ ಬಿದ್ದಾಗ ಹದ ಇದ್ದಾಗ ಸರಿಯಾದ ಬೀಜವನ್ನು ಪೂರೈಕೆ ಮಾಡದೇ ಹೋದರೆ, ಅದರ ಇಳುವರಿ ಗಣನೀಯವಾಗಿ ಕಡಿಮೆಯಾಗುತ್ತದೆ. ಆ ದಿಕ್ಕಿನಲ್ಲಿ ಬೀಜ ಗೊಬ್ಬರ ಮತ್ತು ಔಷಧಗಳನ್ನು ಸಕಾಲದಲ್ಲಿ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಸರಕಾರ ತೀವ್ರವಾಗಿ ಹಾಕಿಕೊಳ್ಳಬೇಕೆಂಬ ಮಾತನ್ನು ಹೇಳುತ್ತೇನೆ. ನಾನಾದರೂ ಪ್ರಮುಖವಾಗಿ ಹೇಳುವುದು ಇಷ್ಟೇ, ರೈತರ ಸಾಲ ಮನ್ನಾ ವಿಚಾರಕ್ಕಿಂತ, ರೈತರು ನಿರಂತರವಾಗಿ ಭ್ರಷ್ಟಾಚಾರದ ಮುಖಾಂತರ ಏನು ಶೋಷಣೆಗೆ ಒಳಗಾಗುತ್ತಿದ್ದಾರೆ ಈ ಶೋಷಣೆಯನ್ನು ದಯವಿಟ್ಟು ನಿಲ್ಲಿಸುವುದಕ್ಕೆ ಸರಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಮತ್ತೊಮ್ಮೆ ತಮ್ಮ ಮುಖಾಂತರ ಸರಕಾರವನ್ನು ಒತ್ತಾಯ ಮಾಡುತ್ತೇನೆ. ನಮ್ಮ ಸರಕಾರ ರಾಜ್ಯಪಾಲರ ಭಾಷಣದ ಮುಖಾಂತರ ಅನೇಕ ಒಳ್ಳೆಯ ಯೋಜನೆಗಳನ್ನೇನು ಹಾಕಿಕೊಂಡಿದೆ ಅದನ್ನು ಬಹಳ ಸಂತೋಷದಿಂದ ಸ್ವಾಗತ ಮಾಡುತ್ತಾ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಪುಟ್ಟಸ್ವಾಮಿ ಗೌಡ (ಕೃಷ್ಣರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ಕಳೆದ ತಿಂಗಳ ೧೫ನೇ ತಾರೀಖು ಈ ವಿಧಾನಮಂಡಲದ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದನಾ ನಿರ್ಣಯವನ್ನು ಅನುಮೋದಿಸುತ್ತಾ, ನಾನು ಸಹ ಇದಕ್ಕೆ ಮನ್ನಣೆಯನ್ನು ಅರ್ಪಿಸುತ್ತಾ, ಎರಡು ಮಾತುಗಳನ್ನು ಆಡುವುದಕ್ಕೆ ತಮ್ಮ ಅನುಮತಿಯನ್ನು ಪಡೆದುಕೊಂಡು ನಿಂತಿದ್ದೇನೆ. ಸನ್ಮಾನ್ಯ ರಾಜ್ಯಪಾಲರು ಈ ಸಭೆಯನ್ನುದ್ದೇಶಿಸಿ ಮಾತನಾಡುವ ಪ್ರಾರಂಭದಲ್ಲಿ ಸಂಸದೀಯ ಪ್ರಜಾಪ್ರಭುತ್ವದ ಸುದೀರ್ಘ ಪರಂಪರೆಯನ್ನುಳ್ಳ ಈ ತಮ್ಮಗಳ ಸಭೆಯನ್ನುದ್ದೇಶಿಸಿ ಮಾತನಾಡಲು ನನಗೆ ದೊರೆತ ಸದವಕಾಶ ನನ್ನ ಮನಸದಲ್ಲಿ ಅಚ್ಚಳಿಯದೇ ಉಳಿಯುತ್ತದೆ ಎಂಬ ಉದಾತ್ತವಾದ ಮಾತನ್ನು ಆಡುತ್ತೇನೆ ಕರ್ನಾಟಕ ರಾಜ್ಯದ ಜನತೆ ಸೌಹಾರ್ದ ಪ್ರಿಯರು, ಸ್ನೇಹ ಉಳ್ಳವರು, ಸಂಸದೀಯ ವ್ಯವಸ್ಥೆಯಲ್ಲಿ ಸಾಕಷ್ಟು ಉನ್ನತ ಪರಂಪರೆಯನ್ನು ಹೊಂದಿದವರು ಎಂದು ಏನು ಹೇಳಿದ್ದಾರೆ ಅದಕ್ಕೆ ಈ ರಾಜ್ಯದ ಜನರ ಪರ ನಾವು ಕೃತಜ್ಞತೆಯನ್ನು ಅರ್ಪಿಸುತ್ತಾ, ನಮ್ಮ ರಾಜ್ಯದಲ್ಲಿ ವಾಸಿಸುವ ಅನ್ಯಭಾಷಾ ಸಹೋದರರು ನಮ್ಮ ಸೌಹಾರ್ದವನ್ನು ಅರಿತು ನಮ್ಮೊಡನೆ ಇರುವುದಕ್ಕೆ ಹೆಚ್ಚು ಒತ್ತು ಕೊಡಬೇಕು ಎಂದು ಕೇಳುತ್ತೇನೆ. ಮುಗಿದು ಹೋದ ಗಡಿ ಸಮಸ್ಯೆಯನ್ನು ಎತ್ತದೆ ಅದರ ಬಗ್ಗೆ ಅವರು ಗಮನಹರಿಸದೇ ಈ ರಾಜ್ಯದ ಅಭಿವೃದ್ಧಿಯಲ್ಲಿ ಅವರೂ ಸಮಪಾಲುದಾರರು ಆಗಬೇಕೆಂದು ನಾನು ಅವರನ್ನು ವಿನಯ ಪೂರ್ವಕವಾಗಿ ಜನತೆಯ ಪರವಾಗಿ ಪ್ರಾರ್ಥಿಸುತ್ತೇನೆ. ಆ ಮೇಲೆ ಸರಕಾರ ನೌಕರರ ಮುಷ್ಕರದ ಬಗ್ಗೆ ಸರಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ. ಸರಕಾರಿ ನೌಕರರೂ ಕೂಡಾ ಈ ಆಡಳಿತ ವ್ಯವಸ್ಥೆಯಲ್ಲಿ ನಮ್ಮ ಸಹೋದ್ಯೋಗಿಗಳು. ಅವರಿಗೂ ಸಮಸ್ಯೆ ಇದೆ ಎಂದು ನನ್ನ ಸರಕಾರ ಭಾವಿಸಿದೆ. ಅನಿರ್ದಿಷ್ಟ ಕಾಲದ ಮುಷ್ಕರವನ್ನು ಅವರು ಸೌಹಾರ್ದಯುತವಾಗಿ ಹಿಂತೆಗೆದುಕೊಂಡಿದ್ದಾರೆ. ಮಾತುಕತೆ ಸೌಹಾರ್ದಯುತವಾಗಿ ಆಗುತ್ತಿದೆ. ಇದರ ಬಗ್ಗೆ [illegible] ಅಪಪ್ರಚಾರಕ್ಕೆ ಒತ್ತುಕೊಡದೇ, ಸರಕಾರಿ ನೌಕರರು, ನಾವು ಈ ಸರಕಾರದ ಒಂದು ಭಾಗ ಎಂದು ಭಾವಿಸಿ ಅನಿರ್ದಿಷ್ಟ ಮುಷ್ಕರಗಳನ್ನು ಅನಿರೀಕ್ಷಿತವಾಗಿ ಜಾರಿ ಮಾಡುವ ನಿಯಮಗಳನ್ನು ಮಾಡದೇ, ರಾಜ್ಯದ ಅಭಿವೃದ್ಧಿಯಲ್ಲಿ ಅವರೂ ಪಾಲುಗಾರರು ಆಗಬೇಕೆಂದು ನಾನು ಆಸೆಪಡುತ್ತೇನೆ. ಆಡಳಿತದಲ್ಲಿ ದಕ್ಷತೆಯ ಬಗ್ಗೆ ನನ್ನ ಸರಕಾರ ಸ್ಪಷ್ಟವಾದ ನಿಲುವನ್ನು ವ್ಯಕ್ತಪಡಿಸಿದೆ. ಇದರ ಬಗ್ಗೆ ಈ ಸಭೆಯಲ್ಲಿ ಹಲವಾರು ನನ್ನ ಸಹೋದರರು ಸಹೋದ್ಯೋಗಿಗಳು ಚರ್ಚೆ ಮಾಡುತ್ತಾ ಅದಕ್ಷತೆ ಮತ್ತು ಭ್ರಷ್ಟಾಚಾರದ ಬಗ್ಗೆ ಪರಸ್ಪರ ಆರೋಪ ಪ್ರತ್ಯಾರೋಪಗಳನ್ನು ಮಾಡುವುದನ್ನು ನಿಲ್ಲಿಸಿ ಈ ಸಭೆಯ ಘನೋದ್ದೇಶ ಏನಿದೆ ಆ ಉದ್ದೇಶಕ್ಕಾಗಿ ಈ ಸಭೆಯ ಕಾಲವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಳ್ಳಬೇಕೆಂದು ನಾನು ಪ್ರಾರ್ಥನೆ

ಮಾಡುತ್ತೇನೆ. ಯಾವುದಾದರೂ ಸದಸ್ಯರ ಬಗ್ಗೆ ಆರೋಪಗಳು ಇದ್ದರೆ. ಲೋಕಾಯುಕ್ತ ಇದೆ, ನ್ಯಾಯಾಲಯಗಳು ಇವೆ, ಅಲ್ಲಿ ಇದನ್ನು ಚರ್ಚೆ ಮಾಡುವಂತಹ ಅವಕಾಶವನ್ನು ಜವಾಬ್ದಾರಿಯುತವಾಗಿ ಪ್ರಸ್ತಾಪ ಮಾಡುವುದಕ್ಕೆ ಹೆಚ್ಚು ಒತ್ತುಕೊಟ್ಟು, ಈ ಸದನದಲ್ಲಿ ಅದನ್ನು ಪ್ರಸ್ತಾಪ ಮಾಡದೇ, ಈ ಸದನದ ವೇಳೆಯನ್ನು ಪರಸ್ಪರ ಆರೋಪಗಳನ್ನು ಮಾಡಿಕೊಳ್ಳುವುದಕ್ಕೆ ಉಪಯೋಗಿಸಿಕೊಳ್ಳುವುದನ್ನು ಕಡಿಮೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ನನ್ನ ಸರಕಾರ ಒಂದು ಸ್ಪಷ್ಟವಾದ ನಿಲುವನ್ನು ಹೇಳಿದೆ. ಅದಕ್ಕಾಗಿ ಪೋಲೀಸ್ ದಳವನ್ನು ಹೆಚ್ಚು ಬಲಯುತವಾಗಿ ಮಾಡಬೇಕೆಂಬ ಧೋರಣೆಯನ್ನು ಹೊಂದಿರುವುದಲ್ಲದೆ, ಪೋಲೀಸ್ ಠಾಣೆಗಳನ್ನು ಹೆಚ್ಚು ವಿಸ್ತಾರ ಮಾಡುತ್ತೇವೆ ಎಂಬ ಮಾತನ್ನಾಡಿದ್ದಾರೆ. ಪೋಲೀಸ್ ಠಾಣೆಗಳನ್ನು ವಿಸ್ತರಿಸುವಾಗ ಎಲ್ಲಿ ಹೆಚ್ಚು ಅವಶ್ಯಕತೆ ಇದೆ ಅಂತಹ ತಾಲ್ಲೂಕುಗಳಲ್ಲಿ ಅದಕ್ಕೆ ಅವಕಾಶ ಒದಗಿಸಿ ಕೊಡಬೇಕು. ಅವಶ್ಯಕತೆ ಇಲ್ಲದಿರುವ ಕಡೆ ಅವಕಾಶ ಕಡಿಮೆ ಮಾಡಿ ಹೆಚ್ಚು ಅವಶ್ಯವಿರುವ ಕಡೆ ಪೋಲೀಸ್ ಠಾಣೆಗಳನ್ನು ವ್ಯವಸ್ಥೆ ಮಾಡಬೇಕು. ಪೋಲೀಸ್ ದಳವನ್ನು ಹೆಚ್ಚು ಮಾಡಬೇಕು. ಈಗ ಹಣಕಾಸಿನ ಒಂದು ನಿರ್ಬಂಧದ ಮೇಲೆ ಕಾನೂನು ಸುವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಿಕೊಂಡು ಹೋಗುವುದಕ್ಕೆ ತೊಂದರೆಯಾಗುತ್ತಿದೆ ದಯವಿಟ್ಟು ಈ ಅಡಳಿತ ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ನಾನು ನನ್ನ ಸರಕಾರವನ್ನು ಒತ್ತಾಯ ಮಾಡುತ್ತೇನೆ.

೯-೪೫ ಎ. ಎಂ.

ಮಾನ್ಯ ಅಧ್ಯಕ್ಷರೇ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳ ಬಗ್ಗೆ ಸಾಕಷ್ಟು ಸುದೀರ್ಘವಾದ ಚರ್ಚೆಯನ್ನು ಈ ಸದನದಲ್ಲಿ ಮಾನ್ಯ ಸದಸ್ಯರು ಮಾಡಿದರು. ಕೆಲವು ಮಾನ್ಯ ಸದಸ್ಯರಿಗೆ ಒಂದು ಅನುಮಾನ ಇದೆ. ಅದೇನೆಂದರೆ ಈ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳನ್ನು ರಾಷ್ಟ್ರೀಕರಣದಿಂದ ಬಿಡುಗಡೆ ಮಾಡಿ ಖಾಸಗೀ ವಲಯಗಳಿಗೆ ಕೊಡುವ ಅವಕಾಶ ಇದೆ ಎನ್ನುವ ಒಂದು ಸಂಶಯ ಬಂದಿದೆ. ನಮ್ಮ ಸರ್ಕಾರದ ಉದ್ದೇಶ ಅದು ಅಲ್ಲ ಎನ್ನುವ ಮಾತನ್ನು ನಾನು ಹೇಳುತ್ತಾ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳು ಏನಿವೆ ಈ ಉದ್ದಿಮೆಗಳಲ್ಲಿ ಸರ್ಕಾರ ಸಾಕಷ್ಟು ಬಂಡವಾಳವನ್ನು ಹಾಕಿದೆ. ಅಲ್ಲಿಗೆ ಐ. ಎ. ಎಸ್. ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆ. ಏನೇ ವ್ಯವಸ್ಥೆಯನ್ನು ಮಾಡಿದರೂ ಕೂಡ ಈ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿ ಲಾಭ ಗಳಿಸುವುದಕ್ಕಿಂತ ನಷ್ಟವೇ ಜಾಸ್ತಿಯಾಗುತ್ತಿದೆ. ಇದಕ್ಕೆ ಕಾರಣವೇನು ? ಮೂಲತಹಃ ಇದಕ್ಕೆ ಒಂದು ಪರಿಹಾರವನ್ನು ಕಂಡು ಹಿಡಿಯಲು ಪ್ರಯತ್ನವನ್ನು ಮಾಡಬೇಕೆಂದು ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು ಕುಂಠಿತವಾದಾಗ ಸಾರ್ವಜನಿಕ ಉದ್ದಿಮೆಗಳು ಕುಂಠಿತವಾದಾಗ ಈ ಉದ್ದಿಮೆಗಳನ್ನು ಖಾಸಗೀ ವಲಯಕ್ಕೆ ವಹಿಸಿಕೊಡತಕ್ಕಂಥ ಯಾವುದೇ ನೀತಿಯನ್ನು ಸರ್ಕಾರ ತೆಗೆದುಕೊಳ್ಳಬಾರದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ ಇನ್ನು ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ ವರ್ಷಗಳಿಂದ ೫೫ ವರ್ಷಗಳಿಗೆ ಇಳಿಸಬೇಕೆನ್ನುವ ಆಲೋಚನೆಯನ್ನು ಮಾಡುತ್ತಿದ್ದೇವೆ ಎನ್ನುವ ಮಾತನ್ನು ನನ್ನ ಸರ್ಕಾರ ಹೇಳಿದೆ. ಇದರ ಬಗ್ಗೆ ಸಾಕಷ್ಟು ಅಪಪ್ರಚಾರಗಳು ಹೊರಗಡೆ ನಡೆಯುತ್ತಿವೆ. ಈ ಒಂದು ಪ್ರಚಾರ ಬಹಳ ಪ್ರಬಲವಾಗಿ ನಡೆಯುತ್ತಿದೆ. ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಕಡಿಮೆ ಮಾಡಲು ಅವರು ಮಾಡಿದ ಮುಷ್ಕರದ ಆಧಾರವನ್ನು ಅವಲಂಬಿಸಿ ಅವರಿಗೆ ಹಿಂಸೆಕೊಡುವ ರೀತಿಯಲ್ಲಿ ಸೇಡಿನ ಮನೋಭಾವನೆ ತಳೆದಿದ್ದಾರೆಂದು ಮಾತನಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ನನ್ನ ಸರ್ಕಾರದವರು ಸರ್ಕಾರಿ ನೌಕರರ ಮೇಲೆ ಯಾವುದೇ ತರಹ ಸೇಡಿನ ಕ್ರಮ ತೆಗೆದುಕೊಳ್ಳಬಾರದು. ಇವೊತ್ತು ನಮ್ಮ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆಯ ಹಿನ್ನೆಲೆಯನ್ನು ಈ ಸಂದರ್ಭದಲ್ಲಿ ಎಲ್ಲರೂ ಆಲೋಚನೆ ಮಾಡತಕ್ಕಂಥ ಸಮಯ. ಈ ನಿವೃತ್ತಿ ವಯಸ್ಸನ್ನು ಈ ಸಂದರ್ಭದಲ್ಲಿ ೫೮ ವರ್ಷಗಳಿಂದ ೫೫ ವರ್ಷಗಳಿಗೆ ಇಳಿಸುವುದು ಸೂಕ್ತವೆಂದು ಹೇಳಿದರೂ ಸಹ ಇದನ್ನು ಸರ್ಕಾರ ಪರ್ಯಾಲೋಚನೆ ಮಾಡಿ ಅವಶ್ಯಕತೆ ಇದ್ದಲ್ಲಿ ನಿವೃತ್ತಿ ವಯಸ್ಸನ್ನು ೫೫ ವರ್ಷಗಳಿಗೆ ಇಳಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ ಇನ್ನು ಭೂನ್ಯಾಯ ಮಂಡಳಿಗಳ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ಹಿಂದಿನ ಸರ್ಕಾರದವರು ಮೇಲ್ಮನವಿ ಪ್ರಾಧಿಕಾರಗಳನ್ನು ಏನು ಮಾಡಿದರು ಅದರಿಂದ ಗೇಣಿದಾರರಿಗೆ ಯಾವ ಪ್ರಯೋಜನ ಆಗಿಲ್ಲ. ನ್ಯಾಯವಾಗಿ ಹೋರಾಟ ಮಾಡತಕ್ಕಂಥ ಪ್ರಕರಣಗಳಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಈ ಅಂಶಗಳು ಬರುತ್ತವೆ. ಬಡ ಗೇಣಿದಾರನು ಕಾನೂನು ಚೌಕಟ್ಟಿನ ಹಿನ್ನೆಲೆಯಲ್ಲಿ ಈ ಪರಿಸ್ಥಿತಿ ಇರುವುದರಿಂದ ಈ ಮೇಲ್ಮನವಿ ಪ್ರಾಧಿಕಾರಗಳನ್ನು ನಮ್ಮ ಸರ್ಕಾರದವರು ರದ್ದು ಮಾಡಿ ಬಡ ಗೇಣಿದಾರರಿಗೆ ಅನುಕೂಲ ಮಾಡಿ

ಕೊಡುತ್ತಾರೆಂದು ನಾನು ಭಾವನೆ ಮಾಡುತ್ತೇನೆ. ಇನ್ನು ಕೈಗಾರಿಕೆಗಳ ಸ್ಥಾಪನೆ ಬಗ್ಗೆ ಹೇಳುವುದಾದರೆ ಕೈಗಾರಿಕೆಗಳನ್ನು ಹೆಚ್ಚು ಹೆಚ್ಚು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ. ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುತ್ತೇವೆಂದು ನನ್ನ ಸರ್ಕಾರ ಹೇಳಿದೆ. ಅದರ ಜೊತೆಗೆ ನಾವು ನಮ್ಮ ಉದ್ದಿಮೆಗಳಿಗೆ ನೆಲ ಒದಗಿಸಿಕೊಡುತ್ತೇವೆ. ಜಲ ಒದಗಿಸಿಕೊಡುತ್ತಿದ್ದೇವೆ. ವಿದ್ಯುಚ್ಛಕ್ತಿಯನ್ನು ಕನಿಷ್ಟ ದರದಲ್ಲಿ ಒದಗಿಸಿಕೊಡುತ್ತಿದ್ದೇವೆ ಈ ಎಲ್ಲಾ ಸೌಭ್ಯಗಳನ್ನು ಒದಗಿಸಿಕೊಡುವ ಸಂದರ್ಭದಲ್ಲಿ ಈ ಉದ್ದಿಮೆಗಳಲ್ಲಿ ಉದ್ಯೋಗಾವಕಾಶವನ್ನು ಒದಗಿಸಿಕೊಡುವಂತಹ ಅವಕಾಶಗಳಲ್ಲಿ ಕನ್ನಡದವರಿಗೆ ಹೆಚ್ಚು ಪ್ರಾತಿನಿಧ್ಯ ಸಿಗಬೇಕೆನ್ನುವ ಒಂದು ಷರತ್ತು ಅವರ ಉಪ ನಿಯಮಾವಳಿಗಳಲ್ಲಿ ಅನುಕರಣೆ ಮಾಡಬೇಕೆಂದು ನಾನು ತಮ್ಮ ಮೂಲಕ ನನ್ನ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ವಿದ್ಯುತ್ ಅಭಾವದ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ಇದರ ಬಗ್ಗೆ ನಮ್ಮ ಸರ್ಕಾರದವರು ಒಂದು ದೃಢ ನಿಲುವು ತೆಗೆದುಕೊಂಡಿದ್ದಾರೆ. ನೀರಾವರಿ ಭಾವಿಗಳನ್ನು ಅವಲಂಬಿಸಿರತಕ್ಕಂಥ ರೈತರು ಬಹಳ ಕಷ್ಟವನ್ನು ಅನುಭವಿಸುತ್ತಿದ್ದಾರೆ, ಅವರ ಬವಣೆ ನೀಗಲು ವಿದ್ಯುತ್ ಕಡಿತವನ್ನು ಕಡಿಮೆ ಮಾಡಿ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಬೇಕು. ರೈತರಿಗೆ ಸಾಲ ಮಾಡಿ ಭಾವಿ ಮಾಡಿ ಪಂಪ್‌ಸೆಟ್ ಇಟ್ಟುಕೊಂಡು ವಿದ್ಯುತ್ ಇಲ್ಲದೆ ತೊಂದರೆಯಾಗುತ್ತದೆ ರೈತರ ತೊಂದರೆಯನ್ನು ಪರಿಹಾರ ಮಾಡುವುದಕ್ಕೆ ವಿದ್ಯುಚ್ಛಕ್ತಿಯನ್ನು ಆದಷ್ಟು ಬೇಗ ಒದಗಿಸಿ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ನೀರಾವರಿಗೆ ನನ್ನ ಸರ್ಕಾರ ಹೆಚ್ಚು ಆದ್ಯತೆಯನ್ನು ಕೊಟ್ಟಿದೆ. ಈ ಸಾಲಿನಲ್ಲಿ ವಿದ್ಯುತ್ ಮತ್ತು ನೀರಾವರಿಗೆ ಕೊಟ್ಟಷ್ಟು ಹಣವನ್ನು ಹಿಂದೆ ಯಾವ ಸರ್ಕಾರವು ಕೊಟ್ಟಿರಲಿಲ್ಲ, ಈ ಮಾತನ್ನು ನಾನು ಹೆಮ್ಮೆಯಿಂದ ಹೇಳುತ್ತೇನೆ. ನಮ್ಮ ಸರ್ಕಾರ ನೀರಾವರಿಗೆ ಆದ್ಯತೆ ಕೊಟ್ಟಿದ್ದಾರೆ. ಆ ಹಣ ಸಂಪೂರ್ಣವಾಗಿ ವಿನಿಯೋಗ ಮಾಡಬೇಕು. ಜೊತೆಗೆ ಆದಷ್ಟು ಬೇಗ ಉತ್ಪತ್ತಿ ಬರುವ ರೀತಿಯಲ್ಲಿ ನಮ್ಮ ಯೋಜನೆಗಳನ್ನು ಅಳವಡಿಸಿಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈ ನೀರಾವರಿ ಜೊತೆಗೆ ಸಣ್ಣ ನೀರಾವರಿ ಮತ್ತು ಅಂತರ್ಜಲ ನೀರಾವರಿಯನ್ನು ಉಪಯೋಗಿಸಿಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ, ನನ್ನ ಸರ್ಕಾರ ಸಹ ಹೇಳಿದೆ. ಅಂತರ ಜಲ ನೀರಾವರಿ ಮತ್ತು ಸಣ್ಣ ಸಣ್ಣ ನೀರಾವರಿಗೆ ಸಂಬಂಧಪಟ್ಟ ಹಾಗೆ ಲಕ್ಷಾಂತರ ಕೆರೆಗಳು ಇವತ್ತು ಪ್ರಯೋಜನಕ್ಕೆ ಬರದ ರೀತಿಯಲ್ಲಿ ಇವೆ. ಈ ಕೆರೆಗಳ ನಾಲೆ ದುರಸ್ತಿ ಮಾಡಬೇಕಾಗಿದ್ದು ಇದೆ. ಕೆರೆಗಳಲ್ಲಿ ಹೂಳು ಎತ್ತುವ ಕೆಲಸವನ್ನು ಪ್ರಯೋಜನಕಾರಿಯಾಗಿ ಮಾಡುತ್ತೇವೆಂದು ಸನ್ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವಂಥ ಒಂದು ಸಂದರ್ಭದಲ್ಲಿ ಹಳೆಯ ಕೆರೆಗಳ ಹೂಳು ಎತ್ತುವ ಕಾರ್ಯ ಬಹಳ ದುಬಾರಿಯಾಗುತ್ತದೆ ಮತ್ತು ನಷ್ಟವಾಗುತ್ತದೆಂದು ಹೇಳಿದ್ದಾರೆ, ಮಾನ್ಯ ಮಂತ್ರಿಯವರು ಹೇಳಿರುವ ಮಾತಿಗೂ ರಾಜ್ಯಪಾಲರು ಹೇಳಿರುವ ಮಾತಿಗೂ ವಿರೋಧಾಭಾಸವಾಗಿ ಕಾಣುತ್ತದೆ. ಕೆರೆಗಳಲ್ಲಿ ಹೂಳು ಎತ್ತುವ ಕೆಲಸವನ್ನು ಪ್ರಾರಂಭಿಸಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ ಇರತಕ್ಕಂಥ ಕೆರೆಗಳಲ್ಲಿ ಹೂಳು ಎತ್ತಿ ಸುವ್ಯವಸ್ಥಿತ ರೀತಿಯಲ್ಲಿ ಇಟ್ಟು ಅದರಿಂದ ಸಣ್ಣ ನೀರಾವರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ನ್ಯಾಯ ಬೆಲೆ ಅಂಗಡಿಗಳ ಬಗ್ಗೆ ಹೇಳುವುದಾದರೆ, ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯುತ್ತೇವೆಂದು ಸನ್ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದಾರೆ. ನ್ಯಾಯಬೆಲೆ ಅಂಗಡಿಗಳ ಬಗ್ಗೆ ನನಗಂತೂ ಸದ್ಭಾವನೆ ಇಲ್ಲ. ನ್ಯಾಯ ಬೆಲೆ ಅಂಗಡಿಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಬಡ ಜನರಿಗೆ ಯಾವರೀತಿಯ ಪ್ರಯೋಜನ ದೊರಕಬೇಕೋ ಆ ರೀತಿ ದೊರಕುತ್ತಿಲ್ಲ. ಇನ್ನು ಮುಂದೆ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯುವ ಬದಲು ಈಗಿರುವ ಗ್ರಾಮಾಂತರ ಸೇವಾ ಸಹಕಾರ ಸಂಘಗಳ ಮೂಲಕ ಅವಶ್ಯಕ ಪದಾರ್ಥಗಳನ್ನು ಬಡ ಜನರಿಗೆ ಹಂಚುವಂಥ ವ್ಯವಸ್ಥೆ ಮಾಡಬೇಕು. ಸೇವಾ ಸಹಕಾರ ಸಂಘಗಳ ಮೂಲಕ ಆಹಾರ ಧಾನ್ಯಗಳನ್ನು ಬಡ ಜನರಿಗೆ ವಿತರಣೆ ಮಾಡುವುದರಿಂದ ಬಹಳ ಜನರಿಗೆ ಅನುಕೂಲವಾಗುತ್ತದೆ. ನಂತರ, ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನು ಮುಂದೆ ಶಾಲಾ ಕಟ್ಟಡಗಳ ಪರಿಸ್ಥಿತಿಯನ್ನು ಉತ್ತಮ ಪಡಿಸುತ್ತೇವೆ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗಳನ್ನು ತೆರೆಯುತ್ತೇವೆಂದು ಹೇಳಲಾಗಿದೆ. ಇವತ್ತಿನ ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಈಗಾಗಲೇ ಇರುವ ಶಾಲೆಗಳಿಗೆ ಸರಿಯಾದ ಕಟ್ಟಡದ ವ್ಯವಸ್ಥೆ ಇಲ್ಲ, ಅಗತ್ಯಕ್ಕೆ ತಕ್ಕಂತೆ ಉಪಾಧ್ಯಾಯರುಗಳ ಸಂಖ್ಯೆ ಇಲ್ಲ, ಪೀಠೋಪಕರಣಗಳು ಇಲ್ಲ. ಈ ರೀತಿಯ ಸಮಸ್ಯೆಗಳನ್ನು ಹೋಗಲಾಡಿಸುವುದಕ್ಕೆ ನಿಜವಾದ ಕಳಕಳಿ ನಮ್ಮ ಸರ್ಕಾರಕ್ಕೆ ಇದೆಯೆಂದು ಭಾವಿಸಿ ಆದ್ಯತೆ ಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಶಾಲೆಗಳ ಕೊರತೆಯನ್ನು ಮತ್ತು ಉಪಾಧ್ಯಾಯರುಗಳ ಕೊರತೆಯನ್ನು ನೀಗಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅದೂ ಅಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೌಢ ಶಾಲೆಗಳ ಬಹಳಷ್ಟು ಕಡಿಮೆ ಇವೆ. ಕಾಲೇಜುಗಳ ಸಂಖ್ಯೆಗಳೂ ಸಹ ಕಡಿಮೆ

ಇವೆ. ಜನತಾ ಸರ್ಕಾರ ಆಳ್ವಿಕೆಯಲ್ಲಿ ಇದ್ದಾಗ ಅವರ ಪಕ್ಷದವರು ಕೇಳಿದ ಕಡೆಗಳಲ್ಲಿ ವಿದ್ಯಾರ್ಥಿಗಳಲ್ಲಿ ಸಂಖ್ಯೆ ಕಡಿಮೆ ಇದ್ದರೂ ಸಹ ಪ್ರೌಢ ಶಾಲೆಗಳನ್ನು ಕಾಲೇಜುಗಳನ್ನು ಮಂಜೂರು ಮಾಡಿದರು. ಅಂಥಾ ಕಡೆ ವಿದ್ಯಾರ್ಥಿಗಳು ಕಡಿಮೆ ಇರುವುದರಿಂದ ಆ ಶಾಲಾ ಕಾಲೇಜುಗಳು ಮುಚ್ಚುವಂಥ ಪರಿಸ್ಥಿತಿಯಲ್ಲಿವೆ. ಯಾವ ಯಾವ ಶಾಲಾ ಕಾಲೇಜುಗಳಲ್ಲಿ ಹುಡುಗರ ಸಂಖ್ಯೆ ಕಡಿಮೆ ಇದೆ ಎಂಬುದನ್ನು ಪತ್ತೆ ಹಚ್ಚಿ ಅಂಥಾ ಶಾಲಾ ಕಾಲೇಜುಗಳನ್ನು ಕಿತ್ತು ಹಾಕಿ ಅವಶ್ಯಕತೆ ಇರುವಂಥ ಕಡೆಗೆ ಅವುಗಳನ್ನು ಒದಗಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ರಾಜ್ಯಪಾಲರ ಭಾಷಣದಲ್ಲಿ ನಿರ್ಮಲ ಗ್ರಾಮ ಯೋಜನೆಯನ್ನು ನಮ್ಮ ಸರ್ಕಾರ ಮುಂದಿಟ್ಟಿದೆ. ಆ ಬಗ್ಗೆ ನಮ್ಮ ಸದನದ ಸದಸ್ಯರು ಬಹಳ ಕಳಕಳಿಯಿಂದ ಗ್ರಾಮಾಂತರ ಪ್ರದೇಶಗಳಲ್ಲಿರುವ ಸಮಸ್ಯೆಗಳಿಗೆ ಆದ್ಯತೆ ಕೊಡಬೇಕೆಂದು ಹೇಳಿದ್ದಾರೆ. ಈ ನಿರ್ಮಲ ಗ್ರಾಮ ಯೋಜನೆಗೆ ನಾನು ವಿರೋಧಿಯಲ್ಲ. ನಿರ್ಮಲ ಯೋಜನೆ ಮೂಲಕ ಮಾಡಲಾಗುವ ಪಾಯಿಖಾನೆ, ಕಕ್ಕಸುಗಳ ವ್ಯವಸ್ಥೆಯನ್ನು ಏನು ಮಾಡುತ್ತೀರೋ ಅದಕ್ಕೆ ಸೂಕ್ತವಾಗಿ ನೀರಿನ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಸರಿಯಾದ ನೀರಿನ ವ್ಯವಸ್ಥೆ ಮಾಡದೇ ಹೋದರೆ ರೋಗರುಜಿನಗಳು ಹರಡುವುದಕ್ಕೆ ಕಾರಣೀ ಭೂತವಾಗುತ್ತದೆ. ನಗರ ಪ್ರದೇಶಗಳಲ್ಲೇ ಸಾಕಷ್ಟು ನೀರಿನ ವ್ಯವಸ್ಥೆ ಹಾಗೂ ಸ್ವಚ್ಛ ಮಾಡುವ ಸಿಬ್ಬಂದಿ ವ್ಯವಸ್ಥೆ ಇದ್ದರೂ ಕೂಡಾ ನಾವು ಸಾರ್ವಜನಿಕ ಶೌಚಾಲಯಗಳ ಮುಂದೆ ಹೋಗಬೇಕಾದರೆ ಮೂಗು ಬಾಯಿ ಮುಚ್ಚಿಕೊಂಡು ಹೋಗಬೇಕಾದ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಇಲ್ಲಿ ಹೀಗಿರುವಾಗ ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಿದರೆ ಬಹಳ ಕಷ್ಟವಾಗುತ್ತದೆ. ಶೌಚಾಲಯಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಾಣ ಮಾಡಿದರೆ ನೀರಿನ ಸೌಕರ್ಯ ವ್ಯವಸ್ಥಿತವಾಗಿರುವಂತೆ ನೋಡಿಕೊಳ್ಳಬೇಕು ಎನ್ನತಕ್ಕ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಹಾಗೆಯೇ ಆಡಳಿತ ಭಾಷೆಯ ಬಗ್ಗೆ ನಮ್ಮ ಸರ್ಕಾರ ಸ್ಪಷ್ಟ ನಿಲುವನ್ನು ತಾಳಿದೆ, ಕನ್ನಡ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲಾಗುತ್ತದೆಂದು ಘೋಷಣೆ ಮಾಡಿ ಕನ್ನಡ ಜನತೆಯ ಅಭಿಮಾನಕ್ಕೆ ಸರ್ಕಾರ ಪಾತ್ರವಾಗಿದೆ. ಆಡಳಿತ ಭಾಷೆ ಕನ್ನಡವಾಗಿರುವುದರಿಂದ ಕನ್ನಡವನ್ನು ಹೆಚ್ಚು ಉಪಯೋಗಿಸಬೇಕೆಂದು ಬರೀ ಬಾಯಿ ಮಾತಿನಲ್ಲಿ ಪ್ರಚಾರ ಮಾಡದೆ ಎಲ್ಲಾ ಹಂತದಲ್ಲೂ ಕನ್ನಡವನ್ನು ಆಚರಣೆಗೆ ತರಬೇಕು.

ನಮ್ಮ ರಾಜ್ಯದ ಆಡಳಿತ ಭಾಷೆಯ ಬಗ್ಗೆ ಉದಾಸೀನತೆಯು ಸರ್ವಥಾ ಸಲ್ಲದು. ಈ ದಿಸೆಯಲ್ಲಿ ಯಾವ ಅಧಿಕಾರಿ ವಿರುದ್ಧವಾಗಿ ಉತ್ಪ್ರೇಕ್ಷೆಯನ್ನು ಮಾಡುತ್ತಾನೆಯೋ ಅಂಥವನ ಬಗ್ಗೆ ಸರಕಾರದವರು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹಿಂಜರಿಯಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಾವು ರಾಜ್ಯಪಾಲರ ಭಾಷಣದಲ್ಲಿ, ಆಯವ್ಯಯದಲ್ಲಿ ಹಲವಾರು ಯೋಜನೆಗಳನ್ನು ಒಂದು ವರ್ಷದ ಮಟ್ಟಿಗೆ ಮಾತ್ರ ಇಟ್ಟುಕೊಂಡಿರುವುದು ಸಂಪ್ರದಾಯವಾಗಿದೆ. ಈ ಅವಧಿಯಲ್ಲಿ ಇದು ಕೇವಲ ಭಾಷಣ ಮತ್ತು ಚರ್ಚೆಯ ವಿಚಾರವಾಗಿ ಆಗದೆ ಹಾಕಿಕೊಂಡ ಯೋಜನೆಗಳೆಲ್ಲವೂ ಕಾರ್ಯರೂಪಕ್ಕೆ ಬರುವಂತೆ ನೋಡಿಕೊಳ್ಳಬೇಕು. ಜನರು ಐದು ವರ್ಷಗಳ ಅವಧಿಯಲ್ಲಿ ಸರಕಾರದ ಕಾರ್ಯನಿರ್ವಹಣೆಯನ್ನು ಜಾಗ್ರತೆಯಿಂದ ನಿರೀಕ್ಷಿಸುತ್ತಾರೆ. ಅವರು ಒಂದೇ ಆಡಳಿತದಲ್ಲಿ ಸುಗಮವಾದ ಆಡಳಿತವನ್ನು ಬಯಸುವಂತೆ ಆಗಬೇಕಾದರೆ ಅವರಿಗೆ ನಾವು ಹಾಕಿಕೊಂಡ ಕಾರ್ಯಕ್ರಮಗಳನ್ನು ಜಾರಿಯಲ್ಲಿ ತಂದು ತೋರಿಸಬೇಕಾಗುತ್ತದೆ. ಪ್ರತಿ ವರ್ಷದಲ್ಲಿಯೂ ನಾವು ಹಾಕಿಕೊಳ್ಳುವ ಕಾರ್ಯಕ್ರಮಗಳನ್ನು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ಅದರ ಪ್ರಯೋಜನವು ಜನರಿಗೆ ಸೂಕ್ತ ಪ್ರಮಾಣದಲ್ಲಿ ತಲುಪುವಂತೆ ನೋಡಿಕೊಳ್ಳಬೇಕಾಗುತ್ತದೆ. ಅದು ಜನರು ಯಾವುದೇ ಸರಕಾರದಿಂದ ಅಪೇಕ್ಷೆ ಮಾಡುವ ವಿಚಾರ ಎಂಬುದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ಸರಕಾರವು ಜನರ ಸೇವೆ ಮಾಡುವುದಕ್ಕೆ ತನ್ನ ಪಕ್ಷದ ಪ್ರಣಾಳಿಕೆಯಲ್ಲಿ ಹಾಕಿಕೊಂಡು ಜನರ ಮುಂದಿಟ್ಟ ಕಾರ್ಯಕ್ರಮಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಬೇಕು. ಹಾಗೆ ಕಾರ್ಯನಿರ್ವಹಿಸಿ ಅದು ಜನತೆಗೆ ತಲುಪಿದಾಗ ಅವರಿಗೆ ತೃಪ್ತಿ ಉಂಟಾಗುತ್ತದೆ. ಆ ಒಂದು ತೃಪ್ತಿ ಭಾವನೆಯನ್ನು ಮತದಾರರಲ್ಲಿ ಉಂಟು ಮಾಡಬೇಕಾಗಿದೆ. ಇಷ್ಟನ್ನು ಹೇಳಿ ನನಗೆ ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸನ್ಮಾನ್ಯ ಅಧ್ಯಕ್ಷರೆ, ಇವೊತ್ತು ಬಹುತೇಕ ಪ್ರೇಕ್ಷಕರಿಗೆ ಪ್ರೇಕ್ಷಕರ ಗ್ಯಾಲರಿಗೆ ಬಿಡುತ್ತಾ ಇಲ್ಲ ಎಂಬು ತಿಳಿದು ಬಂದಿದೆ. ಇದಕ್ಕೆ ಕಾರಣ ಏನು ಎಂದು ಗೊತ್ತಿಲ್ಲ. ಇವೊತ್ತು ಅಧಿವೇಶನದ ಕೊನೆಯ ದಿವಸವಾಗಿದೆ, ಗ್ರಾಮಾಂತರ ಪ್ರದೇಶಗಳಿಂದ ವಿಧಾನಸಭೆಯ

ಕಾರ್ಯಕಲಾಪಗಳನ್ನು ವೀಕ್ಷಿಸಲು ಸಾರ್ವಜನಿಕರು ಬಂದಿರುತ್ತಾರೆ. ದಯಮಾಡಿ ಅವರಿಗೆ ಸೂಕ್ತ ರೀತಿಯ ಪ್ರವೇಶಾವಕಾಶವನ್ನು ದೊರಕಿಸಿ ಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಸನ್ಮಾನ್ಯ ಅಧ್ಯಕ್ಷರೆ. ರಾಜ್ಯದ ಜನತೆ ವಿಧಾನಸಭೆಯ ಕಲಾಪಗಳನ್ನು ವೀಕ್ಷಿಸಲು ಅಪೇಕ್ಷೆ ಪಟ್ಟು ಬಂದಿದ್ದಾರೆ. ಅವರಿಗೆ ಪ್ರವೇಶವನ್ನು ಯೋಗ್ಯ ರೀತಿಯಲ್ಲಿ ಕೊಡಿಸಬೇಕು. ಪಾಸ್ ಇದ್ದವರಿಗೂ ಮುದ್ರೆ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದಾರೆ ಎಂದು ತಿಳಿದು ಬಂದಿದೆ, ದಯವಿಟ್ಟು ಸಾರ್ವಜನಿಕರಿಗೆ ಪ್ರವೇಶಾವಕಾಶವನ್ನು ಒದಗಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಯಿತು ಆ ಬಗ್ಗೆ ಪರಿಶೀಲಿಸುತ್ತೇನೆ.

† ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಸನ್ಮಾನ್ಯ ಸಭಾಧ್ಯಕ್ಷರೆ. ಸನ್ಮಾನ್ಯ ರಾಜ್ಯಪಾಲರು ವಿಧಾನ ಮಂಡಲದಲ್ಲಿ ಮಾಡಿದಂಥ ಭಾಷಣಕ್ಕೆ ವಂದನಾ ನಿರ್ಣಯವನ್ನು ಅರ್ಪಿಸುವ ಪ್ರಸ್ತಾಪವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ನಮ್ಮ ವಿರೋಧ ಪಕ್ಷದ ಮಿತ್ರರು ಇಲ್ಲಿ ಶಾಸಕರಾಗಿ ಬಂದು ಪ್ರಮಾಣ ವಚನವನ್ನು ತೆಗೆದುಕೊಂಡ ಮಾರುದಿವಸದಲ್ಲಿ ಸರಕಾರದ ನೀತಿ ಮತ್ತು ಅದರ ಕಾರ್ಯಕ್ರಮಗಳ ಬಗ್ಗೆ ಇಲ್ಲಿ ಒತ್ತಡವನ್ನು ತರುತ್ತಾರೆ. ನಾನು ಕೂಡ ಈ ಸದನದಲ್ಲಿ ಕಳೆದ ೫ ವರ್ಷಗಳಲ್ಲಿ ಶಾಸಕನಾಗಿ ವಿರೋಧ ಪಕ್ಷದಲ್ಲಿ ಕುಳಿತು ಬೇರೆ ಬೇರೆ ವಿಷಯಗಳ ಕುರಿತು, ಜನಸಾಮಾನ್ಯರ ಸಮಸ್ಯೆಗಳ ಕುರಿತು ಜನಸಾಮಾನ್ಯರಿಗೆ ಅನುಕೂಲವಾಗುವಂಥ ವಿಷಯಗಳ ಬಗ್ಗೆ, ಆ ಮಟ್ಟದಲ್ಲಿ ಅವರ ಸಮಸ್ಯೆಗಳನ್ನು ಬಗೆಹರಿಸುವಂಥ ಕಾರ್ಯಕ್ರಮದ ಬಗ್ಗೆ ಎಷ್ಟು ಒತ್ತಡವನ್ನು ತಂದಿದ್ದರೂ ಕೂಡ ಹಿಂದಿನ ಸರಕಾರದ ಆಡಳಿತದಲ್ಲಿ ಯಾವುದೂ ಒಂದು ಪರಿಹಾರವನ್ನು ಕಾಣದೆ, ಸಮಸ್ಯೆಗಳು ಸಮಸ್ಯೆಗಳಾಗಿ ಉಳಿದುವು. ಯಾವುದೇ ಮಟ್ಟದಲ್ಲಿ ಅವುಗಳು ತೀರ್ಮಾನವಾಗಿಲ್ಲ. ಇಂದು ನಮ್ಮ ಹೊಸ ಸರಕಾರ ಕರ್ನಾಟಕ ರಾಜ್ಯದ ಜನತೆಗೆ ಒಂದು ಹೊಸ ನೀತಿಯನ್ನು, ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದನ್ನು ಸನ್ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ಹಾಗೂ ಬಜೆಟ್ ಮುಖಾಂತರ ಜನತೆಯ ಮುಂದೆ ಅವರಿಗೆ ಅನುಕೂಲವಾಗುವಂಥ ಕಾರ್ಯಕ್ರಮಗಳೊಂದಿಗೆ ಅವರ ಮುಂದಿಟ್ಟಿದ್ದಾರೆ. ಹಿಂದಿನ ಸರಕಾರದ ಅವಧಿಯಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿಯು ಯಾವ ಮಟ್ಟಕ್ಕೆ ಬಂದು ತಲುಪಿತ್ತು ಎಂಬ ವಿಚಾರವನ್ನು ನಾವೆಲ್ಲರೂ ಅನುಭವದ ಮೂಲಕ ಕಂಡುಕೊಂಡಿದ್ದೇವೆ. ಜಿಲ್ಲಾ ಪರಿಷತ್‌ಗಳಲ್ಲಿ ೮ ರೂಪಾಯಿಗಳ ಒಂದು ಚೆಕ್ ಕೂಡ ಖಜಾನೆಯು ಡ್ರಾ ಆಗದಿರುವಂಥ ಸನ್ನಿವೇಶ ನಿರ್ಮಾಣವಾಗಿತ್ತು. ಅಲ್ಲಿಯವರೆಗೆ ನಮ್ಮ ಆರ್ಥಿಕ ಸ್ಥಿತಿಯನ್ನು ಕುಂಠಿತಾವಸ್ಥೆಗೆ ತಂದು ಬಿಟ್ಟಿದ್ದರು. ವಿಧವಾ ಮಾಸಾಶನ ಮತ್ತು ಇತರ ಮಾಸಾಶನಗಳು ಪಾವತಿಯಾಗದೇ ಇರತಕ್ಕಂಥ ಒಂದು ಆರ್ಥಿಕ ಮುಗ್ಗಟ್ಟು ಇತ್ತು. ಅಂದಿನ ಆಡಳಿತದಲ್ಲಿ ಯಾವ ರೀತಿಯಲ್ಲಿ ಭ್ರಷ್ಟಾಚಾರವು ತಾಂಡವವಾಡುತ್ತಿತ್ತು ಎನ್ನುವ ಬಗ್ಗೆ ನಾವು ಇಲ್ಲಿ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹಿಂದಿನ ಸರಕಾರದವರು ಹಾಕಿಕೊಂಡು ಈ ಸಭೆಯಲ್ಲಿ ಮಂಡಿಸಿದ ನಾಲ್ಕು ರಾಜ್ಯಪಾಲರ ಭಾಷಣಗಳನ್ನು, ಬಜೆಟ್ ಭಾಷಣವನ್ನು ನಾನು ವಿರೋಧ ಪಕ್ಷದ ಸದಸ್ಯನಾಗಿ ಅನುಭವಕ್ಕೆ ತಂದುಕೊಂಡಿದ್ದೇನೆ. ಆದರೆ ಅವರ ಕಾರ್ಯಕ್ರಮಗಳಿಗಿಂತಲೂ ಹೆಚ್ಚಿಗೆ ಅವುಗಳಲ್ಲಿ ಕೇಂದ್ರ ಸರಕಾರದ ಮೇಲೆ ಗೂಬೆ ಕೂರಿಸುವಂಥ ಕೆಲಸಕಾರ್ಯಗಳು ಇದ್ದುದನ್ನು, ಮತ್ತು ಆ ಒಂದು ಕಾರ್ಯಕ್ರಮ ನಡೆಯುತ್ತ ಇದ್ದುದನ್ನು ನೋಡಿದ್ದೇನೆ.

ನಾವು ಮೊನ್ನೆ ತಾನೇ ರಾಜ್ಯಪಾಲರು ಮಾಡಿದಂಥ ಭಾಷಣವನ್ನು ತೆಗೆದು ನೋಡಿದರೆ ಕೇಂದ್ರ ಸರ್ಕಾರವನ್ನು ದೂಷಣೆ ಮಾಡುವುದನ್ನಾಗಲೀ ಅಥವಾ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಯಾವುದೇ ಒಂದು ಶಬ್ದ ಕೂಡ ಇದರಲ್ಲಿ ಕಾಣುತ್ತಿಲ್ಲ. ನಮ್ಮ ಕಾರ್ಯಕ್ರಮಗಳನ್ನು ಸ್ಪಷ್ಟವಾಗಿ ರಾಜ್ಯಪಾಲರ ಭಾಷಣದಲ್ಲಿ ಅಳವಡಿಸಿದ್ದೇವೆ. ಆದರೆ ಹಿಂದಿನ ಸರ್ಕಾರವು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಹಲವಾರು ಆಕರ್ಷಕ ಶಬ್ದಗಳ ಮೂಲಕ ಮೌಲ್ಯಾಧಾರಿತ ಸರ್ಕಾರವೆಂದು ಒಂದು ಕಡೆ ಘೋಷಣೆ ಮಾಡಿದರು. ನಿಜವಾಗಲೂ ಮೌಲ್ಯಾಧಾರಿತವಾಗಿಯೇ ಪ್ರತಿ ಕೆಲಸಗಳೂ ನಡೆಯುತ್ತ, ಬೇರೆ ಬೇರೆ ರೀತಿಯಲ್ಲಿ ಕ್ಯಾಪಿಟೇಷನ್ ಶುಲ್ಕ ರದ್ದು ಮಾಡುತ್ತೇವೆಂದು ಒಂದು ಕಡೆ ಘೋಷಣೆ ಮಾಡಿದರು, ಮನೆಗೊಂದು ಉದ್ಯೋಗ ಕೊಡುತ್ತೇವೆಂದು ಹೇಳಿದರು. ಇವೆಲ್ಲಾ ಬರೀ ಘೋಷಣೆಯಾಗುಳಿದವೇ ಹೊರತು ಯಾವುದೇ ಕಾರ್ಯಕ್ರಮ ಅನುಷ್ಠಾನಕ್ಕೆ ಬರಲಿಲ್ಲ. ಅವರು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ನಾವು ವಿಧಾನಸೌಧದ ಹೊರಗಡೆ ಇದ್ದಂಥ ಬೇಲಿ ತೆಗೆಸಿ ಸಾರ್ವಜನಿಕರಿಗೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿಸುವುದಕ್ಕೆ ಅನುವು ಮಾಡಿಕೊಡುತ್ತೇವೆಂದು ಹೇಳಿದರು. ಆದರೆ ಒಮ್ಮೆ ವಿಧಾನಸಭೆ ನಡೆಯುವಾಗ ನೌಕರರು ಮುಷ್ಕರ ನಡೆಸುವಾಗ ಸುತ್ತಮುತ್ತ ಪೋಲೀಸರನ್ನು ಇಟ್ಟುಕೊಂಡಿದ್ದರು.

ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷದವರು ಸರ್ಕಾರಕ್ಕೆ ಸಹಕಾರ ಕೊಡಬೇಕಾಗುತ್ತದೆ. ಆದರೆ ನನ್ನ ಅಭಿಪ್ರಾಯದ ಮಟ್ಟಿಗೆ ವಿರೋಧಪಕ್ಷಗಳು ರಾಜಕೀಯ ಪಿತೂರಿ ಮೂಲಕ ಕೆಲಸ ಮಾಡುತ್ತಿವೆ; ಮೊನ್ನೆ ಸಾಲ ಮನ್ನಾ ಮಾಡುವ ಬೇಡಿಕೆ ಬಗ್ಗೆ ನಾವು ಪ್ರಮಾಣ ವಚನ ಮಾಡಿದ ಮರುದಿವಸವೇ ಸಾಲ ಮನ್ನಾಕ್ಕಾಗಿ ಧರಣಿ ನಡೆಯಿತು. ವಿಚಾರ ಏನೆಂದರೆ ರೈತರು ಸಾಲ ಮನ್ನಾ ಆಗುತ್ತದೆ ಎಂಬ ಭರವಸೆಯಲ್ಲಿ, ಸಾಲ ವಾಪಸ್ ಕೊಡುವಂಥ ಪರಿಸ್ಥಿತಿಯಲ್ಲಿಲ್ಲ. ನಿಜವಾಗಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಳ್ಳೆಯ ರೀತಿಯಲ್ಲಿ ಕೆಲಸ ನಡೆದಿದೆ. ೫ ಪರ್ಸೆಂಟ್ ೧೦ ಪರ್ಸೆಂಟ್ ಕೂಡ ಸಾಲ ವಾಪಸ್ ಮಾಡುವ ಅವಕಾಶವಾಗಿಲ್ಲ ರೈತರಿಗೆ ಕೃಷಿಗೋಸ್ಕರ ನಬಾರ್ಡಿನಿಂದ ಮತ್ತೆ ಸಾಲ ಬಂದ ಸಂದರ್ಭ ಇದೆ. ಈ ರೀತಿಯ ಸಂಕಷ್ಟಕ್ಕೆ ರೈತರನ್ನು ತಪ್ಪು ಅಭಿಪ್ರಾಯದಿಂದ ಸಿಕ್ಕಿಸಿ ಅವರಿಗೆ ಸಿಗುವ ಸವಲತ್ತನು ಸಿಗದಂತೆ ಮಾಡುವ ಪಿತೂರಿ ರಾಜ್ಯದಲ್ಲಿ ನಡೆಯುತ್ತಿದೆ. ಸರ್ಕಾರ ರಚಿಸಿದ ಮೇಲೆ ನಾವು ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಇಟ್ಟುಕೊಂಡು ಚುನಾವಣೆ ಮಾಡುತ್ತೇವೆಂದು ನಗರಪಾಲಿಕೆ ಮತ್ತು ಮುನಿಸಿಪಾಲಿಟಿಗಳಿಗೆ ಘೋಷಣೆ ಮಾಡಿದ್ದೆವು. ಅದರಲ್ಲಿ ಸರ್ಕಾರೀ ನೌಕರರ ಪಾತ್ರ ಪ್ರಾಮುಖ್ಯವಾದುದು. ಯಾವುದೋ ಕಾರಣಕ್ಕಾಗಿ ಸರ್ಕಾರೀ ನೌಕರರನ್ನು ಮುಷ್ಕರಕ್ಕಾಗಿ ಪ್ರಚೋದಿಸಿ ಚುನಾವಣೆ ಕೆಲಸ ನಿಲ್ಲಿಸಲಾಯಿತು. ಇದರಲ್ಲೂ ರಾಜಕೀಯ ಪಿತೂರಿ ನಡೆದಿದೆ. ಈ ಬಗ್ಗೆ ಸಮಗ್ರ ಶಾಸನವನ್ನು ಮಾಡುವ ಸರ್ಕಾರದ ಪ್ರಯತ್ನ ಅಂತಿಮ ಹಂತದಲ್ಲಿದೆ. ಚುನಾವಣೆ ಕಾಲದಲ್ಲಿ ನೌಕರರನ್ನು ಎತ್ತಿಕಟ್ಟಿ ಅನಂತರ ಸರ್ಕಾರವನ್ನು ಟೀಕಿಸುವ ಕೆಲಸಕಾರ್ಯ ನಡೆಯದೆ. ಮಾನ್ಯ ಮುಖ್ಯಮಂತ್ರಿಗಳವರ ದೊಡ್ಡತನದಿಂದ ಸಮಸ್ಯೆಗಳೇನಿದ್ದರೂ ಕೂಡ ಅದನ್ನು ಎದುರಿಸುವಂತಹ ಶಕ್ತಿ ನಮಗಿದೆ ಉತ್ತಮ ಆಡಳಿತ ಕೊಡುತ್ತೇವೆ, ಭ್ರಷ್ಟಾಚಾರ ನಿರ್ಮೂಲನ ಮಾಡುವ ಕೆಲಸ ಮಾಡುತ್ತೇವೆನ್ನುವ ದಿಶೆಯಲ್ಲಿ ನಮ್ಮ ಸರ್ಕಾರ ಹಲವಾರು ಯೋಗ್ಯ ಭರವಸೆಗಳನ್ನು ಕೊಟ್ಟಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು / ಪ್ರಥಮವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ಕೊಟ್ಟಂಥ ಸಂದರ್ಭದಲ್ಲಿ ಅವರು ವಾರಾಹಿ ಯೋಜನೆಯ ಮಟ್ಟಿಗೆ ಭೇಟಿ ಕೊಟ್ಟರು. ಕ್ಷಣಿಕವಾಗಿ ಜನತೆಯನ್ನು ಸಂತೋಷ ಮಾಡುವಂಥ ಕಾರ್ಯಕ್ರಮಕ್ಕೆ ಹೋಗದೆ ಸಮಗ್ರವಾಗಿ ನಮಗೆ ಯಾವುದು ಅವಶ್ಯಕತೆ ಇದೆ, ಅದು ವಿದ್ಯುತ್ ಇರಲಿ, ನೀರಾವರಿ ಇರಲಿ ಅಥವಾ ಬೇರೆ ಯಾವ ಯಾವ ಯೋಜನೆಗಳು ಅಗತ್ಯ ಇದೆ, ಅವರ ಮಟ್ಟಿಗೆ ಕಾರ್ಯಕ್ರಮವನ್ನು ಹಾಕಿಕೊಂಡು ನಮ್ಮ ಮುಖ್ಯಮಂತ್ರಿಗಳು ಮುಂದುವರಿಯುತ್ತಿದ್ದಾರೆ. ಇನ್ನು ಮುಂದಕ್ಕೆ ಒಳ್ಳೆಯ ರೀತಿಯ ಹಾಗೂ ಅನುಕೂಲತೆ ಬರುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಂಥ ಅವಕಾಶ ಇದೆ. ಹಿಂದಿನ ಸರ್ಕಾರ ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುತ್ತೇವೆಂದು ಘೋಷಣೆಯನ್ನು ಮಾಡಿದ್ದರೂ ಯಾವ ರೀತಿಯಲ್ಲಿ ಅದಕ್ಕೆ ಫಲಿತಾಂಶ ಸಿಕ್ಕಿತು ಎನ್ನುವುದನ್ನು ನಾವು ನೋಡಬೇಕಾಗಿದೆ. ವಿದ್ಯಾ ಇಲಾಖೆಯನ್ನು ಒಂದು ರೀತಿಯಲ್ಲಿ ಅಬಕಾರಿ ಇಲಾಖೆಗಿಂತಲೂ ಕಡೆಯದಾಗಿ ಮಾಡುವಂಥ ಒಂದು ವಾತಾವರಣವನ್ನು ನಾವು ಕಂಡಿದ್ದೇವೆ. ಕಾಲೇಜುಗಳನ್ನು ವ್ಯಾಪಾರಿ ಕೇಂದ್ರಗಳನ್ನಾಗಿ ಮಾಡುವಂಥ ಒಂದು ವಾತಾವರಣ ನಡೆಯಿತು. ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿದ್ದ ಮೆಡಿಕಲ್ ಕಾಲೇಜ್ ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುವ ದಿಸೆಯಲ್ಲಿ ಯಾವುದೇ ಒಂದು ರೀತಿಯ ಪ್ರಗತಿಯನ್ನು ಕಾಣಲಿಲ್ಲ. ಕ್ಯಾಪಿಟೇಷನ್ ಶುಲ್ಕದ ಮಟ್ಟಿಗೆ ಬರೀ ನಿರೀಕ್ಷೆಗಳು ಉಳಿಯಿತೇ ಯಾವುದೇ ರೀತಿಯ ಫಲಿತಾಂಶ ಅವರ ಮಟ್ಟಿಗೆ ಬರಲಿಲ್ಲ. ಅದೇ ಹಿನ್ನೆಲೆಯಲ್ಲಿ ಮಾನ್ಯ ಯಡಿಯೂರಪ್ಪನವರು ಕೂಡ ಹೆಚ್ಚಿನ ಅಂಶದ ಬೇಡಿಕೆಯನ್ನು ಅವರ ಮಟ್ಟಿಗೆ ಇಟ್ಟಿದ್ದಾರೆ. ನಾವು ಕೂಡ ನಮ್ಮ ಪಕ್ಷದ ಮುಖಾಂತರ ಕಳೆದ ಐದು ವರ್ಷಗಳಲ್ಲಿ ಆ ಕಡೆ ಕುಳಿತು ಕೃಷಿ ಮಾಡುವಂಥ ಜನರಿಗೆ ಹಕ್ಕುಪತ್ರ ಕೊಡಬೇಕು ಎನ್ನುವಂಥ ಒತ್ತಡವನ್ನು ಸರ್ಕಾರಕ್ಕೆ ತಂದಿದ್ದೇವೆ. ಬೇರೆ ಬೇರೆ ಹಂತದಲ್ಲಿ ಒತ್ತಡವನ್ನು ತರುವಂಥ ಕೆಲಸ ನಡೆಯಿತು. ಆ ರೀತಿ ನಡೆದಂಥ ಸಂದರ್ಭದಲ್ಲಿ ಇದರ ಬಗ್ಗೆ ಕಾನೂನು ತಿದ್ದುಪಡಿಯನ್ನು ಮಾಡುತ್ತೇವೆ ಎನ್ನುವ ಆ ಭರವಸೆ ಬರೀ ಭರವಸೆಯಾಗಿಯೇ ಉಳಿಯಿತು ಒಂದು ಸಂದರ್ಭದಲ್ಲಿ ಸರ್ಕಾರ ಮುಂದೆ ಬಂದು ಇವತ್ತು ನಾವು ಕೇಳುತ್ತಿರತಕ್ಕಂಥ ಸಮಾಜವಾದ ಏನು ಎಂದರೆ, ಹಿಂದೆ ಇದ್ದಂಥ ಶ್ಯಾನುಭೋಗರು ಬಡವರಿಗೆ ಒಂದು ಎಕರೆ, ಎರಡು ಎಕರೆ, ಐದು ಎಕರೆ ಈ ರೀತಿ ಏನು ಅಳತೆ ಮಾಡಿಕೊಟ್ಟಿದ್ದಾರೆ. ಅದು ನಮ್ಮದೇ ಎನ್ನುವ ರೀತಿಯಲ್ಲಿ ಜನರಿಗೆ ಭಾವನೆ ಇತ್ತು. ರೆವಿನ್ಯೂ ಇಲಾಖೆಯಲ್ಲಿ ಶ್ಯಾನುಭೋಗರೇ ದೊಡ್ಡ ಅಧಿಕಾರಿ ಎನ್ನುವ ರೀತಿಯಲ್ಲಿ ಜನರಿಗೆ ತಿಳಿವಳಿಕೆ ಇತ್ತು. ಸರಿಯಾಗಿ ವಿದ್ಯಾಭ್ಯಾಸ ಇಲ್ಲದಂಥ ಆರ್ಥಿಕ ಸ್ಥಿತಿ ಇಲ್ಲದ ಜನರು ಕೃಷಿ ಮಾಡುವವರು ಮಾಡಿದರು, ಮನೆ ಮಾಡುವವರು ಮನೆಯನ್ನು ಮಾಡಿಕೊಂಡರು ಇಂಥ ಫೈಲ್‌ಗಳನ್ನು ರೆವಿನ್ಯೂ ಇನ್‌ಸ್ಪೆಕ್ಟರ್‌ಗೆ ಆಗಲೀ ಅಥವಾ ತಹಶೀಲ್ದಾರ್‌ರವರಿಗೆ ಅದನ್ನು ಕಳುಹಿಸಿಕೊಡದೆ ಅದು ಅಲ್ಲಿಯೇ ಸ್ಥಗಿತವಾಗಿದೆ. ಹತ್ತು-ಇಪ್ಪತ್ತು ವರ್ಷಗಳಿಂದ ಆ ಒಂದು ಜಾಗದಲ್ಲಿ ಕುಳಿತಂಥ ಜನರಿಗೆ

ಹಕ್ಕುಪತ್ರ ಸಿಗತಕ್ಕಂಥ ಒಂದು ಕೆಲಸ ಕಾರ್ಯ ಕೂಡ ಆಗಿಲ್ಲ. ಹಕ್ಕುಪತ್ರ ಅವರುಗಳಿಗೆ ಸಿಗಲಿಲ್ಲ ಎಂದು ಹೇಳಿದರೆ ಅವರಿಗೆ ಸರ್ಕಾರದ ಯಾವುದೇ ಒಂದು ಸವಲತ್ತುಗಳು ಸಿಗತಕ್ಕಂಥ ಸೌಲಭ್ಯ ಇರುವುದಿಲ್ಲ.

(ಉಪಾಧ್ಯಕ್ಷೆ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಪೀಠವನ್ನು ಅಲಂಕರಿಸಿದರು.)

ಆ ಒಂದು ಹಂತದಲ್ಲಿ ಸರ್ಕಾರಕ್ಕೆ ಒತ್ತಡವನ್ನು ತಂದಾಗ ಒಂದು ಸಂದರ್ಭದಲ್ಲಿ ಸರ್ಕಾರ ಮುಂದೆ ಬಂತು. ಕಾಫೀ ಪ್ಲಾಂಟರ್ ಮಾಡುವಂಥ ೫೦ ಎಕರೆ ೧೦೦ ಎಕರೆ ಜಾಗವನ್ನು ಅವರು ಸರ್ಕಾರಿ ಜಾಗವನ್ನು ಎನ್ ಕ್ರೋಚ್ ಮಾಡಿದ್ದರೂ ಸಹಿತ ಅವನ್ನು ಒಟ್ಟಿಗೆ ಸೇರಿಸಿ ಕೊಡುತ್ತೇವೆ ಎಂದು ಹೇಳುವಾಗ ಇಲ್ಲಿ ಬಡವರಿಗೆ ಮಾತ್ರ ಕೊಡುವುದಿಲ್ಲ ಎನ್ನುವ ರೀತಿಯಲ್ಲಿ ಸರ್ಕಾರ ಈಗ ಮುಂದೆ ಬಂದಿದೆ, ಅವರಿಗೆ ಹಕ್ಕು ಪತ್ರವನ್ನು ಕೊಡುವ ಕೆಲಸಕಾರ್ಯ ಇನ್ನೂ ಆಗಿಲ್ಲ. ಇವತ್ತು ನಾವು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಇದನ್ನು ಕಾಣುತ್ತಿದ್ದೇವೆ. ಸ್ಪಷ್ಟವಾಗಿ ಸರ್ಕಾರ ಮೊದಲನೆಯ ಹಂತದಲ್ಲಿ ಈ ರೀತಿ ಸರ್ಕಾರಿ ಜಾಗದಲ್ಲಿ ಕುಳಿತಂಥ ಜನರಿಗೆ ಹಕ್ಕು ಪತ್ರವನ್ನು ಕೊಡುವಂಥ ಒಂದು ತಿದ್ದುಪಡಿಯನ್ನು ತರುತ್ತೇವೆ ಎನ್ನುವ ಒಂದು ದಿಟ್ಟ ನಿಲುವನ್ನು ತೆಗೆದುಕೊಂಡಿದ್ದಾರೆ, ಇದರಿಂದ ಸಾವಿರಾರು ಕುಟುಂಬಗಳಿಗೆ ಪ್ರಯೋಜನವಾಗುತ್ತದೆ. ಅದೇ ರೀತಿಯಲ್ಲಿ ಕುಮ್ಕಿ ಹಕ್ಕಿನ ಮಟ್ಟಿಗೆ ಫಾರೆಸ್ಟ್ ಬಫರ್ ಜಾಗದಲ್ಲಿ ಕುಳಿತಂಥ ಕೃಷಿಕರಿಗೂ ಕೂಡ ಹಕ್ಕುಪತ್ರವನ್ನು ಕೊಡತಕ್ಕಂಥ ಕೆಲಸಕಾರ್ಯ ನಡೆಯಬೇಕಾಗಿದೆ. ಭೂಮಸೂದೆ ಕಾನೂನಿನ ಮುಖಾಂತರ ಹಕ್ಕುಪತ್ರ ಕೊಡುವಂಥ ಕೆಲಸವಾಗಿದೆ. ಕೆಲವೊಂದು ಜನರಿಗೆ ತಿಳುವಳಿಕೆ ಇಲ್ಲದೆ ಅರ್ಜಿ ಕೊಡುವಂಥ ಒಂದು ಅವಕಾಶವೂ ಆಗಿಲ್ಲ: ಒಂದು ರೀತಿ ಅರ್ಜಿಯನ್ನು ಕೊಡುವಂಥ ಅವಕಾಶವನ್ನು ಕೂಡಾ ಮುಂದುವರಿಸುವುದಕ್ಕೆ ಸರ್ಕಾರ ಈ ಕೆಲಸ ಕಾರ್ಯಗಳನ್ನು ಮಾಡಬೇಕು ಎಂದು ಹೇಳುತ್ತೇನೆ. ಹಿಂದಿನ ಸರ್ಕಾರ ಕಾನೂನು ಪರಿಪಾಲನೆ ದೃಷ್ಟಿಯಲ್ಲಿ ನಾವು ಇನ್ನು ಕಬ್ಬಿಣದ ಗುಂಡು ಹೊಡೆಯುವುದಿಲ್ಲ, ರಬ್ಬರ್ ಗುಂಡು ಹೊಡೆಯುತ್ತೇವೆ ಎಂದು ಒಂದು ಸಲ ಇಲ್ಲಿ ಘೋಷಣೆ ಮಾಡಿದರು. ರಬ್ಬರ್ ಗುಂಡು ಹೊಡೆಯತಕ್ಕಂಥ ಸಂದರ್ಭದಲ್ಲಿ ಜನತೆ ರಬ್ಬರ್ ಗುಂಡನ್ನು ಎದುರಿಸುವ ದಿಸೆಯಲ್ಲಿ ಮುಂದೆ ಬಂದಾಗ ಹಲವಾರು ರೀತಿಯ ಗೋಲೀಬಾರ್ ನಡೆದು ಅನೇಕ ಜನರು ಸಾಯುವಂಥ ಅವಕಾಶ ಆಯಿತು. ಇವೊತ್ತು ಕಾನೂನು ಪರಿಪಾಲನೆ ಮಾಡುವ ಬಗ್ಗೆ ಹಿಂದೆ ಮಾತನಾಡಿದಂಥ ಅನೇಕ ಸದಸ್ಯರು ಹಲವಾರು ರೀತಿಯ ಸಲಹೆಗಳನ್ನು ಕೊಟ್ಟಿದ್ದಾರೆ. ಪೋಲೀಸ್ ಸ್ಟೇಷನ್‌ನಲ್ಲಿ, ಅದರ ವ್ಯಾಪ್ತಿಗೆ ತಕ್ಕಂತೆ ಸಿಬ್ಬಂದಿ ಸಂಖ್ಯೆ ಹೆಚ್ಚು ಮಾಡಿಕೊಂಡು ಹೋಗಬೇಕಾಗಿದೆ. ಈ ದೃಷ್ಟಿಯಲ್ಲಿ ಅವರಿಗೆ ಇನ್ನೂ ಹೆಚ್ಚಿನ ಸಲಕರಣೆಗಳನ್ನು ಒದಗಿಸಿಕೊಡುವಂಥ ಕೆಲಸ ಕಾರ್ಯಗಳನ್ನು ಮಾಡಬೇಕಾಗಿದೆ. ಇವೊತ್ತು ಪೋಲೀಸ್ ಅಧಿಕಾರಿ ತಪ್ಪು ಮಾಡಿದರೆ ಅವರ ಮೇಲೆ ನೇರವಾದ ಕ್ರಮವನ್ನು ತೆಗೆದುಕೊಳ್ಳುವಂಥ ಅವಕಾಶ ಅವರ ಉನ್ನತ ಅಧಿಕಾರಿಗಳಿಗೆ ಇರುವುದಿಲ್ಲ. ಅಪಿಲೇಟ್ ಟ್ರಿಬ್ಯೂನಲ್ ಮುಖಾಂತರ ಅದನ್ನು ತೀರ್ಮಾನ ಮಾಡುವ ಅವಕಾಶ ಇರುತ್ತದೆ. ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಈ ಅವಕಾಶವನ್ನು ಕಲ್ಪಿಸಿ ಕೊಟ್ಟರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಶಿಸ್ತನ್ನು ಮುಂದುವರಿಸಿಕೊಂಡು ಹೋಗುವುದು ಸಾಧ್ಯವಾಗುತ್ತದೆ. ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ ರಿಂದ ೫೫ಕ್ಕೆ ಇಳಿಸುವ ನಿರ್ಣಯವನ್ನು ಸರ್ಕಾರಿ ನೌಕರರ ಹಂತದಲ್ಲಿ ತೆಗೆದುಕೊಂಡಿರುತ್ತಾರೆ. ಇವೊತ್ತು ಹಿಂದಿನ ಸರ್ಕಾರ ೫೫ಕ್ಕೆ ಇದ್ದುದನ್ನು ೫೮ಕ್ಕೆ ಏರಿಸಿತು. ಏಕೆ ಏರಿಸಿತು ಅಂದರೆ ಅವರಿಗೆ ನಿವೃತ್ತಿ ಆಗತಕ್ಕಂಥಹ ಸಂದರ್ಭದಲ್ಲಿ ಸರ್ಕಾರಿ ನೌಕರರಿಗೆ ಬೇರೆ ಬೇರೆ ರೀತಿಯ ಸೌಲಭ್ಯಗಳನ್ನು ಕೊಡಲಿಕ್ಕೆ ಸಾಧ್ಯ ಇಲ್ಲದಿರುವಂತಹ ಆರ್ಥಿಕ ಮುಗಟ್ಟು ಇದ್ದ ಕಾರಣ ಈ ಒಂದು ವಯೋಮಿತಿಯನ್ನು ೫೫ ರಿಂದ ೫೮ಕ್ಕೆ ಏರಿಸಿದರು. ಇವೊತ್ತು ಈ ಸರ್ಕಾರ ನಿವೃತ್ತಿ ವಯಸ್ಸನ್ನು ೫೮ ರಿಂದ ೫೫ಕ್ಕೆ ಇಳಿಸುವ ದಿಟ್ಟತನದ ನಿಲುವನ್ನು ತೆಗೆದುಕೊಂಡಿದೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ರಾಜ್ಯದಲ್ಲಿ ಬರಗಾಲದ ವ್ಯವಸ್ಥೆ ಇದೆ ಎನ್ನುವಂತಹ ದಿಸೆಯಲ್ಲಿ ಸರ್ಕಾರದಲ್ಲಿ ಕಾರ್ಯಕ್ರಮ ಏನೇನು ಇತ್ತು ಈ ಒಂದು ವಿಚಾರದ ಮಟ್ಟಿಗೆ ಜನರ ಮನಸ್ಸನ್ನು ಸೆಳೆಯುವಂತಹ ಅವಕಾಶವನ್ನು ಕಲ್ಪಿಸಿಕೊಂಡು ಬಂದಿದ್ದಾರೆ. ಹಿಂದೆ ಬರಗಾಲ ಬಂದಂತಹ ಸಂದರ್ಭದಲ್ಲಿ ಆಗಿನ ಪ್ರಧಾನಿಯಾದ ಶ್ರೀ ರಾಜೀವ್ ಗಾಂಧಿಯವರು ರಾಜ್ಯದ ಪ್ರತಿಯೊಂದು ಬರಗಾಲ ಪೀಡಿತ ಜಿಲ್ಲೆಗೆ ಭೇಟಿ ಕೊಟ್ಟು ಬರಗಾಲದಲ್ಲಿ ಇದ್ದ ಜನರಿಗೆ ಸರಿಯಾದ ಅನುಕೂಲತೆಗಳನ್ನು ಮುಟ್ಟಿಸುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಅದೇ ರೀತಿ ಎಲೆಕ್ಟ್ರಿಸಿಟಿ ಇರಿಗೇಷನ್ ಗ್ಗೆ ಹಲವಾರು ಕಾರ್ಯಕ್ರಮಗಳನ್ನು ಈ ಸರ್ಕಾರ ರೂಪಿಸಿಕೊಂಡಿದೆ.

ಉಪಾಧ್ಯಕ್ಷರು.—ತಾವು ದಯವಿಟ್ಟು ಮುಗಿಸಿ . ...

ಶ್ರೀ ಏಸಿಯ ಕುಮಾರ್ ಸೊರಕೆ.- ಹೆಂಡವನ್ನು ನಿಷೇಧ ಮಾಡುವಂತಹ ಒಂದು ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ. ನಿಜವಾಗಿಯೂ ಇದು ಸ್ವಾಗತ ಮಾಡುವಂತಹ ಕಾರ್ಯಕ್ರಮ. ಇವೊತ್ತು ಹಲವಾರು ಜಿಲ್ಲೆಗಳಲ್ಲಿ ಹೆಂಡದ ನಿಷೇಧದಿಂದ ಆರೋಗ್ಯ ಪಾಲನೆ

ಮಾಡುವಂತಹ ಒಂದು ಅವಕಾಶ ಉಂಟಾಗಿದೆ. ಆದರೆ ಇದರಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೇ ವೃತ್ತಿಯನ್ನು ಮಾಡುವಂತಹ ಜನರಿಗೆ ತೊಂದರೆ ಆಗಿದೆ. ಈಗಾಗಲೇ ಈ ವಿಷಯದ ಬಗ್ಗೆ ಸರ್ಕಾರದ ಗಮನಕ್ಕೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ, ಹಾಗೂ ಸಂಬಂಧಪಟ್ಟ ಮಾನ್ಯ ಮಂತ್ರಿಗಳ ಗಮನಕ್ಕೆ ಇದನ್ನು ತಂದಿದ್ದೇವೆ. ಹೆಂಡದ ವೃತ್ತಿಯನ್ನು ಮಾಡುವಂತಹ ಜನರಿಗೆ ಅವರಿಗೆ ಸರಿಯಾದ ರೀತಿಯಲ್ಲಿ ಅನುಕೂಲತೆ ಆಗುವ ರೀತಿಯಲ್ಲಿ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಉಪಾಧ್ಯಕ್ಷಣಿಯವರೇ ರಾಜ್ಯಪಾಲರು ಮಾಡಿರುವ ಭಾಷಣಕ್ಕೆ ವಂದನಾ ನಿರ್ಣಯವನ್ನು ನಾನು ಬೆಂಬಲಿಸುತ್ತಾ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇತ್ತೀಚೆಗೆ ಸರ್ಕಾರಿ ನೌಕರರ ಮುಷ್ಕರದ ಬಗ್ಗೆ ಅವರಲ್ಲಿ ಪ್ರಸ್ತಾವನೆ ಇದೆ. ಸ್ವಲ್ಪ ಕುಂದುಕೊರತೆಗಳು ಆದರೂ ಸಹ ಇವರು ಸಂಘಟಿತರಾಗಿ ಮುಷ್ಕರದ ಹಾದಿ ಹಿಡಿಯುತ್ತಾರೆ. ಆದರೆ ನಮ್ಮ ರಾಜ್ಯದ ರೈತರು ಏನಿದ್ದಾರೆ they are the most un-organised sector ಎಂದು ಹೇಳಬಹುದು. ಇವರ ಕುಂದು ಕೊರತೆಗಳ ಬಗ್ಗೆ ಸರ್ಕಾರಿ ನೌಕರರು ಎಷ್ಟು ಚಿಂತನೆ ಮಾಡುತ್ತಾರೆ? ಅವರ ಆಫೀಸಿಗೆ ಅಥವಾ ಕಚೇರಿಗೆ ರೈತರು ಹೋದಾಗ ಅವರ ಬಗ್ಗೆ ಎಷ್ಟು ಕನಿಕರವನ್ನು ಅಥವಾ ಅನುಕಂಪವನ್ನು ತೋರಿಸುತ್ತಾರೆ ಎನ್ನುವುದು ಸಂಶಯಾಸ್ಪದವಾದ ವಿಚಾರವಾಗಿದೆ. ಆದ್ದರಿಂದ ಮುಷ್ಕರಗಳನ್ನು ಆದಷ್ಟು ತಡೆಯಬೇಕು. ಅದೇ ರೀತಿ ರೈತರು ಮುಷ್ಕರ ಮಾಡಿದರೆ ಇವರ ಗತಿ ಏನು ಆಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಆಡಳಿತ ದಕ್ಷತೆ ಬಗ್ಗೆ ಇವರು ಹೇಳಿದ್ದಾರೆ. ಹಿಂದೆ grievences cell, petitions cell, think tank ಇವೆಲ್ಲಾ ಇದ್ದರೂ ಕೂಡ ಏನು ಸುಧಾರಣೆ ಆಗಿದೆ? ಇದನ್ನು ನಾವು ಚಿಂತೆ ಮಾಡಬೇಕಾಗಿದೆ. ಇವರು ಯಾವ ಆಫೀಸಿಗಾದರೂ ವರ್ಕಿಂಗ್ ಅವರ್ಸ್‌ನಲ್ಲಿ ಹೋದರೂ ಕೂಡ ಅರ್ಧಕ್ಕರ್ಧ ಕುರ್ಚಿಗಳು ಖಾಲಿ ಇರುತ್ತವೆ, ಇದನ್ನು ನಾವು ನೋಡುತ್ತಿದ್ದೇವೆ.

೧೦–೧೫ ಎ. ಎಂ.

ಕೇಳಿದರೆ ಕಾಫಿಗೆ ಹೋಗಿದ್ದಾರೆ ಮತ್ತೊಂದಕ್ಕೆ ಹೋಗಿದ್ದಾರೆಂದು ಹೇಳುತ್ತಾರೆ. ಈ ರೀತಿ ಕೆಲಸ ಕಾರ್ಯಗಳು ಮಂದಗತಿಯಲ್ಲಿ ಸಾಗುತ್ತಿವೆ. ನಮ್ಮಂತಹ ಶಾಸಕರುಗಳೇ ೧೦ ಸಲ ಹೋದರೆ ೩ ಸಲ ಆದರೂ ಈ ನೌಕರರುಗಳು ಸಿಕ್ಕುವುದೇ ಕಷ್ಟವಾಗಿದೆ. ಅದೇ ರೀತಿ ಸರ್ಕಾರಿ ವಾಹನಗಳನ್ನು ಅಧಿಕಾರಿಗಳು ಬಹಳ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ನಾವು ಈ ಸರ್ಕಾರಿ ವಾಹನಗಳನ್ನು ಬ್ರಿಗೇಡ್ ರೋಡ್ ಕಮರ್ಶಿಯಲ್ ಸ್ಟ್ರೀಟ್‌ಗಳಲ್ಲಿ ನೋಡಬಹುದು. ಇವತ್ತು ಸರ್ಕಾರಿ ವಾಹನಗಳು ಎಷ್ಟರಮಟ್ಟಿಗೆ ದುರುಪಯೋಗವಾಗಿದೆ ಎಂದರೆ ಅವುಗಳನ್ನು ಅಧಿಕಾರಿಗಳು ತಮ್ಮ ಎಲ್ಲಾ ಕೆಲಸಗಳಿಗೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಈಗಿನ ಏರಿದ ಪೆಟ್ರೋಲ್ ಬೆಲೆಯಲ್ಲಿ ಬಹಳ ದುಂದುವೆಚ್ಚ ಮಾಡುತ್ತಿದ್ದಾರೆ. ಇದನ್ನು ನಿಲ್ಲಿಸಲು ಕ್ರಮ ಕೈಗೊಳ್ಳಬೇಕು. ಹಳ್ಳಿಗಳಲ್ಲಿ ಏನಾದರೂ ಕೆಲಸ ಕಾರ್ಯಗಳನ್ನು ಮಾಡಿಕೊಡಬೇಕೆಂದು ಕೇಳಿದರೆ ಏಕಾನಾಮಿ ಎಂದು ಹೇಳುತ್ತಾರೆ. ಹಣದ ಮುಗ್ಗಟ್ಟೆಂದು ಹೇಳುತ್ತಾರೆ, ಆದರೆ ಲಕ್ಷಾಂತರ ರೂಪಾಯಿಗಳನ್ನು ಸರ್ಕಾರಿ ವಾಹನಗಳ ಬಳಕೆಯಲ್ಲಿ ದುರುಪಯೋಗ ಮಾಡುತ್ತಿದ್ದಾರೆ ಸರ್ಕಾರ ಇದನ್ನು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಒಬ್ಬ ಅಧಿಕಾರಿಯನ್ನು ಕಚೇರಿಗೆ ಕರೆದುಕೊಂಡು ಬರುವುದಕ್ಕೆ ಮತ್ತು ಮನೆಗೆ ಬಿಡುವುದಕ್ಕೆ ಈ ವಾಹನಗಳನ್ನು ಉಪಯೋಗಿಸುತ್ತಾರೆ. ಈ ಎರಡು ಟ್ರಿಪ್‌ನಿಂದ ಸುಮಾರು ೫೦ ಕಿ.ಮೀ. ಆಗುತ್ತದೆ. ಇದರ ಜೊತೆಗೆ ಅವರ ಮನೆಯವರನ್ನು ಅಂಗಡಿಗೆ ಮತ್ತೊಂದಕ್ಕೆ ಕರೆದುಕೊಂಡು ಹೋಗಲು ಉಪಯೋಗಿಸುತ್ತಾರೆ. ಈ ರೀತಿ ಸರ್ಕಾರಿ ವಾಹನಗಳ ದುರುಪಯೋಗವನ್ನು ಕೂಡಲೇ ತಡೆಗಟ್ಟಲು ಕ್ರಮ ಕೈಗೊಳ್ಳಬೇಕು. ಇನ್ನು ಭ್ರಷ್ಟ ಅಧಿಕಾರಿಗಳು ಬಲೆಗಳಿಗೆ ಸಿಕ್ಕಿಕೊಂಡಾಗ ಅವರ ಬಗ್ಗೆ ಕಠಿಣವಾದ ಧೋರಣೆಯನ್ನು ತೆಗೆದುಕೊಳ್ಳದೆ ಅವರನ್ನು ಅನೇಕ ಸಲ ಮಾಫಿ ಮಾಡುತ್ತಿರುವುದರಿಂದ ಆಡಳಿತದಲ್ಲಿ ದಕ್ಷತೆ ಹೆಚ್ಚಾಗುತ್ತಿಲ್ಲ. ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಇನ್ನು ಎಲ್ಲಾ ಪ್ರದೇಶಗಳಲ್ಲಿ ಗೂಂಡಾಯಿಸಂ ಜಾಸ್ತಿಯಾಗುತ್ತದೆ. ಇದರಿಂದ ಸಜ್ಜನರು ಭಯದಿಂದ ಬಾಳುವ ಪರಿಸ್ಥಿತಿ ಬಂದಿದೆ. ಈ ಗೂಂಡಾಯಿಸಂ ಅನ್ನು ತಡೆಗಟ್ಟಿ ಜನರು ನಿರ್ಭಯರಾಗಿ ಓಡಾಡುವಂತೆ ಮಾಡಬೇಕು. ಇನ್ನು ನಿವೃತ್ತಿ ವಯಸ್ಸನ್ನು ೫೮ರಿಂದ ೫೫ಕ್ಕೆ ಇಳಿಸಬೇಕೆಂದು ಸರ್ಕಾರದ ಮುಂದೆ ಪ್ರಪೋಜಲ್ ಇದೆಯೆಂದು ಹೇಳಿದ್ದಾರೆ. ಈಗ ಕೆಲಸ ಸಿಕ್ಕಿ ಅವರ ಮಕ್ಕಳ ವಿದ್ಯಾಭ್ಯಾಸ ಮುಗಿಸಿ

ಒಂದು ಮನೆ ಮಾಡಿಕೊಳ್ಳಬೇಕಾದರೆ ತುಂಬಾ ಶ್ರಮ ಪಡಬೇಕಾಗಿದೆ. ಅಂತಹದ್ದರಲ್ಲಿ ೫೮ರಿಂದ ೫೫ಕ್ಕೆ ಇಳಿಸುವುದರ ಬಗ್ಗೆ ಔಚಿತ್ಯ ಏನು ಎಂಬುದು ನನಗೆ ಅರ್ಥವಾಗುತ್ತಿಲ್ಲ, ಇಡೀ ದೇಶದಲ್ಲಿ ಅನೇಕ ರಾಜ್ಯಗಳಲ್ಲಿ ನಿವೃತ್ತಿ ವಯಸ್ಸು ೫೮ ಇರುವುದರಿಂದ ನಮ್ಮ ಕರ್ನಾಟಕದಲ್ಲೂ ೫೮ಕ್ಕೆ ಇರುವುದು ಉಚಿತ. ಬೇಕಾದರೆ ವಾಲೆಂಟರಿ ರಿಟೈರ್‌ಮೆಂಟ್ ತೆಗೆದುಕೊಳ್ಳುವವರಿಗೆ ಇನ್ನೂ ಹೆಚ್ಚಿನ ಬೆನಿಫಿಟ್‌ಗಳನ್ನು ಕೊಟ್ಟು ಎನ್‌ಕರೇಜ್ ಮಾಡುವುದು ಒಳ್ಳೆಯದೆಂದು ನನಗನ್ನಿಸುತ್ತದೆ.

ಇನ್ನು ಆಕ್ರಮ ಸಾಗುವಳಿ ಆಗಿರತಕ್ಕ ಪ್ರದೇಶವನ್ನು ಸಕ್ರಮಗೊಳಿಸುವುದಾಗಿ ಹೇಳಿದಾರೆ. ದೊಡ್ಡ ದೊಡ್ಡ ಜಮೀನುದಾರರು ಹಲವಾರು ಎಕರೆ ಜಮೀನುಗಳನ್ನು ಆಕ್ರಮ ಸಾಗುವಳಿ ಮಾಡಿಕೊಂಡಿದ್ದಾರೆ. ಅವರಿಗೆ ಸಕ್ರಮ ಮಾಡಿಕೊಡುವುದು ಸರಿಯಲ್ಲ. ಯಾರು ಸಣ್ಣ ಹಿಡುವಳಿದಾರರು ಇದ್ದಾರೆ, ಯಾರು ಹರಿಜನ ಗಿರಿಜನ ಇದ್ದಾರೆ, ಯಾರು ಹಿಂದುಳಿದವರು ಇದ್ದಾರೆ, ಯಾರು ಅಂಗವಿಕಲರು ಇದ್ದಾರೆ ಅವರಿಗೆ ಆದ್ಯತೆ ಕೊಟ್ಟು ಅವುಗಳನ್ನು ಸಕ್ರಮಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಜವಾಹರ್ ರೋಜ್‌ಗಾರ್ ಯೋಜನೆಯನ್ನು ಕಾರ್ಯಗತ ಮಾಡಬೇಕಾದರೆ ಮಂಡಲ್ ಮಟ್ಟದಲ್ಲಿ ಪಿ.ಡಬ್ಲ್ಯು.ಡಿ. ಇಲಾಖೆಯವರಿಗೂ ಮಂಡಲ ಪಂಚಾಯಿತಿಯ ನೌಕರರಿಗೂ ಮತ್ತು ಪ್ರಧಾನರಿಗೂ ಭಿನ್ನಾಭಿಪ್ರಾಯ ಹೆಚ್ಚಾಗಿದ್ದು, ಜವಾಹರ್ ರೋಜ್‌ಗಾರ್ ಯೋಜನೆಯ ಪ್ರಗತಿ ಸಾಕಷ್ಟು ಸಮರ್ಪಕವಾಗಿ ಆಗಿಲ್ಲ.

ಇನ್ನು ರೋಗಗ್ರಸ್ಥ ನೂಲು ಗಿರಣಿಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಕೆ.ಆರ್. ಮಿಲ್ಲನ್ನು ಮುಚ್ಚಿ ಅದರಿಂದ ನೌಕರರಿಗೆ ಆಗಿರತಕ್ಕ ಗೋಳಿನ ಕಥೆಯನ್ನು ಈಗಾಗಲೇ ಹಲವಾರು ಮಾನ್ಯ ಸದಸ್ಯರುಗಳು ಈ ಸದನದಲ್ಲಿ ಹೇಳಿದ್ದಾರೆ. ಆ ಮಿಲ್ಲಿನ ಉದ್ಯೋಗಿಗಳು ಅನೇಕ ಸಲ ತಮ್ಮ ಮನವಿಯನ್ನು ಕೊಟ್ಟಿದ್ದಾರೆ. ಅಲ್ಲಿ ಕೆಲಸ ಮಾಡಿದಂತಹ ವಿದ್ಯಾವಂತರು, ಬುದ್ಧಿವಂತರು ಈಗಲೂ ಕೂಡ ಬೋಂಡಾ, ಬಜ್ಜಿ ಮಾಡಿಕೊಂಡು ಜೀವನ ನಡೆಸುವಂತಹ ಸ್ಥಿತಿಯಲ್ಲಿದ್ದಾರೆ. ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಯವರಿಗೆ ವಹಿಸಿದರೆ they make it as a sick industry and sell it. ಈ ರೀತಿ ಪ್ರಭಾವಕ್ಕೆ ಒಳಗಾಗಿ ಅವನ್ನು ಮಾಡಿಕೊಂಡು ಹೋಗತಕ್ಕ ಪ್ರಸಂಗಗಳನ್ನು ನಾವು ಬೇಕಾದಷ್ಟು ನೋಡಿದ್ದೇವೆ. ಮಹಾರಾಷ್ಟ್ರದಲ್ಲಿ ಸಕ್ಕರೆ ಕಾರ್ಖಾನೆಗಳವರು ಬೆಳೆಗಾರರಿಗೆ ಹೆಚ್ಚು ಬೆಲೆಯನ್ನು ಕೊಡುತ್ತಿದ್ದಾರೆ. ಉದಾಹರಣೆಗೆ, ಅಲ್ಲಿನ ಸಂಜೀವಿನ ಸಕ್ಕರೆ ಕಾರ್ಖಾನೆಯವರು ಟನ್ನಿಗೆ ೪೦೦-೪೫೦ ರೂಪಾಯಿ ಕೊಡುತ್ತಿರುವಾಗ ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕ ಸಕ್ಕರೆ ಕಾರ್ಖಾನೆಗಳು ಅಷ್ಟು ಬೆಲೆಯನ್ನು ಕೊಡುವುದಕ್ಕೆ ಏನು ತೊಂದರೆ ಇದೆ. ಆದ್ದರಿಂದ ಓವರ್ ಆಲ್ ಎಫಿಸಿಯೆನ್ಸಿಯನ್ನು ಸುಧಾರಣೆ ಮಾಡಿದರೆ ಒಳ್ಳೆಯದಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಇವತ್ತು ಪಂಪುಸೆಟ್ಟುಗಳಿಗೆ ವಿದ್ಯುತ್ ಅನ್ನು ಕೊಡುವಾಗ ಹಗಲು ಹೊತ್ತಿನಲ್ಲಿ ಮಾತ್ರ ಕೊಡಬೇಕು. ರಾತ್ರಿ ಹೊತ್ತಿನಲ್ಲಿ ಕೊಟ್ಟರೆ ರೈತನಿಗೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ರಾತ್ರಿ ವೇಳೆಯಲ್ಲಿ ಹಾವು, ಚೇಳು ಹಾಗೂ ಅನೇಕ ಕ್ರಿಮಿಗಳು ಹೊಲದಲ್ಲಿ ಓಡಾಡುತ್ತಿರುತ್ತವೆ

ಆದುದರಿಂದ ಹಗಲು ಹೊತ್ತು ಪಂಪುಸೆಟ್ಟುಗಳಿಗೆ ವಿದ್ಯುತ್ ಕೊಡಬೇಕು. ನಗರ ಪ್ರದೇಶಗಳಲ್ಲಿ ಯಥೇಚ್ಛವಾಗಿ ವಿದ್ಯುತ್‌ನ್ನು ಖರ್ಚು ಮಾಡುವುದು. ಗ್ರಾಮಾಂತರದಲ್ಲಿ ರೈತನಿಗೆ ಪವರ್ ಕಟ್ ಮಾಡಿ ಪಂಪು ಸೆಟ್ಟುಗಳಿಗೆ ಕರೆಂಟ್ ಇಲ್ಲದೆ ಆತ ಸಾಲ ಸೋಲ ತೀರಿಸದೆ ತುಂಬ ಕಷ್ಟ ಪಡುತ್ತಾ ಇದ್ದಾನೆ. ಅದಾದರೂ ಹೋಗಬೇಕು.

ಇನ್ನು ನೀರಾವರಿ ಇಲಾಖೆ ಬಗ್ಗೆ ಹೇಳುವುದಾದರೆ, ನೀರಾವರಿಗೆ ಕೋಟ್ಯಾನುಗಟ್ಟಲೆ ದುಡ್ಡು ತರಬೇಕಾದರೆ ನಿಮಗೆ ಶ್ರಮ ಇರಬಹುದು. ಆದರೆ ಕೇವಲ ಸಣ್ಣ ತೂಬುಗಳನ್ನು ರಿಪೇರಿ ಮಾಡುವುದಕ್ಕೆ ಲಕ್ಷಾನುಗಟ್ಟಲೆಯಾದರೂ ದುಡ್ಡು ಇಲ್ಲವೇ ಎಂದು ಕೇಳುತ್ತಾ ಇದ್ದೇನೆ. ಇವೊತ್ತು ತೂಬುಗಳ ರಿಪೇರಿ ಆಗದೇ ಇರುವುದರಿಂದ ನೀರೆಲ್ಲಾ ಸೋರಿ ಹೋಗುತ್ತಾ ಹೋಗುತ್ತಾ ಟೇಲ್ ಎಂಡ್‌ನಲ್ಲಿರುವವರಿಗೆ ನೀರೇ ಇಲ್ಲ ಅಂದರೆ ಪಾಪ ಅವರು ಏನು ಕಂದಾಯ ಕಟ್ಟಬೇಕು ಮತ್ತು ಯಾವ ರೀತಿ ಬೆಳೆಯನ್ನು ರಕ್ಷಿಸಬೇಕು ? ಯಾವ ರೀತಿಯಾಗಿ ಅಲ್ಲಿ ರೈತರು ಜೀವನ ಮಾಡಬೇಕು ಎಂದು ಯೋಚನೆ ಮಾಡಿ ನೋಡಿ. ಹಿಂದೆ ನದಿಗಳ ಕಾಲುವೆಗಳ ದಡಗಳಲ್ಲಿ ಸೋಪಾನ ಘಟ್ಟಗಳನ್ನು ಮಾಡಿದ್ದರು, ಸ್ನಾನ ಮಾಡುವ ಹೆಂಗಸರಿಗೆ, ಜನರಿಗೆ ಮತ್ತು ಇತರ ಕೆಲಸ ಮಾಡತಕ್ಕವರಿಗೆ ಮೆಟ್ಟಿಲುಗಳನ್ನು ಮಾಡಿ ಅನುಕೂಲ ಮಾಡಿಕೊಟ್ಟಿದ್ದರು. ಈಗ ಆ ಮೆಟ್ಟಿಲುಗಳು ಸೋಪಾನ ಘಟ್ಟಗಳು ಬಹುತೇಕ ಕೆಟ್ಟು ಹೋಗಿ ಎಲ್ಲಾ ಹಾಳಾಗಿ ತೊಂದರೆಯಾಗಿದೆ. ಆಮೇಲೆ ಎಲ್ಲರಿಗೂ ಆರೋಗ್ಯ ಎನ್ನುವುದು ನಿಮ್ಮ ಗುರಿ ಇರಬಹುದು. ಆದರೆ ಈಗ ಹೆಲ್ತ್ ಡಿಪಾರ್ಟ್‌ಮೆಂಟ್, ಇಟ್ ನೀಡ್ಸ್ ಎ ಹೆಲ್ತ್ ಚೆಕ್ ಅಪ್ ಎನ್ನುವ ರೀತಿಯಾಗಿದೆ. ಈ ಕುಟುಂಬ ಯೋಜನೆ ಒಳ್ಳೆಯದು ನಿಜ ಆದರೆ

ಎಲ್ಲಿಯವರೆಗೆ ಇದಕ್ಕೆ ಕಟ್ಟುನಿಟ್ಟಿನ ಖರ್ಚು ಮಾಡುವುದಕ್ಕೆ ಸಾಧ್ಯ ? ಆದುದರಿಂದ ಕುಟುಂಬ ಯೋಜನೆಯನ್ನು ಅಳವಡಿಸಿಕೊಳ್ಳದೆ ಇದ್ದವರಿಗೆ ಅವರು ಯಾವ ರೀತಿಯಲ್ಲಾದರೂ ಮಾಡಿಕೊಳ್ಳಲಿ ಕುಟುಂಬ ಯೋಜನೆಗೆ ಅವರು ಗುರಿ ಪಡೆಬೇಕು, ಗುರಿ ಪಡದೇ ಇದ್ದ ಪಕ್ಷದಲ್ಲಿ ಅದನ್ನು ಅಳವಡಿಸಿಕೊಳ್ಳದೇ ಇದ್ದ ಮೇಲೆ ಅವರು ದೇಶಕ್ಕೆ ಒಂದು ಹೊರೆ ಆಗುತ್ತಾರೆ. ಅಂತಹವರಿಗೆ ಸರ್ಕಾರಿ ಸೌಲಭ್ಯಗಳಾದ ಮನೆ ಸೈಟು ಮತ್ತು ಜಮೀನುಗಳನ್ನು ಕೊಡುವುದನ್ನು ಕಡಿಮೆ ಮಾಡಬೇಕು. ನಾನು ಲ್ಯಾಂಡ್ಸ್ ಗ್ರಾಂಟ್ ಕಮಿಟಿಯಲ್ಲಿದ್ದಾಗ ಅನೇಕ ಜನ ಬರುತ್ತಾ ಇದ್ದರು, ನಾವು ಮಕ್ಕಳೊಂದಿಗರು ನಮಗೆ ಜಮೀನು ಕೊಡಿ ಎಂದು. ಮಕ್ಕಳೊಂದಿಗರು ಎನ್ನುವುದು ಒಂದು ಕ್ವಾಲಿಫಿಕೇಷನ್ ಅಲ್ಲ ಎಂದು ನಾವು ಹೇಳುತ್ತಾ ಇದ್ದೆವು. ಆದುದರಿಂದ ಅವರುಗಳಿಗೆ ಗವರ್ನಮೆಂಟ್ ಫೆಸಿಲಿಟಿಸ್‌ನ್ನು ಕಡಿಮೆ ಮಾಡಬೇಕು. ಈ ಕೆಲಸಕ್ಕೆ ಸರ್ಕಾರದವರು ಟಾರ್ಗೆಟ್ ಕೊಟ್ಟು ಬಿಡುತ್ತಾ ಇದ್ದಾರೆ. ಪಾಪ ಎಲ್ಲಾ ಕಡೆ ನರ್ಸಸ್ ಮತ್ತು ದಾದಿಯರು ಎಲ್ಲೆಲ್ಲೋ ಹೋಗಿ ಕೇಸುಗಳನ್ನು ಹಿಡಿದುಕೊಂಡು ಬರುತ್ತಾರೆ. ನನಗೆ ತಿಳಿದ ಮಟ್ಟಿಗೆ ಮೋಸ್ಟ್ ಆಫ್ ದಿ ಕೇಸಸ್ ಆರ್ ಅನ್‌ಫಿಟ್ ಫಾರ್ ಆಪರೇಷನ್. ಆದರೂ ಕೂಡ ಆ ಒಂದು ಗುರಿ ಸಾಧಿಸಬೇಕು ಎನ್ನುವ ಒಂದೇ ಉದ್ದೇಶದಿಂದ ಡಾಕ್ಟರ್ಸ್ ಮೇಲೆ ಈ ಅಧಿಕಾರಿಗಳ ಒತ್ತಡ ತಂದು ಆಪರೇಷನ್ಸ್ ಮಾಡಿಸುತ್ತಾರೆ. ಇಂಥವರಲ್ಲಿ ಕೆಲವರಿಗೆ ಸಾಕಷ್ಟು ರಕ್ತದ ಒಂದು ಪುಷ್ಟಿ ಇರುವುದಿಲ್ಲ, ಆರೋಗ್ಯ ಇರುವುದಿಲ್ಲ. ಏನಾದರೂ ಹೆಚ್ಚು ಕಡಿಮೆಯಾದರೆ, ಆ ಡಾಕ್ಟರ್ ಕುತ್ತಿಗೆಗೆ ಬಂದಾಗ ಯಾರೂ ಕೂಡ ಅವರ ರಕ್ಷಣೆಗೆ ಹೋಗುವುದಿಲ್ಲ. ಮತ್ತೆ ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ೨೦ ವರ್ಷಗಳಿಂದ ಕೆಲಸ ಮಾಡಿದರೂ ಕೂಡ ಯಾವುದೇ ತರಹದ ಪ್ರಮೋಷನ್ ಇಲ್ಲ ಯಾವ ಇನ್‌ಸೆಂಟೀವ್ಸ್ ಇಲ್ಲ. ಹೀಗಾಗಿ ಅನೇಕರು ಆ ಇಲಾಖೆಯಲ್ಲಿ ಬೇಸರಪಟ್ಟುಕೊಂಡು ಇದ್ದಾರೆ. ಕೆಲವು ಕಡೆ ಬೇಡಿಕೆ ಇಲ್ಲದಂಥ ಔಷಧಿಗಳನ್ನು ತೆಗೆದುಕೊಂಡು ಹೋಗಿ ಹೇರುತ್ತಾ ಇದ್ದಾರೆ. ಎಲ್ಲಿಯೋ ಕುಳಿತುಕೊಂಡು ಔಷಧಿಗಳನ್ನು ಆರ್ಡರ್ ಮಾಡುವುದು, ಅದನ್ನು ಆ ಆಸ್ಪತ್ರೆಗೆ ಹಂಚುವುದು ಇದು ತಪ್ಪಬೇಕು. ಆಯಾ ಪ್ರದೇಶದ ಅವಶ್ಯಕತೆಗೆ ತಕ್ಕಂಥಾ ಔಷಧಿಗಳನ್ನು ಮಾತ್ರ ಸರಬರಾಜು ಮಾಡಬೇಕೇ ಹೊರತು ಯಾವುದೋ ಔಷಧಿಗಳನ್ನು ತೆಗೆದುಕೊಂಡು ಹೋಗಿ ಕೊಡುವುದು ತಕ್ಕುದಲ್ಲ ಎಂದು ನನ್ನ ಉದ್ದೇಶ. ಅನೇಕ ಕಡೆ ಈ ಇಲಾಖೆಯ ಸಿಬ್ಬಂದಿ ವರ್ಗಕ್ಕೆ ಕ್ವಾರ್ಟಸ್ ಇಲ್ಲ ಆದರೆ ಕ್ವಾರ್ಟರ್ಸ್ ಇರುವ ಕಡೆ ಅನೇಕರು ಅದನ್ನು ಆಕ್ಯುಪೈ ಮಾಡಿಕೊಂಡಿಲ್ಲ. ಆದ್ದರಿಂದ ಯಾವ ಸಿಬ್ಬಂದಿ ವರ್ಗದವರು ಕ್ವಾರ್ಟರ್ಸ್‌ನ್ನು ಆಕ್ಯುಪೈ ಮಾಡಿಕೊಂಡಿಲ್ಲ ಅವರುಗಳಿಗೆ ಆ ಕ್ವಾರ್ಟರ್ಸ್‌ನ್ನು ಬಿಡಿ. ಅಲ್ಲಿ ಅಂಗನವಾಡಿ ಅಥವಾ ಮಹಿಳಾ ಸಮಾಜ ಅಥವಾ ಇನ್ನಾವುದಾದರೂ ಒಂದು ಒಳ್ಳೆಯ ಕೆಲಸಕ್ಕೆ ಕೊಡುವ ರೀತಿ ಮಾಡಬೇಕೇ ವಿನಹ ಸರ್ಕಾರದ ಹಣದಿಂದ ಕಟ್ಟಿಸಿರತಕ್ಕಂಥ ಆ ಕ್ವಾರ್ಟರ್ಸ್ ಹಾಳು ಬಿದ್ದಿರುವುದಕ್ಕೆ ಅವಕಾಶ ಕೊಡಬಾರದು. ಇವತ್ತು ಸಾರಿಗೆ ಇಲಾಖೆಯು ಈ ಕೆ.ಎಸ್. ಆರ್. ಟಿ. ಸಿ. ಗೆ ಕಾಯಕಲ್ಪ ಮಾಡುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ, ಸತ್ಯವನ್ನು ಒಪ್ಪಿಕೊಳ್ಳಬೇಕು ಗ್ರಾಮಾಂತರ ಪ್ರದೇಶದಲ್ಲಿ ಪ್ರಯಾಣಿಕರು ಪಡತಕ್ಕಂಥ ಬವಣೆ ನೋಡಬೇಕು. ಗ್ರಾಮಾಂತರ ಬೇಡ ಶ್ರೀರಂಗಪಟ್ಟಣದಲ್ಲಿ ನೋಡಬೇಕು. ನಾವು ಮಂಡ್ಯದಿಂದ ಬೆಂಗಳೂರಿಗೆ ಬರಬೇಕಾದರೆ ರಸ್ತೆ ಬದಿಯಲ್ಲಿ ಒಂದೊಂದು ಸಾರಿ ೪೦ ನಿಮಿಷ ಒಂದು ಗಂಟೆ ಬಿಸಿಲಿನಲ್ಲಿ ಕಾಯಬೇಕಾಗುತ್ತದೆ. ಇಂತಹ ಪರಿಸ್ಥಿತಿ ಇರುವಾಗ ಗ್ರಾಮಾಂತರ ಪ್ರದೇಶದ ಬಗ್ಗೆ ತಾವು ಚಿಂತನೆ ಮಾಡಬೇಕು. ಅಲ್ಲಿ ಪ್ರೈವೇಟ್ ಆಪರೇಟರ್ಸ್‌ಗೆ ಹೆಚ್ಚು ಪರ್ಮಿಟ್ಸ್ ಕೊಟ್ಟು ಅವರು ಅಲ್ಲಿ ಬಸ್‌ಗಳ ಸೌಕರ್ಯ ಕೊಡುವ ರೀತಿ ದಯವಿಟ್ಟು ಮಾಡಿಕೊಡಿ. ಏಕೆಂದರೆ ಹಣ ಈ ಇಲಾಖೆಯಲ್ಲಿ ಹಣ ಸೋರಿ ಹೋಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಒಂದು ರೂಪಾಯಿ ಟಿಕೇಟ್ ಕೇಳಿದರೆ, ೭೫ ಪೈಸೆ ಕಂಡಕ್ಟರ್ ತೆಗೆದುಕೊಂಡು, ೨೫ ಪೈಸೆ ಪ್ರಯಾಣಿಕರಿಗೆ ಬಿಡುತ್ತಾನೆ. ಅನೇಕ ಸಾರಿ ನಮಗೂ ಹಾಗೆ ಮಾಡಿದ್ದಾರೆ. ಈ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶಗಳ ಸಂಚಾರಿ ವ್ಯವಸ್ಥೆಯನ್ನು ಆದಷ್ಟು ಮಟ್ಟಿಗೆ ಖಾಸಗೀ ಬಸ್ಸುಗಳ ಮಾಲೀಕರಿಗೆ ಬಿಟ್ಟು ಕೊಡುವುದು ಒಳ್ಳೆಯದು.

೧೯೭೫ ನೇ ವರ್ಷವನ್ನು ಮಹಿಳೆಯರ ವರ್ಷವೆಂದು ಕರೆದರು. ಮಹಿಳಾ ದಶಕವೆಂದು ಮಾಡುತ್ತಿದ್ದರು. ಈಗ ವರ್ಷಕ್ಕೆ ಒಂದು ದಿನವನ್ನು ಮಹಿಳಾ ದಿನಾಚರಣೆಯೆಂದು ಮಾಡುತ್ತಿದ್ದಾರೆ. ಕೆಲವು ಸ್ವಯಂ ಸಂಸ್ಥೆಗಳಲ್ಲಿ ಮಹಿಳೆಯರ ಪಾತ್ರ ಜಾಸ್ತಿ ಇದೆ. ಸರ್ಕಾರ ಅವುಗಳಿಗೆ ಅನುಕಂಪ ತೋರಿಸುವುದು ಇರಲಿ, ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯ ಮಾಡುತ್ತಿಲ್ಲ. ವರ್ಷವೆಲ್ಲಾ ಕಾದು ನೀವು ಹಣ ಕೊಡದೆ ವರ್ಷದ ಕೊನೆಯಲ್ಲಿ ಹಣ ಕೊಟ್ಟರೆ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಕಷ್ಟವಾಗುತ್ತದೆ. ಸರ್ಕಾರದ ಸುತ್ತೋಲೆಯ ಪ್ರಕಾರ ಜೂನ್ ತಿಂಗಳ ಒಳಗೆ ಅನುದಾನದ ಮೊದಲನೇ ಕಂತನ್ನು ಕೊಡಬೇಕು. ಆದರೆ, ನಾನಾ ಕಾರಣಗಳಿಂದ, ಇಲಾಖೆಯ ಸಿಬ್ಬಂದಿಗಳ ಮತ್ತು ಅಧಿಕಾರಿಗಳ ಅಲಕ್ಷ್ಯತನದಿಂದ ಈ ಅನುದಾನದ ಮೊದಲನೆ ಕಂತನ್ನೂ ಕೊಡುತ್ತಿಲ್ಲ. ಹೀಗಾಗಿ ಸ್ವಯಂ ಸಂಸ್ಥೆಗಳಲ್ಲಿ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕೆ ಇವತ್ತಿನ ಯುವ ಪೀಳಿಗೆ ಮುಂದೆ ಬರುತ್ತಿಲ್ಲ.

ಸ್ವಯಂ ಸೇವಾ ಸಂಸ್ಥೆಗಳನ್ನು ನಡೆಸುವುದೇ ಬೇಡ ಎನ್ನುವ ಮಟ್ಟಕ್ಕೆ ಬಂದಿದ್ದಾರೆ. ಇನ್ನು ಟೂರಿಸಂ ಬಗ್ಗೆ ಹೇಳುವುದಾದರೆ, ಇಡೀ ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಪ್ರವಾಸಿಗರು ಶ್ರೀರಂಗಪಟ್ಟಣಕ್ಕೆ ಬರುತ್ತಾರೆ. ಆದರೆ. ಪ್ರವಾಸಿಗರ ಸಂಖ್ಯೆಗೆ ಅನುಗುಣವಾಗಿ ಅಲ್ಲಿ ಸೌಲಭ್ಯಗಳು ಇಲ್ಲ. ಲೋಕೋಪಯೋಗಿ ಇಲಾಖೆಯವರು ೮ ಕಾಟೇಜುಗಳನ್ನು ಕಟ್ಟಿಸಿದ್ದಾರೆ, ಇವುಗಳಿಗೆ ಬೆಂಗಳೂರಿನಲ್ಲಿಯೇ ರಿಸರ್ವೇಷನ್ ಮಾಡಿಸಿಕೊಂಡು ಬರುತ್ತಾರೆ. ಆದರೆ, ಮಧ್ಯಮ ವರ್ಗದ ಪ್ರವಾಸಿಗರಿಗೆ ಏನೇನೂ ಇವುಗಳಿಂದ ಅನುಕೂಲವಾಗಿಲ್ಲ. ಜಯಚಾಮರಾಜೇಂದ್ರ ಮೆಮೋರಿಯಲ್ ಛಾಲ್ಟ್ರಿ ಇದ್ದು, ಅದನ್ನು ಆಫೀಸಿಗೆ ಕೊಟ್ಟಿದ್ದಾರೆ. ಪ್ರತಿ ದಿವಸ ೧೫-೨೦ ಬಸ್ಸಿನ ಜನ ಶ್ರೀರಂಗಪಟ್ಟಣದಲ್ಲಿ ತಂಗುತ್ತಿದ್ದು, ಹೆಂಗಸರು ಬಸ್ಸುಗಳಲ್ಲಿ ಮಲಗುತ್ತಾರೆ, ಗಂಡಸರು, ರಂಗನಾಥಸ್ವಾಮಿ ದೇವಸ್ಥಾನ ಮೈದಾನದಲ್ಲಿ ಮಲಗುತ್ತಾರೆ. ಶ್ರೀರಂಗಪಟ್ಟಣದಲ್ಲಿ ಒಂದು ಯಾತ್ರಿಕ ನಿವಾಸ''ವನ್ನು ಕಟ್ಟಿಸಿಕೊಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ. ಶ್ರೀರಂಗಪಟ್ಟಣಕ್ಕೆ ಹಿಂದೂಗಳು, ಮುಸಲ್ಮಾನರು, ಜೈನರು ಬರುತ್ತಾರೆ. ಶ್ರೀರಂಪಟ್ಟಣ ಯಾತ್ರಾ ಸ್ಥಳವಲ್ಲದೆ, ಪ್ರೇಕ್ಷಣೀಯ ಸ್ಥಳ ಕೂಡ ಆಗಿದೆ. ಇನ್ನು ಕೆ. ಆರ್. ಎಸ್. ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಕಾವೇರಿ ನೀರನ್ನು ಬೆಂಗಳೂರು, ಮಂಡ್ಯ ಹಾಗೂ ಮೈಸೂರು ನಗರಗಳಿಗೆ ಕುಡಿಯುವ ನೀರಿಗಾಗಿ ಉಪಯೋಗಿಸುತ್ತಿದ್ದಾರೆ. ಕೃಷ್ಣರಾಜಸಾಗರವನ್ನು ಕಟ್ಟುವಾಗ ಜಮೀನು ಕಳೆದುಕೊಂಡು ಬೇರೆ ಕಡೆ ಬಂದು ನೆಲೆಸಿರತಕ್ಕ ಜನಗಳಿಗೆ ನೀರಿನ ಅನುಕೂಲ ಮಾಡಿಕೊಂಡಬೇಕೆಂದು ಹೇಳುತ್ತೇನೆ. ಕೆ. ಆರ್. ಎಸ್. ನಿಂದ ಪ್ರತಿ ತಿಂಗಳು ಒಂದು ಲಕ್ಷಕ್ಕೂ ಮೇಲೆ ಟ್ಯಾಕ್ಸ್ ಕಲೆಕ್ಟ್ ಆಗುತ್ತಿದ್ದು, ಆ ಹಣವನ್ನು ಅದರ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಬೇಕೆಂದು ಹೇಳುತ್ತೇನೆ. ಇವತ್ತು ರಾಜ್ಯದಲ್ಲಿ ಜಾತಿಗೊಂದು, ಜಿಲ್ಲೆಗೊಂದು ಮೆಡಿಕಲ್ ಕಾಲೇಜು, ಇಂಜಿನಿಯರ್ ಕಾಲೇಜು ಕೊಟ್ಟು ವಿದ್ಯೆಯ ಮಟ್ಟ ಸಂಪೂರ್ಣವಾಗಿ ಕಡಿಮೆಯಾಗಿದೆ. ಹಳ್ಳಿಗಾಡಿನಲ್ಲಿರತಕ್ಕ ಮಕ್ಕಳು ''ಏಕಲವ್ಯರುಗಳಲ್ಲ'' ಅವರುಗಳು ಉಪಾಧ್ಯಾಯರುಗಳಿಲ್ಲದೆ ಪಾಠಗಳನ್ನು ಕಲಿಯುವುದಕ್ಕೆ ಆಗುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಖಾಲಿ ಇರತಕ್ಕ ಉಪಾಧ್ಯಾಯರುಗಳ ಹುದ್ದೆಗಳನ್ನು ಆದಷ್ಟು ಬೇಗ ಭರ್ತಿ ಮಾಡಬೇಕೆಂದು ಹೇಳುತ್ತೇನೆ. ಈಗಾಗಲೇ ಪರೀಕ್ಷೆಗಳು ನಡೆಯುತ್ತಿವೆ, ಪರೀಕ್ಷಾ ಕೇಂದ್ರಗಳಲ್ಲಿ ಆಗತಕ್ಕ ಅನ್ಯಾಯಗಳು ಒಂದೆರಡಲ್ಲ. ಪರೀಕ್ಷಾ ಕೇಂದ್ರದಿಂದ ೧೦೦ ಮೀಟರ್ ಒಳಗೆ ಯಾರೂ ಗದ್ದಲ ಮಾಡಬಾರದೆಂದು ಇದೆ. ಪರೀಕ್ಷೆ ನಡೆಯುತ್ತಿರುವ ಕೊಠಡಿಗಳ ಹತ್ತಿರ ಬಂದು ಕಿಟಕಿಗಳಲ್ಲಿ ಚೀಟಿಗಳನ್ನು ಎಸೆಯುವುದು, ಪರೀಕ್ಷಾ ಮೇಲ್ವಿಚಾರಕರಿಗೆ ಬೆದರಿಕೆ ಹಾಕುವುದು ನಡೆಯುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಪರೀಕ್ಷಾ ಕೇಂದ್ರದಿಂದ ೧೦೦ ಮೀಟರ್ ಹೊರಗೆ ಪೋಲೀಸ್ ಪಹರೆಯನ್ನು ಹೆಚ್ಚಿಸಿ ಗದ್ದಲಕ್ಕೆ ಅವಕಾಶವಾಗದಂತೆ ನೋಡಿಕೊಳ್ಳಬೇಕು. ಇದಲ್ಲದೆ ವ್ಯಾಲ್ಯುವೇಷನ್ ಸೆಂಟ್ರುಗಳಿಗೆ ಸರ್‌ಪ್ರೈಸ್ ವಿಸಿಟ್ ಮಾಡಿದರೆ ಒಳ್ಳೆಯದು. ವ್ಯಾಲ್ಯುವೇಷನ್‌ಗೆ ಬರತಕ್ಕ ಉಪಾಧ್ಯಾಯರುಗಳು ಉತ್ತರ ಪತ್ರಿಕೆಯನ್ನು ಓದುವುದೇ ಇಲ್ಲ. ವಿದ್ಯಾರ್ಥಿಗಳು ಹೆಚ್ಚಿಗೆ ಬರೆದಿದ್ದರೆ ೫ ನಂಬರು ಕೊಡುವುದು, ಇಲ್ಲದೇ ಹೋದರೆ ಹಾಗೆ ಬಿಡುವುದು. ಇದರಿಂದ ಪ್ರತಿಭಾವಂತ ವಿದ್ಯಾರ್ಥಿಗಳ ಭವಿಷ್ಯ ಹಾಳು ಮಾಡಿದಂತಾಗುತ್ತದೆ, ಈ ವ್ಯಾಲ್ಯುಯೇಷನ್ ಮಾಡುವಂಥ ಸಂದರ್ಭದಲ್ಲಿ ಬೆಳಿಗ್ಗೆ ಒಂದು ಕಟ್ಟು, ಮಧ್ಯಾಹ್ನ ಒಂದು ಕಟ್ಟು ಆನ್ಸರ್ ಪೇಪರ್ ತೆಗೆದುಕೊಂಡು ವ್ಯಾಲ್ಯುಯೇಷನ್ ಮಾಡಬೇಕು. ಕೆಲವು ಕಡೆ ಏನಾಗುತ್ತದೆ ಅಂದರೆ ಎರಡು ಕಟ್ಟುಗಳನ್ನು ಒಟ್ಟಿಗೆ ತೆಗೆದುಕೊಂಡು ವ್ಯಾಲ್ಯುಯೇಷನ್ ಮಾಡಿಬಿಟ್ಟು ಡಿಡಿಪಿಐ ಆಫೀಸು ಮತ್ತು ವಿಧಾನ ಸೌಧದ ಕಡೆ ಟ್ರಾನ್ಸ್‌ಫರ್ ವಿಷಯವಾಗಿ ಓಡಾಡುತ್ತಿರುತ್ತಾರೆಯೇ ವಿನಹ ಪರೀಕ್ಷೆಗಳಿಗೆ ಹಾಜರಾದಂಥ ವಿದ್ಯಾರ್ಥಿಗಳ ಉತ್ತರ ಪತ್ರಿಕೆಯನ್ನು ಸರಿಯಾಗಿ ವ್ಯಾಲ್ಯುಯೇಟ್ ಮಾಡುವುದಿಲ್ಲ. ಇನ್ನು ರಿಸಲ್ಟ್ ಅನೌನ್ಸ್ ಆದ ಮೇಲೆ ರೀ ಟೋಟಲಿಂಗ್‌ಗೆ ಅವಕಾಶವಿದೆಯೇ ವಿನಹ ರೀ ವ್ಯಾಲ್ಯುಯೇಷನ್‌ಗೆ ಅವಕಾಶ ಇಲ್ಲ. ಆದ್ದರಿಂದ, ದಯವಿಟ್ಟು ರೀ ವ್ಯಾಲ್ಯುಯೇಷನ್‌ಗೂ ಅವಕಾಶ ಮಾಡಿಕೊಡಬೇಕು. ಆ ರೀತಿ ಮಾಡಿ ಕೊಟ್ಟರೆ, ವ್ಯಾಲ್ಯುಯೇಷನ್ ಮಾಡಿದಂಥ ಮಾಸ್ತರಿಗೂ ಸ್ವಲ್ಪ ಆದರೂ ಭಯ ಬರುತ್ತದೆ. ಕೋರ್ಟಿಗೆ ಹೋಗಿ ಹಣ ಕಟ್ಟಿದರೆ ಮಾತ್ರ ರೀ ವ್ಯಾಲ್ಯುಯೇಷನ್‌ಗೆ ಅವಕಾಶ ಇದೆ. ಅಂತಹ ಸಂದರ್ಭದಲ್ಲಿ ಯಾರು ತಪ್ಪು ಮಾಡಿರುತ್ತಾರೆ ಅಂತಹ ಉಪಾಧ್ಯಾಯರಿಗೆ ಕಠಿಣ ಶಿಕ್ಷೆ ಕೊಡಬೇಕೆಂದು ನಾನು ಸಲಹೆ ಕೊಡಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವ್ಯಾಲ್ಯುಯೇಷನ್ ಸರಿಯಾಗಿ ಮಾಡದೇ ಇರುವುದರಿಂದ, ಬಹಳ ಅನ್ಯಾಯವಾಗುತ್ತಿದೆ. ಏಕೆಂದರೆ ಎಲ್ಲರೂ ಸಹ ಕೋರ್ಟಿಗೆ ಹೋಗಲಿಕ್ಕೆ ಅವಕಾಶ ಇಲ್ಲ. ಈ ದೃಷ್ಟಿಯಿಂದ ಕೋರ್ಟಿಗೆ ಹೋಗದೇ ಇದ್ದರೂ ರೀವ್ಯಾಲ್ಯುಯೇಷನ್ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಈಗ ಒಬ್ಬ ಉಪಾಧ್ಯಾಯರಿಗೆ ೧೫ ಆನ್ಸರ್ ಪತ್ರಿಕೆಗಳನ್ನು ಕೊಟ್ಟರೆ ಅವರು ವಿದ್ಯಾರ್ಥಿಗಳ ಬರವಣಿಗೆ ತಕ್ಕ ಹಾಗೆ ಅಂಕಗಳನ್ನು ಕೊಡುವಂತಾದ್ದು ಇದೆ.

ಉಪಾಧ್ಯಕ್ಷರು.—ಇನ್ನೂ ಐದಾರು ಜನ ಸದಸ್ಯರು ಮಾತನಾಡುವುದು ಇದ್ದಾರೆ ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀಮತಿ ದಮಯಂತಿ ಬೋರೇಗೌಡ.—ಮಾನ್ಯ ಉಪಾಧ್ಯಕ್ಷರೆ, ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಹೆಚ್. ಎಸ್. ಕೌಜಲಗಿ (ಬೈಲ ಹೊಂಗಲ್).—ಸನ್ಮಾನ್ಯ ಅಧ್ಯಕ್ಷಿಣಿಯವರೆ, ಹಿರಿಯ ಸದಸ್ಯರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ರಾಜ್ಯಪಾಲರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುವ ನಿರ್ಣಯದ ಮೇಲೆ ಕೆಲವು ಮಾತನಾಡಲು ನಾನು ಬಯಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಹೊಸ ವಿಚಾರ, ಧೋರಣೆ ಇಲ್ಲದಿದ್ದರೂ ಸಹ ಅವರು ತಮ್ಮ ಅನಿಸಿಕೆಗಳನ್ನು ಮಾತ್ರ ಹೇಳಿದ್ದಾರೆಂದು ನಾನು ತಮ್ಮ ಮುಂದೆ ಹೇಳಲಿಕ್ಕೆ ಬಯಸುತ್ತೇನೆ ಮತ್ತು ನಾನು ಅದನ್ನು ವಿರೋಧಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷಿಣಿಯವರೆ, ನಿಜವಾಗಿಯೂ ನಾನು ತಿಳಿದುಕೊಂಡಿದ್ದು, ರಾಜ್ಯದಲ್ಲಿ ಹೊಸ ಸರ್ಕಾರ ಬಂದಕೂಡಲೇ ಹೊಸ ಸರ್ಕಾರ ಕೆಲವು ಒಳ್ಳೆಯ ಕೆಲಸಗಳನ್ನು ಹಾಗೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದೆಂದು ತಿಳಿದುಕೊಂಡಿದ್ದೆ. ಆದರೆ ಹೊಸ ಸರ್ಕಾರ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು ಬಿಡಲಿ, ಅವರು ನಮ್ಮ ಸರ್ಕಾರ ಹಾಕಿಕೊಂಡಿದ್ದಂಥ ಒಳ್ಳೆಯ ಕೆಲವು ಕಾರ್ಯಕ್ರಮಗಳನ್ನು ಕೈ ಬಿಟ್ಟಿದ್ದಾರೆ. ಇದು ನಿಜವಾಗಿಯೂ ಬಹಳ ವಿಷಾದ ಎನಿಸುತ್ತದೆ. ಸನ್ಮಾನ್ಯ ಅಧ್ಯಕ್ಷಿಣಿಯವರೆ, ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ವಿಷಯದಲ್ಲಿ ಹೊಸ ಸರ್ಕಾರವು ಮಹಾಜನ್ ಆಯೋಗದ ವರದಿಯೇ ಅಂತಿಮವಾದುದು ಎಂದು ಈ ಮನೆಯ ನಿರ್ಣಯದ ತೀರ್ಪನ್ನು ಮತ್ತೊಮ್ಮೆ ಪುನರುಚ್ಚರಿಸಿದೆ. ಅದಕ್ಕೆ ನಾನು ಅಭಿನಂದಿಸುತ್ತೇನೆ. ಈ ಒಂದು ನಿಲುವಿಗೆ ಸರ್ಕಾರ ಯಾವುದೇ ರೀತಿಯಿಂದ ಹಿಂದೆ ಮುಂದೆ ಬೀಳಬಾರದೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಆದರೆ ಮಹಾರಾಷ್ಟ್ರ ನಾಯಕರು ಮೇಲಿಂದ ಮೇಲೆ ಕೇಂದ್ರ ಸರ್ಕಾರದ ನಾಯಕರ ಮೇಲೆ ಒತ್ತಾಯವನ್ನು ತಂದು ಜನಗಣತಿಯ ಪ್ರಕಾರ ಈ ವಿಷಯವನ್ನು ಬಿಡಿಸಬೇಕೆಂದು ಹೇಳುತ್ತಿದ್ದಾರೆ. ಮೊನ್ನೆಯ ದಿವಸದ ಪತ್ರಿಕೆಯನ್ನು ತಾವು ಓದಿರಬೇಕು, ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಪುಣೆಯಲ್ಲಿ ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಈ ವಿಚಾರದ ಬಗ್ಗೆ ಚರ್ಚೆ ಮಾಡಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಮಹಾಜನ್ ವರದಿಯ ಬಗ್ಗೆ ಆಗಾಗ ಮಾತನಾಡುವಂಥದ್ದು ಎಲ್ಲಾ ಮುಗಿದು ಹೋಗಿದೆ. ಈಗ ಅದು ಪಾರ್ಲಿಮೆಂಟಿನ ಎದುರಿನಲ್ಲಿ ಇದೆ. ಈ ಸಂದರ್ಭದಲ್ಲಿ ತಾವು ವಿ. ಪಿ. ಸಿಂಗ್ ಅವರ ಮೇಲೆ ಒತ್ತಾಯ ತಂದರೆ ಒಳ್ಳೆಯದು. ಈಗಾಗಲೇ ಇದರ ಬಗ್ಗೆ ನಮ್ಮ ಮುಖ್ಯಮಂತ್ರಿಗಳು ಇದರಲ್ಲಿ ಬದಲಾಗುವುದು ಇಲ್ಲ ಎಂದು ಹೇಳಿದ್ದಾರೆ. ಆದ್ದರಿಂದ, ನೀವು ಅಲ್ಲಿ ಒತ್ತಾಯ ತಂದರೆ ಒಂದೇ ದಿವಸದಲ್ಲಿ ಇದು ಮುಗಿದು ಹೋಗುತ್ತದೆ. ಏಕೆಂದರೆ, ಈ ಮನೆಯ ರೆಸಲ್ಯೂಷನ್ ಇದೆ, ಕಾಂಗ್ರೆಸ್ ವರ್ಕಿಂಗ್ ಕಮಿಟಿ ರೆಸಲ್ಯೂಷನ್ ಇದೆ, ಎ. ಐ. ಸಿ. ಸಿ. ರೆಸಲ್ಯೂಷನ್ ಇದೆ. ಇದು ಒಂದೇ ದಿವಸದಲ್ಲಿ ಆಗುವಂಥ ಕೆಲಸ, ತಾವು ಅಲ್ಲಿ ಒತ್ತಡ ತಂದು ಮಾಡಿಸಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಎಸ್. ಕೌಜಲಗಿ.—ಇಲ್ಲಿಯವರೆಗೆ ತಮ್ಮ ಸರ್ಕಾರ ಕೇಂದ್ರದಲ್ಲಿ ಇತ್ತು, ತಾವು ಮಾಡಿಸಲಿಲ್ಲ. ಇನ್ನಾದರೂ ನಾವು ಮಾಡುತ್ತೇವೆ ಎನ್ನುವ ಆಶ್ವಾಸನೆ ಕೊಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಮಹಾಜನ್ ವರದಿ ಮೂಲೆ ಗುಂಪಾಗಬೇಕಾದರೆ ಕಾಂಗ್ರೆಸ್ (ಐ) ಸರ್ಕಾರವೇ ಕಾರಣ.

ಶ್ರೀ ಎಚ್. ಎಸ್. ಕೌಜಲಗಿ.—ಬೆಳಗಾಂನಲ್ಲಿನ ನಗರ ಸಭೆ ಕಚೇರಿಯಲ್ಲ ಕೇಸರಿ ಬಾವುಟವನ್ನು ತೆಗೆಸುವ ಬಗ್ಗೆ ಮೇಲಿಂದ ಮೇಲೆ ಇಲ್ಲಿ ಚರ್ಚೆಯಾಗುತ್ತಿದೆ ಆದರೆ ಯಾವ ಸರ್ಕಾರ ಕೂಡ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಈ ಹೊಸ ಸರಕಾರವಾದರೂ ಇದರ ಬಗ್ಗೆ ದಿಟ್ಟ ಕ್ರಮವನ್ನು ತೆಗೆದುಕೊಂಡು ಇದನ್ನು ತೆಗೆಸಬೇಕು. ಬೆಂಗಳೂರು ಮಹಾ ನಗರ ಪಾಲಿಕೆಯಲ್ಲಿ ಕನ್ನಡ ಧ್ವಜವನ್ನು ಕನ್ನಡಿಗರು ಹಾರಿಸಲು ಹೋದಾಗ ಅವರನ್ನು ಅರೆಸ್ಟ್ ಮಾಡಿದರು ತಾವು ಇದನ್ನು ಪತ್ರಿಕೆಯಲ್ಲಿಯೂ ಕೂಡ ಓದಿರಬಹುದು. ಇಂತಹ ಮಲತಾಯಿ ಧೋರಣೆಯನ್ನು ಸರಕಾರ ವಿಚಾರ ಮಾಡಬೇಕು. ಇನ್ನು ಗಡಿಅಭಿವೃದ್ಧಿಸಲು ವಾಗಿ ಕೆಲವು ವಿಚಾರಗಳನ್ನು ಹೇಳುತ್ತಿದ್ದೇನೆ. ಶ್ರೀಮಾನ್ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಗಡಿ ಭಾಗದ ಅಭಿವೃದ್ಧಿಯ ಸಲುವಾಗಿ ಎಲ್ಲಾ ಡಿವಿಜನ್ ಆಫೀಸುಗಳನ್ನು

ಬೆಳಗಾಂಗೆ ವರ್ಗ ಮಾಡಬೇಕೆಂದು ನಿರ್ಣಯ ತೆಗೆದುಕೊಂಡರು. ಆದರೆ ಅದರ ಪ್ರಕಾರ ಯಾವುದೇ ಒಂದು ಕೆಲಸ ಆಗಿರುವುದಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಧಾರವಾಡದಲ್ಲಿರುವಂತಹ ಚೀಫ್ ಇಂಜಿನಿಯರ್, ಸಿ ಅಂಡ್ ಬಿ ಯ ಆಫೀಸನ್ನು ಬೆಳಗಾಂಗೆ ವರ್ಗ ಮಾಡಬೇಕು. ಹುಬ್ಬಳ್ಳಿಯಲ್ಲಿರುವಂತಹ ಡಿವಿಜನ್ ಕಚೇರಿಯನ್ನು ಬೆಳಗಾಂಗೆ ವರ್ಗ ಮಾಡಬೇಕು, ಅದೇ ರೀತಿಯಲ್ಲಿ ಧಾರವಾಡದಲ್ಲಿರುವುದನ್ನೂ ಕೂಡ ಬೆಳಗಾಂಗೆ ವರ್ಗ ಮಾಡಬೇಕು. ಮತ್ತು ಬೆಳಗಾಂ ನಲ್ಲಿ ಹೈಕೋರ್ಟ್ ಅನ್ನು ಸ್ಥಾಪಿಸಲು ಅವಕಾಶ ಮಾಡಿಕೊಡಬೇಕು. ಇನ್ನು ಔದ್ಯೋಗೀಕರಣದ ಸಲುವಾಗಿ ನಮ್ಮಲ್ಲಿ ಸ್ಥಳ ಇವೆ ಅದನ್ನು ಉಪಯೋಗ ಮಾಡಿಕೊಂಡು ಅಲ್ಲಿ ಇಂಡಸ್ಟ್ರೀಯಲ್ ಎಸ್ಟೇಟ್ ಅನ್ನು ಹೆಚ್ಚು ಮಾಡುವ ಮೂಲಕ ಕನ್ನಡದ ಜನರು ಅಲ್ಲಿ ನೆಲೆಸಲು ಅವಕಾಶ ಮಾಡಿಕೊಡಬೇಕು. ಇನ್ನು ಬೆಳಗಾಂಗೆ ಕನ್ನಡ ಬಲ್ಲಂತಹ ಅಧಿಕಾರಿಯನ್ನು ಹಾಕಬೇಕು. ನೂರಕ್ಕೆ ೮೦ ಮಂದಿ ಮರಾಠಿ ಬರುವಂತಹ ಅಧಿಕಾರಿಗಳನ್ನು ಅಲ್ಲಿಗೆ ಪೋಸ್ಟಿಂಗ್ಸ್ ಮಾಡಿದ್ದಾರೆ. ಮರಾಠಿ ಬರುವಂತಹ ಅಧಿಕಾರಿಯನ್ನು ಬೇರೆ ಕಡೆಗೆ ಹಾಕಿ ಅಲ್ಲಿಗೆ ಕನ್ನಡ ಬರುವಂತಹ ಅಧಿಕಾರಿಗಳನ್ನು ಹಾಕಿ ಕನ್ನಡ ಬೆಳೆಯಲು ಅವಕಾಶ ಮಾಡಿಕೊಡಬೇಕು. ನಮ್ಮ ಸದನದ ಹಿರಿಯ ಸದಸ್ಯರಾದ ಶ್ರೀ ಹೆಗಡೆಯವರು ಯೋಜನಾ ಆಯೋಗದ ಉಪಾಧ್ಯಕ್ಷರಾಗಿರುವಂತಹ ಸಂಗತಿ ಬಹಳ ಹೆಮ್ಮೆಯ ಸಂಗತಿಯಾಗಿದೆ. ಇದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಮೂದಿಸದೇ ಇರುವುದು ಬಹಳ ಖಂಡನೀಯವಾದುದು, ಇದಕ್ಕಾಗಿ ನಾನು ವಿಷಾದಿಸುತ್ತೇನೆ. ಇನ್ನು ಸರಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ ರಿಂದ ೫೫ಕ್ಕೆ ಇಳಿಸುತ್ತೇವೆಂದು ಹೇಳಿದ್ದೀರಿ ಇದೇನೂ ಮಕ್ಕಳಾಟ ಅಲ್ಲ ಅಷ್ಟು ಸುಲಭ ಅಲ್ಲ. ಕೇರಳ ಒಂದು ರಾಜ್ಯದಲ್ಲಿ ಬಿಟ್ಟರೆ ಬಾಕಿ ಎಲ್ಲಾ ರಾಜ್ಯಗಳಲ್ಲೂ ಕೂಡ ೫೫ ಇದೆ. ಕೇಂದ್ರ ಸರಕಾರದಲ್ಲಿ ಕೂಡ ೫೮ ಇದೆ ಅಲ್ಲದೆ ಕೋರ್ಟ್, ಬ್ಯಾಂಕ್‌ಗಳಲ್ಲಿ ಕೂಡ ೫೮ ನಿವೃತ್ತಿ ವಯಸ್ಸು ಎಂದು ಇದೆ. ಇಲ್ಲಿಯೂ ಕೂಡ ೫೮ ವರ್ಷಕ್ಕೆ ನಿವೃತ್ತಿ ವಯಸ್ಸನ್ನು ನಿಗದಿ ಪಡಿಸಬೇಕು. ಇದನ್ನು ಯಾವುದೇ ರೀತಿಯಿಂದಲೂ ಕೂಡ ಕಡಿಮೆ ಮಾಡಬಾರದು. ಆಂಧ್ರದಲ್ಲಿ ಆಗಿನ ಮುಖ್ಯ ಮಂತ್ರಿಗಳು ೫೮ ಇದ್ದುದನ್ನು ೫೫ ಎಂದು ಮಾಡಿದರು. ಆಗ ಅಲ್ಲಿ ಯಾರೋ ಸುಪ್ರೀಂ ಕೋರ್ಟಿಗೆ ಹೋದರು ಇದರಿಂದಾಗಿ ಅಲ್ಲಿ ಅವರಿಗೆ ಹಣಕಾಸಿನ ಭಾರ ಆಯಿತು. ಆ ರಾಜ್ಯದ ಮೇಲೆ ಅದು ಪರಿಣಾಮ ಆಯಿತು. ಅದನ್ನು ಯಾರೂ ಕೂಡ ಹೇಳಲಿಕ್ಕೆ ಸಾಧ್ಯವಿಲ್ಲ. ನಿವೃತ್ತಿ ವಯಸ್ಸನ್ನು ೫೮ಕ್ಕೆ ನಿಗದಿ ಪಡಿಸಿ ಅದನ್ನೇ ಮುಂದುವರಿಸಬೇಕು. ಇತ್ತೀಚಿಗೆ ಸರ್ಕಾರೀ ನೌಕರರು ಸ್ಟ್ರೈಕ್ ಮಾಡಲಿಕ್ಕೆ ಹೋದಾಗ ಅವರನ್ನು ಹೆದರಿಸುವ ಸಲುವಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆಯೇ ಹೊರತು ಬೇರೆ ಯಾವುದೇ ಕಾರಣದಿಂದಲ್ಲವೆಂದು ನಾನಾದರೂ ಹೇಳುತ್ತೇನೆ. ಸರ್ಕಾರೀ ನೌಕರರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸೌಹಾರ್ದತೆಯಿಂದ ಅವರಿಂದ ಕೆಲಸವನ್ನು ನೀವು ತೆಗೆದುಕೊಳ್ಳತಕ್ಕ ಪ್ರಯತ್ನ ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಇನ್ನು ಒಂದು ಮಾತನ್ನು ಈ ಸಂದರ್ಭದಲ್ಲಿ ನಾನಾದರೂ ಹೇಳಬಯಸುತ್ತೇನೆ, ಅದೇನೆಂದರೆ ಸರ್ಕಾರೀ ನೌಕರರಿಗೆ ೫೮ ವರ್ಷ ಎಂದು ನಿಗದಿ ಮಾಡಿರುವಾಗ ರಾಜಕಾರಣಿಗಳಿಗೂ ಕೂಡ ೫೮ ವರ್ಷ ಎಂದು ಏತಕ್ಕೆ ನಿಗದಿ ಮಾಡಬಾರದು ? ರಾಜಕಾರಣಿಗಳಲ್ಲಿ ೬೦ ವರ್ಷ, ೭೦ ವರ್ಷ, ೮೦ ವರ್ಷ ಆಗಿರತಕ್ಕಂಥವರೂ ಇದ್ದಾರೆ. ಇವತ್ತೂ ಕೂಡ ಅಂಥವರು ಮಂತ್ರಿಯಾಗಿದ್ದಾರೆ. ಮಂತ್ರಿಗಳ ಕೈ ನಡುಗುತ್ತಿರುತ್ತದೆ, ನಾನು ಒಬ್ಬ ಮಂತ್ರಿಯನ್ನು ನೋಡಲಿಕ್ಕೆ ಹೋದಾಗ ಅವರು ಹೇಳಿದರು ನನಗೆ ಈಗ ಬ್ಲಡ್ ಪ್ರೆಷರ್ ಜಾಸ್ತಿಯಾಗಿದೆ ಆದ್ದರಿಂದ ಯಾರನ್ನೂ ನಾನು ನೋಡುವುದಕ್ಕಾಗುವುದಿಲ್ಲ ಎಂದು. ಇನ್ನೊಬ್ಬ ಮಂತ್ರಿಯ ಹತ್ತಿರ ಹೋದಾಗ ಅವರು ನನಗೆ ಬರೆಯಲು ಸಾಧ್ಯವಾಗುವುದಿಲ್ಲ, ಆದ್ದರಿಂದ ನನ್ನ ಪಿ.ಎ. ಬರುತ್ತಾರೆ. ಅವರು ಬರೆದ ನಂತರ ನಾನು ನೋಡುತ್ತೇನೆ ಎಂದು ಹೇಳಿದರು. ಅಂದರೆ ಕೆಲವು ಮಂತ್ರಿಗಳಿಗೆ ತಮ್ಮ ಕೈಯಿಂದ ಏನನ್ನೂ ಕೂಡ ಬರೆಯಲು ಸಾಧ್ಯವಿಲ್ಲ. ಅದಮೇಲೆ ಅವರನ್ನೂ ಕೂಡ ೫೫ ವರ್ಷಕ್ಕೆ ಏತಕ್ಕೆ ರಿಟೈರ್ಡ್ ಮಾಡಬಾರದು ? ರಾಜಕಾರಣಿಗಳಿಗೆ ೨ ಟರ್ಮ್, ೩ ಟರ್ಮ್ ಎಂದು ಮಾಡಬೇಕು.

ಶ್ರೀ ಬಿ. ಶಿವಣ್ಣ — ನೀವು ರಾಜಕಾರಣಿಗಳ ಬಗ್ಗೆ ಮಾತನಾಡುತ್ತಿದ್ದೀರಿ. ಈಗ ನಿಮ್ಮ ವಯಸ್ಸು ಎಷ್ಟು ? ನಿಮಗೆ ಇನ್ನೂ ಎಷ್ಟು ವರ್ಷ ಇದೆ ?

ಶ್ರೀ ಹೆಚ್. ಎಸ್. ಕೌಜಲಗಿ — ನನಗೆ ಇನ್ನೂ ೧೦ ವರ್ಷ ಇದೆ. ನಾನು ಅದನ್ನು ನೋಡಿಕೊಂಡೇ ಹೇಳಿದ್ದುದು.

ಮಾನ್ಯ ಉಪಾಧ್ಯಕ್ಷಿಣಿಯವರೆ, ಇನ್ನೊಂದು ವಿಚಾರ ಎಂದರೆ ಈ ಮಂತ್ರಿಮಂಡಲ ಏನಿದೆ ಇದು ಸಂಪೂರ್ಣವಾದ ಮಂತ್ರಿಮಂಡಲ ಅಲ್ಲ, ಏಕೆಂದರೆ ಈ ಮಂತ್ರಿಮಂಡಲದಲ್ಲಿ ನಮ್ಮ ಉತ್ತರ ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ೪ ಜಿಲ್ಲೆಗಳಿಗೆ ಒಬ್ಬರನ್ನು ಮಂತ್ರಿಯನ್ನಾಗಿ ಮಾಡಿದ್ದಾರೆ

ಅದೂ ಕೂಡ ಮಂತ್ರಿಸ್ಥಾನವೂ ಅಲ್ಲ. ಅದು ವಿಪ್ ಹುದ್ದೆ. ಮಾನ್ಯ ಮಲ್ಲಾರಗೌಡ ಪಾಟೀಲರನ್ನು ವಿಪ್ ಮಾಡಿ ಕೂಡಿಸಿದ್ದಾರೆ. ಅವರಿಗೆ ಮಂತ್ರಿ ಪದವಿಯನ್ನು ಕೊಟ್ಟಿಲ್ಲ.

ಇನ್ನು ಎಜುಕೇಷನ್ ಬಗ್ಗೆ ಹೇಳುವುದಾದರೆ, ಮೊದಲು ಪ್ರೈಮರಿ ಮತ್ತು ಹೈಸ್ಕೂಲುಗಳನ್ನು ತೆರೆಯುವ ವಿಚಾರ. ಖಾಸಗಿಯವರು ಹೈಸ್ಕೂಲನ್ನು ತೆರೆದರೆ ನೋ ಗ್ರ್ಯಾಂಟ್ ಫಾರ್ ಎವರ್ ಎಂದು ಆಜ್ಞೆ ಇದೆ. ಅಂದರೆ ಸರ್ಕಾರದವರು ತಾವೂ ಹೈಸ್ಕೂಲನ್ನು ತೆರೆಯುವುದಿಲ್ಲ, ಸಾರ್ವಜನಿಕರೂ ತೆರೆಯುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಇದರಿಂದಾಗಿ ಹಳ್ಳಿಯ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಬಹಳ ಅನಾನುಕೂಲವಾಗುತ್ತಿದೆ. ನಾನಾದರೂ ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ, ಸರ್ಕಾರದವರಾದರೂ ಹೈಸ್ಕೂಲುಗಳನ್ನು ತೆರೆಯಿರಿ, ಇಲ್ಲವೇ ಮೊದಲು ಇದ್ದಂತೆ ೫ ವರ್ಷ ಆದಮೇಲೆ ಗ್ರ್ಯಾಂಟ್‌ನ್ನು ಕೊಡತಕ್ಕ ವ್ಯವಸ್ಥೆಯನ್ನಾದರೂ ಜಾರಿಗೆ ಕೊಡಿ.

ಇನ್ನು ಕನ್ನಡ ಶಾಲೆಗಳ ಪರಿಸ್ಥಿತಿಯನ್ನು ಹೇಳುವುದಕ್ಕಾಗುವುದಿಲ್ಲ. ನಮ್ಮ ಬೆಳಗಾಂ ಒಂದೇ ಜಿಲ್ಲೆಯಲ್ಲಿ ೧೨೦೦ ಹುದ್ದೆಗಳು ಖಾಲಿ ಇವೆ. ಹೈಸ್ಕೂಲುಗಳಲ್ಲಿ ಯಾವುದೇ ಅನುಕೂಲಗಳು ಇಲ್ಲ, ಮೊದಲನೆಯದಾಗಿ ಕಟ್ಟಡಗಳೇ ಇಲ್ಲ. ಆದ್ದರಿಂದ ಕೂಡಲೇ ಕಟ್ಟಡ ಇಲ್ಲದ ಶಾಲೆಗಳಿಗೆ ಕಟ್ಟಡಗಳನ್ನು ಕಟ್ಟಿಸಿಕೊಟ್ಟು ಅಗತ್ಯವಾದ ಹುದ್ದೆಗಳನ್ನು ತುಂಬುವ ಕೆಲಸ ಮಾಡಬೇಕು. ಮುಳುಗಡೆಯಾದ ಪ್ರದೇಶದಲ್ಲಿ ಹೈಸ್ಕೂಲುಗಳನ್ನು ತೆರೆಯುವುದಕ್ಕೆ ಸರ್ಕಾರದವರು ಮುಂದೆ ಬರುತ್ತಿಲ್ಲ. ಅಲ್ಲಿಯ ಜನರು ಹೊಲ, ಮನೆಗಳನ್ನು ಕಳೆದುಕೊಂಡಿದ್ದಾರೆ. ಅವರ ಮಕ್ಕಳಿಗೆ ವಿದ್ಯಾಭ್ಯಾಸದ ಸೌಕರ್ಯವಿಲ್ಲ. ನಮ್ಮ ಸವದತ್ತಿ ಜಿಲ್ಲೆಯ ಸುತ್ತಗಟ್ಟಿ ಗ್ರಾಮದಲ್ಲಿ ಒಂದು ಹೈಸ್ಕೂಲನ್ನು ಮಂಜೂರು ಮಾಡಬೇಕೆಂದು ಅಲ್ಲಿಯ ಜನರು ಕೇಳಿದ್ದರು. ಅದರ ಪ್ರಕಾರ ಅಲ್ಲಿ ತೆರೆಯುವಂತೆ ಹಿಂದಿನ ಮುಖ್ಯಮಂತ್ರಿಗಳು ಆದೇಶವನ್ನು ಮಾಡಿದ್ದರೂ ಕೂಡ ಇದುವರೆಗೂ ಆ ಆದೇಶ ಕಾರ್ಯಗತವಾಗಿಲ್ಲ. ಅದೇರೀತಿ ಬೈಲಹೊಂಗಲ ತಾಲ್ಲೂಕಿನಲ್ಲೂ ಕೂಡ ಒಂದು ಹೈಸ್ಕೂಲನ್ನು ತೆರೆಯಲು ಕೇಳಿಕೊಂಡಿದ್ದರು. ಆಗಿನ ಮುಖ್ಯಮಂತ್ರಿಗಳು ೩ ವರ್ಷಗಳ ಹಿಂದೆಯೇ ಆದೇಶವನ್ನು ಮಾಡಿದ್ದರು. ಅದೂ ಕೂಡ ಕಾರ್ಯಗತ ಆಗಲಿಲ್ಲ. ಆದ್ದರಿಂದ ಮುಳುಗಡೆಯಾದ ಪ್ರದೇಶದಲ್ಲಿರತಕ್ಕ ಜನರಿಗೋಸ್ಕರ ಹಾಗೂ ಹಿಂದುಳಿದವರಿಗೋಸ್ಕರ ಅಲ್ಲಿ ಒಂದು ಹೈಸ್ಕೂಲನ್ನು ತೆರೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಟೂರಿಸಂ ಇಲಾಖೆಯ ಬಗ್ಗೆ ಹೇಳುವುದಾದರೆ, ಪ್ರವಾಸಿಕೇಂದ್ರಗಳನ್ನು ಮಾಡುವುದಾಗಿ ಹೇಳಿರತಕ್ಕದ್ದು ಸಂತೋಷದ ಸಂಗತಿ. ಆದರೆ ಕೇವಲ ಬೆಂಗಳೂರು ಮತ್ತು ಮೈಸೂರಿಗೇ ಇದು ಸೀಮಿತವಾಗಿದೆ. ಇದು ನಮ್ಮ ಕಡೆಗೂ ಬರಬೇಕು. ಶ್ರೀಕ್ಷೇತ್ರ ಸೊಗಲ, ಉತ್ತರ ಕರ್ನಾಟಕದಲ್ಲಿ ಒಂದು ಒಳ್ಳೆಯ ಕ್ಷೇತ್ರವಾಗಿದ್ದರೂ ಸಹಿತ ಅಲ್ಲಿ ಯಾವುದೇ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಇವರು ತಯಾರಿಲ್ಲ. ಅಲ್ಲಿ ಧ್ವನಿ ಬೆಳಕು ಯೋಜನೆಯನ್ನು ತೆಗೆದುಕೊಳ್ಳುವ ಸಲುವಾಗಿ ಕೇಂದ್ರಸರ್ಕಾರಕ್ಕೆ ಒಂದು ಪ್ರೊಪೋಸಲ್‌ನ್ನು ಕಳುಹಿಸಿ ಕೊಡುವುದಕ್ಕೂ ಆಗಿಲ್ಲ. ಸೊಗಲ ಮತ್ತು ಯಲ್ಲಮ್ಮನಗುಡ್ಡದ ಬಗ್ಗೆ ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಟ್ಟ ಪ್ರೊಪೋಸಲ್‌ನ್ನು ಪರ್ಸ್ಯೂ ಮಾಡಿ ಮಂಜೂರಾತಿಯನ್ನು ತೆಗೆದುಕೊಳ್ಳತಕ್ಕ ಕೆಲಸವನ್ನು ಟೂರಿಸಂ ಇಲಾಖೆಯವರು ಮಾಡುತ್ತಿಲ್ಲ. ಶ್ರೀಕ್ಷೇತ್ರ ಸೊಗಲದಲ್ಲಿ ಟೂರಿಸಂ ಇಲಾಖೆಯ ವತಿಯಿಂದ ಹೆಚ್ಚಿನ ಬೆಳವಣಿಗೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಂಡು ಇಷ್ಟು ಮಾತನಾಡಲು ನನಗೆ ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೧೦-೪೫ ಎ. ಎಂ.

† ಶ್ರೀ ಶಫಿ ಅಹಮದ್ (ತುಮಕೂರು).—ಸನ್ಮಾನ್ಯ ಅಧ್ಯಕ್ಷಣಿಯವರು ಇವೊತ್ತು ಈ ಸದನದಲ್ಲಿ ಮಂಡಿಸಿರತಕ್ಕಂಥ ರಾಜ್ಯಪಾಲರ ಭಾಷಣವನ್ನು ಸ್ವಾಗತಿಸಿ ನಮ್ಮ ಸರ್ಕಾರದವರು ಏನು ಒಳ್ಳೆಯ ನಿರ್ಣಯಗಳನ್ನು ತೆಗೆದುಕೊಂಡಿರುತ್ತಾರೆ ಅವುಗಳನ್ನು ಸ್ವಾಗತಿಸುತ್ತಾ ಒಂದೆರಡು ಮಾತಗಳನ್ನು ಹೇಳಲು ಇಚ್ಛೆಪಡುತ್ತೇನೆ. ನಗರ ವ್ಯಾಪ್ತಿಯಲ್ಲಿರುವ ನಿವೇಶನಗಳು ಬಹಳ ದೂರದಲ್ಲಿರುವ ಪ್ರಯುಕ್ತ ಆಟೋರಿಕ್ಷಾಗಳ ಮೀಟರ್ ಚಾರ್ಜನ್ನು ಮಿನಿಮಮ್ ಮೂರು ರೂಪಾಯಿಗಳನ್ನಾಗಿ ಏನು ನಿಗದಿ ಮಾಡಿರುತ್ತಾರೆ ಇದನ್ನು ಎರಡು ರೂಪಾಯಿಗಳಿಗೆ ನಿಗದಿ ಮಾಡಿದ್ದರೆ ಬಹಳ ಸೂಕ್ತವಾಗಿರುತ್ತಿತ್ತು. ಪ್ರತಿ ನಗರಗಳಲ್ಲಿ ಹೊರವಲಯದಲ್ಲಿ ಸಹಸ್ರಾರು ಮನೆಗಳನ್ನು ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ಮಾಡಿಕೊಂಡಿದ್ದಾರೆ. ಅವರಿಗೆ ಮುನಿಸಿಪಾಲಿಟಿಯವರು ಏನೇನು ಸೌಲಭ್ಯಗಳನ್ನು ಕೊಡಬೇಕೋ ಅದೆಲ್ಲವನ್ನು ಕೊಡುತ್ತಿದ್ದಾರೆ. ಆದರೂ ಸಹ ಸರ್ಕಾರಕ್ಕೆ ಬರತಕ್ಕಂಥ ಹಣವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಈ ದಿಸೆಯಲ್ಲಿ ಸರ್ಕಾರದವರು ಒಂದು ಒಳ್ಳೆಯ ನಿರ್ಣಯವನ್ನು ತೆಗೆದುಕೊಂಡಿರುವುದನ್ನು

ನಾನು ಸ್ವಾಗತಿಸುತ್ತೇನೆ. ಅದೇ ರೀತಿಯಲ್ಲಿ ಆಟೋರಿಕ್ಷಾಗಳ ಮೀಟರ್ ಚಾರ್ಜನ್ನು ಮೂರು ರೂಪಾಯಿಗಳೆಂದು ಏನು ರೆಗ್ಯುಲರ್ ಮಾಡಿದ್ದಾರೆ ಇದು ಸೂಕ್ತವಲ್ಲ, ಎರಡು ರೂಪಾಯಿಗಳನ್ನು ಮಾಡಿದರೆ ಬಡವರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ತುಮಕೂರು ನಗರವು ಬೆಳೆಯುತ್ತಿದ್ದು ಬೆಂಗಳೂರು ನಗರಕ್ಕೆ ಬಹಳ ಸಮೀಪವಾಗುತ್ತಿರುವುದರಿಂದ ಇಲ್ಲಿ ಇಂಡಸ್ಟ್ರಿಯಲ್ ಏರಿಯಾ ಬಹಳಮಟ್ಟಿಗೆ ಬರುತ್ತಿದೆ. ನಮ್ಮ ಸರ್ಕಾರದವರು ೧೦ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಹೇಮಾವತಿ ಕುಡಿಯುವ ನೀರಿನ ಯೋಜನೆಯನ್ನು ಮಂಜೂರು ಮಾಡಿದ್ದಾರೆ. ಈಗ ಅದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟು ಈ ಕಾರ್ಯಕ್ರಮವನ್ನು ಅತಿ ಶೀಘ್ರವಾಗಿ ತೆಗೆದುಕೊಂಡರೆ ಅಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆಂದು ನಾನಾದರೂ ಹೇಳುತ್ತೇನೆ.

ಇನ್ನು ಭಾಗ್ಯ ಮಂದಿರಗಳ ನಿರ್ಮಾಣದ ಬಗ್ಗೆ ಹೇಳುವುದಾದರೆ, ಕಳೆದ ೭-೮ ವರ್ಷಗಳಲ್ಲಿ ಅರ್ಬನ್ ಡೆವಲಪ್‌ಮೆಂಟ್ ಏರಿಯಾದಲ್ಲಿ ಯಾವುದೇ ವಿಧವಾದ ಹೌಸಿಂಗ್ ಸ್ಕೀಮ್‌ಗಳನ್ನು ತೆಗೆದುಕೊಂಡಿಲ್ಲ. ಇವತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಬಹಳಮಟ್ಟಿಗೆ ಗಮನಹರಿಸಿದೆ. ಅರ್ಬನ್ ಹೌಸಿಂಗ್ ಬಗ್ಗೆ ಒಂದು ಒಳ್ಳೆಯ ನಿರ್ಣಯವನ್ನು ತೆಗೆದುಕೊಂಡಿರುವುದು ಬಹಳ ಒಳ್ಳೆಯ ಕಾರ್ಯಕ್ರಮವಾಗಿದೆ, ರೆವಿನ್ಯೂ ಸೈಟ್‌ಗಳಲ್ಲಿ ಕಟ್ಟಿರುವ ಮನೆಗಳಿಗೆ ಇವತ್ತು ಸರ್ಕಾರದಿಂದ ಸಾಲ ಸಿಗುತ್ತಿಲ್ಲ. ಹಾಗೆಯೇ ಭಾಗ್ಯ ಮಂದಿರಗಳನ್ನು ಕಟ್ಟಲು ಸಹಿತ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇವತ್ತು ಬಡವರು ಎಲ್ಲಿ ರೆವಿನ್ಯೂ ಸೈಟ್‌ಗಳಲ್ಲಿ ಮನೆಗಳನ್ನು ಕಟ್ಟಲು ಅಪೇಕ್ಷೆ ಪಡುತ್ತಾರೋ ಅವರಿಗೆ ಮುನಿಸಿಪಾಲಿಟಿಯಿಂದ ಖಾತೆ ಮಾಡಿಸಿ ಅಲ್ಲಿನ ನಿವಾಸಿಗಳಿಗೆ ಹಣವನ್ನು ಕೊಟ್ಟು ಅತಿಶೀಘ್ರವಾಗಿ ರಿಹ್ಯಾಬಿಲಿಟೇಟ್ ಮಾಡಿದರೆ ಸೂಕ್ತವಾಗುತ್ತದೆ.

ಇನ್ನು ಸ್ಲಮ್ಸ್ ಬಗ್ಗೆ ಹೇಳುವುದಾದರೆ ಸ್ಲಮ್ಸ್ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರದವರು ಸಾಕಷ್ಟು ಹಣವನ್ನು ಕೊಡುತ್ತಿದ್ದರೂ ಸಹಿತ ಈ ಹಣ ಸರಿಯಾದ ರೀತಿಯಲ್ಲಿ ವಿತರಣೆಯಾಗುತ್ತಿಲ್ಲ. ಸ್ಲಮ್ಸ್ ರಿಹ್ಯಾಬಿಲಿಟೇಷನ್‌ಗೆ ಸ್ಲಮ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ಸರಿಯಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿಲ್ಲ. ಅವಕ್ಕೋಸ್ಕರವಾಗಿ ಈ ಕಾರ್ಯಕ್ರಮವನ್ನು ಪಾಪ್ಯುಲರ್ ಮಾಡಿ ಅಲ್ಲಿ ಉತ್ಪತ್ತಿಯಾಗುವ ಕೊಳಚೆ ನಿರ್ಮೂಲನಾ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇವತ್ತು ನಮ್ಮ ಸ್ಲಮ್ಸ್‌ಗಳಲ್ಲಿ ಕೊಳಚೆ ನಿರ್ಮೂಲನೆ ಮಾಡದಿದ್ದಲ್ಲಿ ಖಾಯಿಲೆಗಳು ಹೆಚ್ಚಿನ ಪ್ರಮಾಣದಲ್ಲಿ ಪ್ರಾರಂಭವಾಗಿ ನಗರವೆಲ್ಲ ವ್ಯಾಪಿಸಿಕೊಳ್ಳುವ ಸಂದರ್ಭವಿರುತ್ತದೆ. ನಗರವ್ಯಾಪಿ ಖಾಯಿಲೆ ಬರುವುದಕ್ಕೆ ನಾವೇ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಆದ್ದರಿಂದ ಈ ದಿಸೆಯಲ್ಲಿ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ನಗರದಲ್ಲಿರುವ ಆಸ್ಪತ್ರೆಗಳ ಬಗ್ಗೆ ಹೇಳುವುದಾದರೆ ಮೊನ್ನೆ ತಾನೆ ನಮ್ಮ ಆರೋಗ್ಯ ಸಚಿವೆಯರಾದ ಶ್ರೀಮತಿ ಮನೋರಮಾ ಮಧ್ವರಾಜ್‌ರವರು ತುಮಕೂರು ಆಸ್ಪತ್ರೆಗೆ ಭೇಟಿ ಕೊಟ್ಟಿದ್ದರು. ಅಲ್ಲಿಗೆ ಬಂದು ಬಹಳ ದೊಡ್ಡದಾದ ಒಂದು ಆಪರೇಷನ್ ಥಿಯೇಟರನ್ನು ಉದ್ಘಾಟನೆ ಮಾಡಿದರು. ಅವರಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ ತುಮಕೂರು ಜನರಲ್ ಆಸ್ಪತ್ರೆಯಲ್ಲಿ ನಾಲ್ಕನೆಯ ದರ್ಜೆಯ ನೌಕರರ ಸಂಖ್ಯೆ ಬಹಳಷ್ಟು ಕಡಿಮೆ ಇರುತ್ತದೆ. ತುಮಕೂರು ಜನರಲ್ ಆಸ್ಪತ್ರೆಯಲ್ಲಿ ಒಂದೇ ಅಲ್ಲ ರಾಜ್ಯದಲ್ಲಿರುವ ಎಲ್ಲಾ ಜನರಲ್ ಆಸ್ಪತ್ರೆಯಲ್ಲಿಯೂ ಕೂಡ ಈ ನಾಲ್ಕನೇ ದರ್ಜೆ ನೌಕರರ ಸಂಖ್ಯೆ ಬಹಳ ಕಡಿಮೆ ಇರುವುದರಿಂದ ರೋಗಿಗಳಿಗೆ ಬಹಳ ತೊಂದರೆಯಾಗಿರುತ್ತದೆ. ಇವರ ಸಂಖ್ಯೆಯನ್ನು ಹೆಚ್ಚಿಸಬೇಕು.

ಸರ್ಕಾರದವರು ಇಕಾನಮಿ ಮೆಷರ್ಸ್ ಮೂಲಕ ಏನು ಇವರ ನೇಮಕಾತಿಗೆ ರೆಸ್ಟ್ರಿಕ್ಷನ್ಸ್ ಹಾಕಿದ್ದಾರೆ. ಅದನ್ನು ರಿಲ್ಯಾಕ್ಸ್ ಮಾಡಿ ೪ನೇ ದರ್ಜೆ ನೌಕರರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಕಳೆದ ೭-೮ ವರ್ಷಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಪಿ.ಹೆಚ್.ಯು. ಅಥವಾ ಪಿ.ಹೆಚ್.ಸಿ.ಗಳನ್ನು ಶುರು ಮಾಡಿಲ್ಲ. ಆದುದರಿಂದ ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಪಿ.ಹೆಚ್.ಯು ಮತ್ತು ಪಿ.ಹೆಚ್.ಸಿ ಗಳನ್ನು ಓಪನ್ ಮಾಡಿದರೆ ಅನುಕೂಲವಾಗುತ್ತದೆ. ಬಡವರು ನಗರಕ್ಕೆ ಬಂದು ಚಿಕಿತ್ಸೆ ಮಾಡಿಸಿಕೊಂಡು ಹೋಗಲು ತೊಂದರೆಯಾಗಿದೆ. ಇವತ್ತು ಜಿಲ್ಲಾಪರಿಷತ್ತುಗಳ ವ್ಯಾಪ್ತಿಯಲ್ಲಿರುವುದರಿಂದ ಜಿಲ್ಲಾ ಪರಿಷತ್ತಿನವರನ್ನು ಕೇಳಿದರೆ ಸರ್ಕಾರದ ಕಡೆ ತೋರಿಸುತ್ತಾರೆ. ಈ ದಿಸೆಯಲ್ಲಿ ತಾವು ಜಿಲ್ಲಾಪರಿಷತ್ತುಗಳಿಗೆ ಆದೇಶ ಕೊಟ್ಟು ಅದಕ್ಕೆ ಬೇಕಾದ ಹಣದ ಸೌಲಭ್ಯವನ್ನು ಒದಗಿಸಿ ಪಿ.ಹೆಚ್.ಯು, ಅಥವಾ ಪಿ.ಹೆಚ್.ಸಿ.ಗಳನ್ನು ಪ್ರಾರಂಭಿಸುವುದಕ್ಕೆ ಪ್ರಯತ್ನ ಮಾಡಿದರೆ ಬಹುಮಟ್ಟಿಗೆ ಬಡಜನರಿಗೆ ಅನುಕೂಲವಾಗುತ್ತದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅಲ್ಪ ಸಂಖ್ಯಾತರ ಬಗ್ಗೆ ಯಾವ ವಿಧವಾದ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಹಿಂದಿನ ಸರ್ಕಾರದಲ್ಲಿ ಮೈನಾರಿಟಿ ಕಮಿಷನ್ ಅನ್ನು ರಚನೆ ಮಾಡಿದ್ದರು. ಅದಕ್ಕೆ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಕೊಡುವುದಾಗಿ

ಭರವಸೆ ನೀಡಿದ್ದು, ಕೊನೆಗೆ ಕೇವಲ ೨೦ ಸಾವಿರ ರೂಪಾಯಿಗಳನ್ನು ಕೊಟ್ಟು ಅದು ಕೇವಲ ಎಸ್ಟಾಬ್ಲಿಷ್‌ಮೆಂಟ್‌ಗೆ ಮಾತ್ರ ಖರ್ಚು ಆಯಿತು. ಇದಕ್ಕೆ ನಮ್ಮ ಸರ್ಕಾರದವರು ಕನಿಷ್ಟ ೨ ಕೋಟಿ ರೂಪಾಯಿಗಳನ್ನಾದರೂ ಕೊಟ್ಟರೆ ಒಳ್ಳೆಯದು. ಅಲ್ಪ ಸಂಖ್ಯಾತರಲ್ಲಿ ಇರುವ ಬಡವರಿಗೆ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾದರೆ ಅವರ ಆರ್ಥಿಕ ಸ್ಥಿತಿ ಸುಧಾರಣೆ ಆಗಬೇಕಾದರೆ ಈ ಹಣ ಕೊಡುವುದು ಬಹಳ ಸೂಕ್ತ. ವಕ್ಫ್ ಬೋರ್ಡ್ ಬಗ್ಗೆ ಸಹ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕಾಣಿಸಲಿಲ್ಲ. ವಕ್ಫ್ ಬೋರ್ಡಿಗೆ ಬಡ್ಜೆಟ್ಟಿನಲ್ಲಿ ೩೦ ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ೩೦ ಲಕ್ಷ ರೂಪಾಯಿ ಆಫೀಸ್ ಎಸ್ಟಾಬ್ಲಿಷ್‌ಮೆಂಟಿಗೆ ಸಾಕಾಗುವುದಿಲ್ಲ. ಆ ದಿಸೆಯಲ್ಲಿ ೩ ಕೋಟಿ ರೂಪಾಯಿಗಳನ್ನಾದರೂ ಕೊಟ್ಟರೆ ವಕ್ಫ್ ಪ್ರಾಪರ್ಟಿಯನ್ನು ಸರಿಯಾದ ರೀತಿಯಲ್ಲಿ ಮೆಯಿಂಟೇನ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ರಾಜ್ಯದಲ್ಲಿರುವ ಬರ್ನಿಂಗ್ ಪ್ರಾಬ್ಲಮ್ಸ್ ಅಂದರೆ ಪವರ್ ಪ್ರಾಬ್ಲಂ. ಎಲ್ಲಿ ಹೋದರೂ ಐ.ಪಿ. ಸೆಟ್ಸ್ ಕನೆಕ್ಷನ್ಸ್ ಬಗ್ಗೆ ಪವರ್ ಬಗ್ಗೆ ದೂರು ಬರುತ್ತಿದೆ. ಇವತ್ತಿನ ದಿವಸ ಎಲ್ಲಾ ಇಂಡಸ್ಟ್ರಿಯಲಿಸ್ಟ್ಸ್ ಜನರೇಟರ್‌ಗಳನ್ನು ಈ ಇಟ್ಟುಕೊಂಡಿದ್ದಾರೆ. ಜನರೇಟರ್‌ಗಳನ್ನು ಉಪಯೋಗಿಸುವವರಿಗೆ ಡೀಸಲ್ ಅನ್ನು ಸಬ್ಸಿಡೈಸ್ ಮಾಡಿಕೊಟ್ಟರೆ ಅವರು ಜನರೇಟರ್‌ಗಳನ್ನೇ ಉಪಯೋಗಿಸುತ್ತಾರೆ. ಆದರಿಂದ ವಿದ್ಯುತ್ ಉಳಿತಾಯವಾಗುತ್ತದೆ. ಆ ಉಳಿದ ಪವರ್ ಅನ್ನು ರೈತರಿಗೆ ಕೊಟ್ಟರೆ ಅನುಕೂಲವಾಗುತ್ತದೆ. ಜನರೇಟರ್‌ಗಳಿಗೂ ಸಹ ಸರ್ಕಾರದವರೇ ಸಬ್ಸಿಡಿ ಕೊಡುತ್ತೇವೆ ಮತ್ತಿತರ ಸೌಲಭ್ಯ ಒದಗಿಸುತ್ತೇವೆ. ಡೀಸಲ್ ಅನ್ನು ಸಬ್ಸಿಡೈಸ್ ಮಾಡುತ್ತೇವೆಂದರೆ ಬಹಳ ಸುಲಭವಾಗಿ ಪವರ್ ಪ್ರಾಬ್ಲಂನ್ನು ಸಾಲ್ವ್ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಇಂಡಸ್ಟ್ರೀಸ್ ಬಗ್ಗೆ ಹೇಳುವುದಾದರೆ, ಸ್ಯಾಚುರೇಟೆಡ್ ಇಂಡಸ್ಟ್ರೀಸ್ ಎಲ್ಲಿವೆ ಅಲ್ಲಿ ಸಬ್ಸಿಡಿ ಕೊಡುವುದಕ್ಕೆ ಬರುವುದಿಲ್ಲ. ಕೇಂದ್ರ ಸರ್ಕಾರವೇ ಆಗಲಿ ರಾಜ್ಯ ಸರ್ಕಾರವೇ ಆಗಲಿ ಕೊಡುವುದಿಲ್ಲ. ಡೀಲಿಮಿಟೇಷನ್ ಮಾಡಿ ಇಂಡಸ್ಟ್ರೀಸ್ ಎಲ್ಲಿ ಇಲ್ಲ ಅಲ್ಲಿ ಇಂಡಸ್ಟ್ರೀಸ್ ಸ್ಥಾಪಿಸುವುದಕ್ಕೆ ಸಬ್ಸಿಡಿ ಕೊಟ್ಟರೆ ಒಳ್ಳೆಯದು. ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡಬೇಕಾದರೆ ಹೆಚ್ಚಿನ ಇಂಡಸ್ಟ್ರಿಗಳು ಬರಬೇಕಾಗಿದೆ. ಇಂಡಸ್ಟ್ರೀಸ್ ಬಂದರೆ ಯುವಕರಿಗೆ ಕೆಲಸ ಕೊಡುವುದಕ್ಕೆ ಅನುಕೂಲವಾಗುತ್ತದೆ. ಆ ದಿಸೆಯಲ್ಲಿ ಇಂಡಸ್ಟ್ರಿಗಳಿಗೆ ಪ್ರೋತ್ಸಾಹ ಕೊಡಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಇಂಡಸ್ಟ್ರಿಯಲ್ ಏರಿಯಾ ಮಾಡಿ ಲೋಕಲ್ ಆರ್ಟಿಸಾನ್ಸ್ ಏನಿದ್ದಾರೆ ಅವರನ್ನು ಐಡೆಂಟಿಫೈ ಮಾಡಿ ಅವರಿಗೆ ಇಂಡಸ್ಟ್ರಿಗಳನ್ನು ಸ್ಥಾಪಿಸಲು ಸಾಲ ಕೊಟ್ಟರೆ ರಾಜ್ಯದ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ತುಮಕೂರು ಜಿಲ್ಲೆಗೆ ಮೊನ್ನೆ ತಾನೇ ಟೂರಿಸಂ ಮಿನಿಸ್ಟರ್ ಬಂದಿದ್ದರು. ಕಳೆದ ಎಂಟು ವರ್ಷಗಳ ಹಿಂದೆ ಅವರು ಮಂತ್ರಿಯಾಗಿದ್ದಾಗ ದೇವರಾಯನ ಬೆಟ್ಟವನ್ನು ನೋಡಿ ಇದು ಪ್ರವಾಸಿ ಕೇಂದ್ರಕ್ಕೆ ಪ್ರಸಿದ್ಧವಾದ ಜಾಗ ಎಂದು ಹೇಳಿದ್ದರು. ನಂದಿ ಬೆಟ್ಟವನ್ನು ಬಿಟ್ಟರೆ ೪ ಸಾವಿರ ಅಡಿ ಎತ್ತರದಲ್ಲಿರುವ ಹಿಲ್ ಸ್ಟೇಷನ್ ಅನ್ನು ಬಹಳ ಸುಂದರವಾಗಿ ಮಾಡುವುದಕ್ಕೆ ಸಾಧ್ಯವಿದೆ. ಪೋಲೀಸ್ ಇಲಾಖೆ ಬಗ್ಗೆ ಹೇಳುವುದಾದರೆ, ಪೋಲೀಸ್ ಕಾನ್‌ಸ್ಟೇಬಲ್‌ಗಳು ವಾಸಕ್ಕೆ ಮನೆ ಇಲ್ಲದೆ ಬೀದಿ ಬೀದಿ ಅಲೆಯುತ್ತಿದ್ದಾರೆ. ಅವರಿಗೆ ಕ್ವಾರ್ಟರ್ಸ್ ಕಟ್ಟಿಸಿಕೊಡಬೇಕು. ಡಕಾಯಿತಿ ರಾಬರೀಸ್ ಬಹುಮಟ್ಟಿಗೆ ಆಗುತ್ತಿರುವುದರಿಂದ ಸರಿಯಾದ ಸೌಲಭ್ಯವನ್ನು ಅವರಿಗೆ ಕೊಟ್ಟರೆ ಅದನ್ನೆಲ್ಲ ತಡೆಗಟ್ಟಲು ಸಾಧ್ಯವಾಗುತ್ತದೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ನಾರಾಯಣ್ (ಬೆಳ್ಳಾವಿ).—ಮಾನ್ಯ ಅಧ್ಯಕ್ಷಿಣಿಯವರೆ, ಈ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುತ್ತಾ ಮತ್ತು ಅವರ ಭಾಷಣವನ್ನು ಸ್ವಾಗತ ಮಾಡುತ್ತಾ ಕೇವಲ ಮೂರು ನಾಲ್ಕು ವಿಷಯಗಳನ್ನು ಕುರಿತು ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಬಹಳಷ್ಟು ಜನ ಎಲ್ಲಾ ಅಂಶಗಳನ್ನು ಪದೇ ಪದೇ ಪ್ರಸ್ತಾಪಿಸಿದ್ದಾರೆ, ಆದರೆ ನಾನು ಎರಡು ಮೂರು ವಿಷಯದ ಬಗ್ಗೆ ಮಾತ್ರ ಮಾತನಾಡುತ್ತೇನೆ. ಮುಖ್ಯವಾದ ಅಂಶ ರಾಜ್ಯಪಾಲರ ಭಾಷಣದಲ್ಲಿರುವುದು ಆಡಳಿತದಲ್ಲಿ ದಕ್ಷತೆ ತರತಕ್ಕದ್ದು, ಶುದ್ಧ ಆಡಳಿತವನ್ನು ನಡೆಸುವುದು. ಮಾನ್ಯ ಅಧ್ಯಕ್ಷಿಣಿಯವರೆ ತಮಗೆ ತಿಳಿದಿರುವ ಹಾಗೆ ಯಾವುದೇ ಹೊಸ ಸರ್ಕಾರ ಬಂದಾಗ ಶುದ್ಧ, ದಕ್ಷ ಆಡಳಿತ, ಪ್ರಾಮಾಣಿಕ ಆಡಳಿತ ನೀಡುತ್ತೇವೆಂದು ಎಲ್ಲರೂ ಘೋಷಣೆ ಮಾಡುತ್ತಾರೆ. ಯಾವುದೇ ಹೊಸ ಸರ್ಕಾರ ಬಂದಾಗ ಈ ಮಾತುಗಳನ್ನು ಆಡುವುದನ್ನು ನಾವು ನೋಡಿದ್ದೇವೆ, ಕೇಳಿದ್ದೇವೆ. ಆದರೆ ಆಚರಣೆಗೆ ತರತಕ್ಕ ಸಂದರ್ಭದಲ್ಲಿ ಅದನ್ನು ಮರೆಯುತ್ತಾರೆ. ರಾಜ್ಯಪಾಲರ ಮೊದಲ ಭಾಷಣ ಮತ್ತು ರಾಜ್ಯಪಾಲರ ಎರಡನೇ ಭಾಷಣದಲ್ಲಿ ಆಡಳಿತದ ದಕ್ಷತೆ ಬಗ್ಗೆ ಹೆಚ್ಚಿನ ಮಹತ್ವ ತೋರಿಸಿದ್ದಾರೆ. ನಿಜವಾಗಿಯೂ ನಾನಾದರೂ ಭಾವನೆ ಮಾಡುತ್ತೇನೆ. The need of the hour ಏನೆಂದರೆ to improve the administration. ದಕ್ಷ ಆಡಳಿತದಿಂದ ಮಾತ್ರ ನಮ್ಮ ಸಮಾಜದಲ್ಲಿ ಅನ್ಯಾಯವನ್ನು ತೊಲಗಿಸಬಹುದು. ಎಲ್ಲಾ ರೀತಿಯ ಸಾಮಾಜಿಕ

ಆರ್ಥಿಕ ನ್ಯಾಯ ದೊರಕಿಸಿಕೊಡಬೇಕಾದರೆ, ಕಾರ್ಯಕ್ರಮಗಳು ಜನತೆಗೆ ಮುಟ್ಟಬೇಕಾದರೆ ದಕ್ಷ ಆಡಳಿತ ಇರಬೇಕೆಂದು ನಾನು ಭಾವನೆ ಮಾಡುತ್ತೇನೆ. ಈ ಸಂದರ್ಭದಲ್ಲಿ ದಿವಂಗತ ಕೆಂಗಲ್ ಹನುಮಂತಯ್ಯನವರು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ರಾಷ್ಟ್ರಕ್ಕೆ ಮಹತ್ತರವಾದ ವಿಷಯಗಳನ್ನು ಹೇಳಿರುವುದನ್ನು ನಾವು ನೆನಪಿಸಿಕೊಳ್ಳಬೇಕಾಗಿದೆ. ಅದನ್ನು ಸರ್ಕಾರ ತೀವ್ರವಾಗಿ ಪರಿಗಣಿಸಬೇಕೆಂದು ನಾನು ಭಾವನೆ ಮಾಡುತ್ತೇನೆ. ಕರ್ನಾಟಕ ರಾಜ್ಯ ಆಡಳಿತ ರಂಗದಲ್ಲಿ ಇಬ್ಬರು ಉತ್ತಮ ಆಡಳಿತಗಾರರನ್ನು ಕೊಡುಗೆಯಾಗಿ ಈ ರಾಷ್ಟ್ರಕ್ಕೆ ನೀಡಿದೆ. ಅದರಲ್ಲಿ ದಿವಂಗತ ಕೆಂಗಲ್ ಹನುಮಂತಯ್ಯನವರು ಒಬ್ಬರು, ಇನ್ನೊಬ್ಬರು ಈಗಿನ ಮುಖ್ಯಮಂತ್ರಿಗಳಾದ ಮಾನ್ಯ ವೀರೇಂದ್ರ ಪಾಟೀಲರು. ದಕ್ಷ ಆಡಳಿತ ನಡೆಸುವುದು ಸಾಮಾನ್ಯವಾದ ವಿಷಯವಲ್ಲ. ನೋಡುವುದಕ್ಕೆ ಹೇಳುವುದಕ್ಕೆ ಚೆನ್ನಾಗಿರುತ್ತದೆ. ಆದರೆ ಅದನ್ನು ಜಾರಿಗೆ ತರಬೇಕಾದರೆ ಬಹಳ ಕಷ್ಟಗಳನ್ನು ಆಡಳಿತ ನಡೆಸುವವರು ಅನುಭವಿಸಬೇಕಾಗಿದೆ. ಈ ದಿಸೆಯಲ್ಲಿ ದಿವಂಗತ ಕೆಂಗಲ್ ಹನುಮಂತಯ್ಯನವರ ಮಾತನ್ನು ಸಭೆಯ ಗಮನಕ್ಕೆ ತರುತ್ತೇನೆ. ಅವರು ಈ ರೀತಿ ಹೇಳಿದ್ದಾರೆ. "It is the culture of the Ministers that determines the character of the administration" ಇದು ಬಹಳ ಪ್ರಾಮುಖ್ಯವಾದ ವಿಷಯ. ನನ್ನ ಅನಿಸಿಕೆಯಲ್ಲಿ ದಕ್ಷ ಆಡಳಿತವನ್ನು ನೀಡಲಿಕ್ಕೆ ದಕ್ಷ ಮಂತ್ರಿಮಂಡಲ ಸಹಾಯಕವಾಗುತ್ತದೆ. ಕೇವಲ ಸರ್ಕಾರದಿಂದ ಮಾತ್ರ ಆಡಳಿತದಲ್ಲಿ ದಕ್ಷತೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಶಾಸಕರೆಲ್ಲರ ಸಂಪೂರ್ಣ ಸಹಕಾರವೂ ಬೇಕು ನಾವು ಆಡಳಿತದಲ್ಲಿ ಪದೇ ಪದೇ ಇಂಟರ್‌ಫಿಯರ್ ಆಗುವುದಾಗಲೀ, ಆಡಳಿತದಲ್ಲಿ ಹೆಚ್ಚಿಗೆ ಪ್ರವೇಶ ಮಾಡುವುದಾಗಲೀ ಮಾಡಿದರೆ ಆಡಳಿತ ನಡೆಸುವವರಿಗೆ ಕಷ್ಟವಾಗುತ್ತದೆಂದು ನನ್ನ ಭಾವನೆ. ಈ ದೃಷ್ಟಿಯಿಂದ ನನ್ನ ಅನಿಸಿಕೆ ಆದರೂ ಇಷ್ಟೆ. ಹೊಸ ಸರ್ಕಾರ ಬಂದಾಗ ಮುಖ್ಯಮಂತ್ರಿಗಳು ಶುದ್ಧ, ದಕ್ಷ ಮತ್ತು ಪ್ರಾಮಾಣಿಕ ಆಡಳಿತವನ್ನು ತರುತ್ತೇವೆಂದು ಹೇಳುವುದು ವಾಡಿಕೆ. ಆದರೆ ವೀರೇಂದ್ರ ಪಾಟೀಲರು ಇದರಲ್ಲಿ ಭಿನ್ನವಾಗಿದ್ದಾರೆ. ಅವರು ಅಧಿಕಾರ ವಹಿಸಿಕೊಂಡ ಮೇಲೆ ಆಡಳಿತದಲ್ಲಿ ದಕ್ಷತೆ ತರುವುದರಲ್ಲಿ ಬಹಳಷ್ಟು ಕಾಳಜಿ ವಹಿಸಿದ್ದಾರೆ. ನಾಲ್ಕು ತಿಂಗಳ ಅವರ ಆಡಳಿತದ ಹಿನ್ನೆಲೆಯಲ್ಲಿ ಮಾತನಾಡುವುದಾದರೆ ಬಹಳ ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದಾರೆಂದು ನನ್ನ ಭಾವನೆ. ಇವತ್ತು ಎಕ್ಸೈಜ್ ಲಾಬಿಯನ್ನು ದೂರ ಮಾಡತಕ್ಕ ದೊಡ್ಡ ಸಾಹಸ ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಎಕ್ಸೈಜ್ ಲಾಬಿ, ಶುಗರ್ ಲಾಬಿ ಸರ್ಕಾರದ ಮೇಲೆ ತಮ್ಮದೇ ಆದ ಒತ್ತಡ ತಂದು ಆಡಳಿತ ವ್ಯವಸ್ಥೆಯನ್ನು ಅಲ್ಲೋಲ ಕಲ್ಲೋಲ ಮಾಡುವ ಶಕ್ತಿ ಇದೆ. ಆ ಶಕ್ತಿಯಿಂದ ದೂರ ಆದಾಗ ಮಾತ್ರ ಒಳ್ಳೆಯ ಆಡಳಿತ ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ಹೆಚ್ಚಿನ ಯಶಸ್ಸನ್ನು ಮುಖ್ಯಮಂತ್ರಿಗಳು ಮಾಡಿದ್ದಾರೆ. ಅದರ ಮೂಲಕ ಜನತೆಗೆ ಏನು ವಚನ ಕೊಟ್ಟಿದ್ದರೋ ಅದನ್ನು ಪಾಲನೆ ಮಾಡುವುದಕ್ಕೆ ಕಾರ್ಯೋನ್ಮುಖವಾಗಿದ್ದಾರೆ ಎಂದು ನನ್ನ ಭಾವನೆ. ಅಕ್ರಮ ಜಮೀನುಗಳನ್ನು ಸಕ್ರಮಗೊಳಿಸುವ ಕೆಲಸ ಸರ್ಕಾರ ಮಾಡಿದೆ. ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಸಕ್ರಮಗೊಳಿಸುವ ಸಮಯದಲ್ಲಿ ತಾಲ್ಲೂಕು ಮಟ್ಟದಲ್ಲಿ...

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುಗಿಸಬೇಕು. ಏಕೆಂದರೆ ಮುಖ್ಯಮಂತ್ರಿಗಳು ಉತ್ತರ ಹೇಳುವುದಕ್ಕೆ ಬಂದಿದ್ದಾರೆ.

ಶ್ರೀ ಆರ್. ನಾರಾಯಣ್.—ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಹೇಳುವುದಾದರೆ ಮಂಡಲ್ ಆಯೋಗದ ವರದಿಯನ್ನು ಜಾರಿಗೆ ತರುವುದರಿಂದ ಸ್ವಲ್ಪ ಕಾಲವಾದರೂ ಚಿನ್ನಪ್ಪರೆಡ್ಡಿ ಆಯೋಗದ ನಿರ್ಣಯವನ್ನು ಮುಂದಕ್ಕೆ ಹಾಕಬೇಕು. ಕಡೆಯದಾಗಿ ಒಂದು ಅಂಶವನ್ನು ಪ್ರಸ್ತಾಪ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಚುನಾವಣೆಯ ಸಂದರ್ಭ ಹಾಗೂ ಚುನಾವಣೆ ಆದ ನಂತರ ನಾವು ಜನರಿಗೆ ಅನೇಕ ಭರವಸೆಗಳನ್ನು ನೀಡಿದ್ದೇವೆ. ಬಡವರಿಗೆ ಹಸಿರು ಕಾರ್ಡ್ ಹಂಚುವ ಬಗ್ಗೆ ನಾವು ಭರವಸೆಯನ್ನು ಕೊಟ್ಟಿದ್ದು ನಾವು ಅಧಿಕಾರಕ್ಕೆ ಬಂದಮೇಲೆ ಈ ಬಗ್ಗೆ ನಾವು ಕಾರ್ಯ ತತ್ಪರರಾಗಿದ್ದೇವೆ ಮತ್ತೆ ನಾವು ಚುನಾವಣೆ ಕಾಲದಲ್ಲಿ ಭರವಸೆಗಳನ್ನು ಕೊಡತಕ್ಕ ಕಾಲದಲ್ಲಿ ಎಲ್ಲವನ್ನೂ ನಾವು ಅಧಿಕಾರಕ್ಕೆ ಹೋದ ತಕ್ಷಣ ಮಾಡುತ್ತೇವೆಂದು ಅಲ್ಲ, ಇವನ್ನು ಹಂತಹಂತವಾಗಿ ಜಾರಿಗೆ ತರುತ್ತೇವೆಂದೂ ಸಹಾ ಜನರಿಗೆ ಹೇಳಿ ಬಂದಿದ್ದೇವೆ. ಅಷ್ಟೇ ಅಲ್ಲ, ಹಿಂದಿನ ಸರ್ಕಾರ ೭ ವರ್ಷ ರಾಜ್ಯ ಆಳಿದ್ದು ಆ ಸರ್ಕಾರದ ದುರಾಡಳಿತವನ್ನು ಸರಿ ಮಾಡುವುದಕ್ಕೆ ನಮಗೆ ಅವಕಾಶ ಬೇಕಾಗುತ್ತದೆ. ಹದಗೆಟ್ಟಿರುವ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕಾಗುತ್ತದೆಯಾದ್ದರಿಂದ ಇದಕ್ಕೆ ನಾಲ್ಕೈದು ತಿಂಗಳು ಬೇಕಾಗುತ್ತದೆನ್ನುವ ವಿಷಯವನ್ನೂ ಸಹಾ ನಾವು ಈಗಾಗಲೇ ಜನರಲ್ಲಿ ನಿವೇದಿಸಿಕೊಂಡಿದ್ದೇವೆ. ಆದ್ದರಿಂದ ಇವೊತ್ತು ಎಷ್ಟೇ ತೊಂದರೆ ಅವರಲ್ಲಿ ಇದ್ದರೂ ಒಳ್ಳೆಯ ದಿವಸಗಳಿಗಾಗಿ ತಾಳ್ಮೆಯಿಂದ

ಇದ್ದಾರೆ. ಇವೊತ್ತು ನಮ್ಮ ಸರ್ಕಾರ ಹಮ್ಮಿಕೊಂಡಿರುವ ಜನಕಲ್ಯಾಣ ಕೆಲಸಗಳನ್ನು ಫಲಪ್ರದಗೊಳಿಸ ಬೇಕಾದರೆ ಕಾಲಾವಕಾಶ ಬೇಕಾಗುತ್ತದೆ. ಈಗ ಕಡೆಯಲ್ಲಿ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಶಾಲಾ ಕಾಲೇಜುಗಳಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಕಡ್ಡಾಯವಾಗಿ ಮಾಡಬೇಕಾಗಿದೆ. ಇವತ್ತಿನ ದಿವಸ ಶಾಲಾ ಕಾಲೇಜುಗಳನ್ನು ಮಂಜೂರು ಮಾಡುವ ಸಮಯದಲ್ಲಿ ಗ್ರಾಂಟ್-ಇನ್-ಏಡ್ ಕೋಡ್‌ನಲ್ಲಿ ಅನೇಕ ಕಂಡೀಷನ್ಸ್ ಹಾಕುತ್ತಾರೆ ಅದರಲ್ಲಿ ಈ ಕಡ್ಡಾಯವಾಗಿ

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಕುಡಿಯುವ ನೀರನ್ನು ಒದಗಿಸುವ ಒಂದು ಅಂಶವನ್ನೂ ಕಡ್ಡಾಯವಾಗಿ ಸೇರಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).— ಮಾನ್ಯ ಸಭಾಧ್ಯಕ್ಷರೇ, ಕಳೆದ ಮೂರು-ನಾಲ್ಕು ದಿವಸಗಳಿಂದ ಈ ಸದನದ ಅನೇಕ ಮಾನ್ಯ ಸದಸ್ಯರುಗಳು ರಾಜ್ಯಪಾಲರ ಭಾಷಣದ ವಂದನಾರ್ಪಣಾ ನಿರ್ಣಯದ ಮೇಲೆ ಭಾಗವಹಿಸಿ ತಮ್ಮ ವಿಚಾರಗಳನ್ನು ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಅವರೆಲ್ಲರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಸಮಾಧಾನದಿಂದ ಮತ್ತು ಅಭಿಮಾನದಿಂದ ಹೇಳಬೇಕಾಗಿದ್ದರೆ ಅನೇಕ ಮಾನ್ಯ ಸದಸ್ಯರು ರಚನಾತ್ಮಕ ಸಲಹೆಗಳನ್ನು ನೀಡಿದ್ದಾರೆ. ಅವನ್ನು ನಾನು ಸ್ವಾಗತಿಸುತ್ತೇನೆ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ನಮ್ಮ ಸರ್ಕಾರ ಜನ್ಮತೊಟ್ಟು ಸುಮಾರು ೪ ತಿಂಗಳು ಮಾತ್ರ ಆದವು. ನಾನು ೩೦ನೇ ನವೆಂಬರ್ ೧೯೮೯ಕ್ಕೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದೆ. ನನ್ನ ಮಂತ್ರಿಮಂಡಲ ೬ನೇ ಡಿಸೆಂಬರ್ ೧೯೮೯ಕ್ಕೆ ಪ್ರಮಾಣವಚನ ಸ್ವೀಕಾರ ಮಾಡಿತು. ಈ ರೀತಿ ಮಂತ್ರಿ ಮಂಡಲ ಅಸ್ತಿತ್ವಕ್ಕೆ ಬಂದು ಬಹುಶಃ ೪ ತಿಂಗಳು ಆಗುವುದಕ್ಕೆ ಎರಡು ದಿವಸಗಳು ಮಾತ್ರ ಕಡಿಮೆ ಇದೆ. ಈ ನಾಲ್ಕು ತಿಂಗಳಲ್ಲಿ ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಸಾಧನೆ ಏನು ? ಬಹುಶ: ಈ ಹಿನ್ನೆಲೆಯಲ್ಲಿ ಅನೇಕ ಜನ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಇದು ಸ್ವಾಭಾವಿಕ. ಕೆಲವು ಕಡೆ ೫೦ ದಿವಸದ ಸರ್ಕಾರದ ಸಾಧನೆ, ಕೆಲವು ಕಡೆ ೧೦೦ ದಿವಸಗಳ ಸರ್ಕಾರದ ಸಾಧನೆ ಬಗ್ಗೆ ರಿವ್ಯೂ ಮಾಡುತ್ತಾರೆ. ಪತ್ರಿಕೆಗಳಲ್ಲಿ ರಿವ್ಯೂ ಮಾಡುತ್ತಾರೆ. ಹೊರಗಡೆ ಕೂಡ ಈ ರೀತಿಯ ರಿವ್ಯೂ ಆಗುತ್ತದೆ. ಆದರೆ ನಾನು ಇಷ್ಟೇ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಈ ತರಹ ರಿವ್ಯೂ ಆಗಬಾರದೆಂದು ಹೇಳುವ ಉದ್ದೇಶ ನನ್ನದಲ್ಲ. ಅದು ಆಗುವುದು ಬಹಳ ಒಳ್ಳೆಯದು. ಏಕೆಂದರೆ ನನ್ನ ಬಗ್ಗೆ ನಮ್ಮ ಸರ್ಕಾರದ ಬಗ್ಗೆಯಾಗಲೀ ನಮ್ಮ ಆಡಳಿತದ ಬಗ್ಗೆಯಾಗಲೀ ಜನರ ಅಭಿಪ್ರಾಯ ಏನಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ, ಅದು ನಮಗೆ ಮಾರ್ಗದರ್ಶನ ಕೂಡ ಆಗುತ್ತದೆ. ಒಂದು ರೀತಿಯಾಗಿ ನಾವು ಹೋಗುವ ಹಾದಿಯಲ್ಲಿ ಎಲ್ಲಿ ತಪ್ಪಿದ್ದೇವೆ ಎತ್ತ ಕಡೆ ಹೋಗಿದ್ದೇವೆ ಎನ್ನುವಂತಹ ಸಾಕಷ್ಟು ವಿವರ ನಮಗೆ ಸಿಗುತ್ತದೆ. ಒಂದು ರೀತಿಯಾಗಿ ಅದರಲ್ಲಿ ಒಂದು ಲೈಫ್ ಸಿಗುತ್ತದೆ ಎನ್ನುವಂತಹ ವಿಷಯವನ್ನು ನಾನು ತಿಳಿದುಕೊಂಡಿದ್ದೇನೆ ನಾವು ಬಂದ ನಾಲ್ಕು ತಿಂಗಳುಗಳಲ್ಲಿ ಸಾಧಿಸಿದ್ದು ಏನು ಎಂದು ವಿಚಾರ ಮಾಡುವುದಕ್ಕಿಂತಲೂ ಅದರ ಪೂರ್ವದಲ್ಲಿ ಏನಿತ್ತು ಎನ್ನುವುದನ್ನು ಈಗ ವಿಚಾರ ಮಾಡಬೇಕಾಗಿದೆ ಅದನ್ನು ಮಾಡಬೇಕೆಂದು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಆರೂವರೆ ಏಳು ವರ್ಷಗಳ ನಂತರ ಮತ್ತೆ ಅಧಿಕಾರಕ್ಕೆ ಬಂದಿರುವಂಥ ನಾನಾಗಲೀ ನನ್ನ ಪಕ್ಷವಾಗಲೀ ಅದರ ಹಿಂದಿನ ಸರ್ಕಾರದಿಂದ, ಉರ್ದುವಿನಲ್ಲಿ ಹಿರಾಸತ್ ಅಂದರೆ inheritance, ಎಂದು ಹೇಳುತ್ತಾರೆ. What is that we have inherited from the previous Government which was continuously in power for the last more than six years ? ಈ ಮಧ್ಯದಲ್ಲಿ ಏಳೆಂಟು ತಿಂಗಳುಗಳ ಕಾಲ ರಾಷ್ಟ್ರಪತಿ ಯವರ ಆಳ್ವಿಕೆ ಬಂತು ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವ ಅವಶ್ಯಕತೆ ಇಲ್ಲ, ನಾನು ಇದರ ಬಗ್ಗೆ ಬಿಚ್ಚು ಮನಸ್ಸಿನಿಂದ ಹೇಳಬೇಕಾದರೆ ನಿಮ್ಮ ಹಿರಾಸತ್‌ನಿಂದ ಸಿಕ್ಕಿದ್ದು ಖಾಲಿ ತಿಜೋರಿ. ಹಣ ವಿಲ್ಲದ ತಿಜೋರಿ, ಎಂ.ಟಿ. ಟ್ರಜರಿ, ನಮಗೆ ನಿಮ್ಮ ಹಿರಾಸತ್‌ನಲ್ಲಿ ಸಿಕ್ಕಿದ್ದುದು. ನಾನು ಅದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ ಏಕೆಂದರೆ ಹೋದಸಲ ನಮ್ಮ ಹಣಕಾಸಿನ ಸಚಿವರು ಒಂದು ಸ್ಟೇಟ್‌ಮೆಂಟ್‌ನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಅದನ್ನು ತಾವು ವೈಟ್‌ಪೇಪರ್ ಎಂದಾದರೂ ಕರೆಯಿರಿ ಅಥವಾ ಬೇರೆ ಏನಾದರೂ ಕರೆಯಿರಿ. ನಮ್ಮ ಪರಿಸ್ಥಿತಿ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಏನಿದೆ ಅದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಹಣಕಾಸಿನ ಬಹಳ ಕಷ್ಟದ ಪರಿಸ್ಥಿತಿಯನ್ನು ಎದುರಿಸುವಂತಹ ಒಂದು ಸರ್ಕಾರ ನಮ್ಮ ಕೈಗೆ ಬಂತು. ಇನ್ನೊಂದು ಕಡೆ ಡೀಮಾರಲೈಸ್ ಆದ

ಆಡಳಿತ ಯಂತ್ರ, ಸಾಕಷ್ಟು ಶಿಥಿಲತೆ ಉಂಟಾಗಿರುವಂತಹ ಒಂದು ಆಡಳಿತ ಯಂತ್ರ ನಮ್ಮ ಕೈಗೆ ಬಂತು. ಇದನ್ನು ನಾವು ಹಿಂದಿನ ಸರ್ಕಾರದಿಂದ ಪಡೆದಿರುವಂತಹದ್ದು. ಇವೊತ್ತು ಈ ಭಾಗಕ್ಕೆ ಜನ ಸಾಮಾನ್ಯರು ಕರ್ನಾಟಕದ ಮತದಾರರು ಮ್ಯಾಸೀವ್ ಮ್ಯಾಂಡೇಟ್ ಕೊಟ್ಟು ಕಳುಹಿಸಿದ್ದಾರೆ. ಕರ್ನಾಟಕದ ಇತಿಹಾಸದಲ್ಲಿ ಯಾವುದೇ ಆಡಳಿತ ಪಕ್ಷಕ್ಕೆ ಇಷ್ಟೊಂದು ಬಹುಮತ ಹಿಂದೆಂದೂ ಬಂದಿಲ್ಲ ಇದು ಮೊದಲನೆಯ ಸಲ ಬಂದಿದೆ. ನಮ್ಮ ಪಕ್ಷಕ್ಕೆ ಯಾವಾಗಲೂ ಬಂದಿರಲಿಲ್ಲ. ಈಗ ನಮಗೆ ಬಂದಿದೆ. ಇದು ಮೊದಲನೆಯ ಸಲ ಬಂತು ಜನಸಾಮಾನ್ಯರು ಮತದಾರರು ಬೃಹದಾಕಾರವಾಗಿ ನಮ್ಮನ್ನು ಪುರಸ್ಕರಿಸಿದ್ದಾರೆ, ನಮಗೆ ಪ್ರೋತ್ಸಾಹಿಸಿದ್ದಾರೆ, ನಮಗೆ ಬೆಂಬಲಿಸಿದ್ದಾರೆ, ಉತ್ತಮ ಮತದಾರರು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ. ಜವಾಬ್ದಾರಿ ಕೂಡ ಅಷ್ಟೆ ನಮ್ಮ ಮೇಲೆ ಬಿದ್ದಿದೆ ಯೆಂದು ನಾವು ತಿಳಿದುಕೊಂಡಿದ್ದೇವೆ. ಜನರ ಆಶೋತ್ತರಗಳು ಅಷ್ಟು ದೊಡ್ಡದಾಗಿ ನಮಗೆ ಕಂಡು ಬರುತ್ತಿವೆ. ನಾನು ನೋಡುತ್ತಿದ್ದೇನೆ ಮತ್ತು ನನ್ನ ಅನುಭವದಿಂದ ಈ ವಿಚಾರಗಳನ್ನು ಹೇಳುತ್ತಿದ್ದೇನೆ. ಇಲ್ಲಿ ಅನೇಕ ಮಾನ್ಯ ಸದಸ್ಯರುಗಳು ಈಗಾಗಲೇ ಒಂದು ಎರಡು ಸಲ ಮೂರು ಸಲ ಈ ವಿಧಾನಸಭೆಯಲ್ಲಿ ಸದಸ್ಯರಾಗಿ ಮತ್ತು ಎರಡನೆಯ ಸ್ಥಾನಮಾನಗಳಿಂದ ಸೇವೆ ಸಲ್ಲಿಸಿದವರು ಇದ್ದಾರೆ. ಮತ್ತು ಬಹು ಜನರು ದೊಡ್ಡ ಸಂಖ್ಯೆಯಲ್ಲಿ ಮೊದಲನೆಯ ಸಲ ಈ ಸದನಕ್ಕೆ ಮಾನ್ಯ ಸದಸ್ಯರಾಗಿ ಆಯ್ಕೆಯಾಗಿ ಬಂದಿದ್ದಾರೆ. ಮತದಾರರ ಇಚ್ಛೆಯಂತೆ, ಮತದಾರರ ಆಶೋತ್ತರಗಳಂತೆ ಅವರು ನಡೆದುಕೊಳ್ಳಬೇಕು, ಕೆಲಸ ಕಾರ್ಯಗಳನ್ನು ಮಾಡಬೇಕು. ಮತಕ್ಷೇತ್ರದ ಸಮಸ್ಯೆಗಳನ್ನು ನಿವಾರಣೆ ಮಾಡಲಿಕ್ಕೆ ಅವರುಗಳಿಗೆ ಅಭಿಲಾಶೆ ಇರುವಂಥದ್ದು ಸ್ವಾಭಾವಿಕ. ಆದರೆ ಪರಿಸ್ಥಿತಿ ಏನಾಗಿದೆ ? ಆಶೋತ್ತರಗಳು ಹೆಚ್ಚಾಗಿ ಬೃಹದಾಕಾರವಾಗಿ ಕಂಡುಬರುತ್ತಿವೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನಮ್ಮ ಶಕ್ತಿಯನ್ನು ಅಳೆದು ನೋಡಿದರೆ, ಏನಪ್ಪ, ಯಾವುದೂ ಸರಿಹೋಗಲಾರದಂಥ ಶಕ್ತಿ ನಮ್ಮಲ್ಲಿದೆ ಎಂದು ದುಃಖ, ಕಳಕಳಿ, ವಿಷಾದ ನಮಗೆ ಉಂಟಾಗುತ್ತದೆ. ಇದು ಸ್ವಾಭಾವಿಕ. ಮತ್ತು ಇದನ್ನು ಒಂದೇ ದಿವಸ ಮಾಡುವುದಕ್ಕೆ ಆಗುವುದಿಲ್ಲ ಕ್ರಮೇಣ ಈ ಸಮಸ್ಯೆಗಳನ್ನು, ಮತಕ್ಷೇತ್ರಗಳ ಸಮಸ್ಯೆಗಳನ್ನು ನಿವಾರಣೆ ಮಾಡಲು ನಾವೆಲ್ಲರೂ ಪ್ರಯತ್ನ ಮಾಡಬೇಕು. ಇನ್ನು ನನ್ನ ಬಗ್ಗೆ, ನನ್ನ ಸರ್ಕಾರದ ಬಗ್ಗೆ ತಮಗೆ ಹೇಳಬೇಕಾಗಿದ್ದರೆ, ನನ್ನ ಬಗ್ಗೆ ಮೊದಲು ಹೇಳುತ್ತೇನೆ. ನಾನು ೧೯೭೧ರಲ್ಲಿ ಕರ್ನಾಟಕದ ರಾಜಕೀಯದಿಂದ ದೂರ ಸರಿದು ಡೆಲ್ಲಿಗೆ ಹೋಗಿ ೧೮ ವರ್ಷಗಳ ಮೇಲೆ ಕರ್ನಾಟಕಕ್ಕೆ, ಕರ್ನಾಟಕ ರಾಜಕೀಯಕ್ಕೆ ತಿರುಗಿ ಬಂದಿದ್ದೇನೆ. ಅಂದರೆ ನಾನು ಡೆಲ್ಲಿಯಿಂದ ಬೆಂಗಳೂರಿಗೆ ಬಂದವನೇ ಹೊರತಾಗಿ ಬೆಂಗಳೂರಿನಿಂದ ಡೆಲ್ಲಿಗೆ ಹೋಗಬೇಕೆಂಬ ಆಸೆ ನನ್ನಲ್ಲಿ ಇಲ್ಲ. ಮತ್ತು ಇಲ್ಲಿ ಪಕ್ಷದ ಮೇಲಾಗಲೀ, ಡೆಲ್ಲಿಯ ರಾಜಕೀಯ ಮೇಲಾಗಲೀ, ಡೆಲ್ಲಿಯ ರಾಜಕೀಯ ಕ್ಷೇತ್ರದ ಮೇಲಾಗಲೀ ನನ್ನದೇನಾದರೂ ಪಾತ್ರ ಸಲ್ಲಬೇಕೆಂದು ಅಭಿಲಾಶೆ ಇಲ್ಲ. ಅದನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಇಲ್ಲಿ ಇರುವಂಥಾದ್ದು ನನ್ನ ಧೋರಣೆ, ನನ್ನ ನೀತಿ ಮತ್ತು ನನ್ನ ಗುರಿ, ಕರ್ನಾಟಕ, ಕನ್ನಡಮ್ಮ ನಮ್ಮೆಲ್ಲರ ದೇವತೆ. ಮತ್ತು ಈ ಸರ್ಕಾರದ ದೇವತೆ. ಕರ್ನಾಟಕದ ನಾಲ್ಕು ಕೋಟಿ ಜನರ ಸೇವೆ ಮಾಡುವಂಥಾದ್ದೇ ನನ್ನ ಧರ್ಮ, ನನ್ನ ಪಕ್ಷದ ಧರ್ಮ, ನನ್ನ ಸರ್ಕಾರದ ಧರ್ಮವೆಂದು ತಿಳಿದುಕೊಂಡಿದ್ದೇನೆಯೇ ಹೊರತಾಗಿ ಎರಡನೇಯದು, ಯಾವ ಕೇಂದ್ರದ ರಾಜಕೀಯದಲ್ಲಿಯೂ ನನಗೆ ಆಸಕ್ತಿ ಇಲ್ಲ. ಏಕೆಂದರೆ ನಾನು ಅಲ್ಲಿಂದ ತಿರುಗಿ ಬಂದಿದ್ದೇನೆ. ಮತ್ತೆ ತಿರುಗಿ ಹೋಗುವಂಥ ಪರಿಸ್ಥಿತಿ ಇಲ್ಲ, ಪ್ರಮೇಯ ಇಲ್ಲ. ಆ ಒಂದು ಅಭಿಲಾಶೆ ನನ್ನಲ್ಲಿ ಇಲ್ಲ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಈ ನಾಲ್ಕು ತಿಂಗಳಲ್ಲಿ ಬಹುಶಃ ನಾನು ಡೆಲ್ಲಿಗೆ ಕರ್ನಾಟಕದಿಂದ ಹೊರಗೆ ಹೋಗಿರುವಂಥಾದ್ದು ನಾಲ್ಕೈದು ದಿವಸ ಮಾತ್ರ. ಅದೂ ಮೀಟಿಂಗ್, ಮುಖ್ಯತಾದ್ದಕ್ಕಾಗಿ ಹೋಗಿದ್ದೇನೆ. ನನ್ನ ಮನಸ್ಸಿನಲ್ಲಿ ಇಲ್ಲಿಂದ ಹೊರಗಡೆ ಹೋಗಬೇಕು ಎಂದಿಲ್ಲ. ಏನಾದರೂ ಸಮಯ ಸಿಕ್ಕರೆ ವಿಧಾನಸೌಧದಲ್ಲಿ ಕುಳಿತುಕೊಳ್ಳೋಣ, ಇಲ್ಲವಾದರೆ ತಾಲ್ಲೂಕು ಹಳ್ಳಿಗಳಲ್ಲಿ ಯಾವ್ಯಾವ ಮತಕ್ಷೇತ್ರಗಳಲ್ಲಿ, ಜಿಲ್ಲಾ ಹೆಡ್‌ಕ್ವಾಟರ್ಸ್‌ಗಳಲ್ಲಿ ಹೋಗಿ ನೋಡಬೇಕೆಂದು ಮನಸ್ಸು ಇದೆಯೇ ಹೊರತಾಗಿ ಡೆಲ್ಲಿಗೆ ಹೋಗಬೇಕು. ಡೆಲ್ಲಿಯ ಸಂಪರ್ಕ ಬೆಳೆಸಬೇಕು, ಡೆಲ್ಲಿಯ ರಾಜಕೀಯದಲ್ಲಿ ನನ್ನ ಪಾತ್ರ ಇರಬೇಕು ಎಂದು ಇಲ್ಲವೆಂದು ಈ ಸಂದರ್ಭದಲ್ಲಿ ನಾನು ಸ್ಪಷ್ಟಪಡಿಸುತ್ತೇನೆ. ಇಷ್ಟು ಪ್ರಾಸ್ತಾವಿಕವಾಗಿ ಹೇಳುತ್ತೇನೆ. ರಾಜ್ಯದ್ದಾಗಲೀ, ದೇಶದ್ದಾಗಲೀ, ಆಡಳಿತ ಸುವ್ಯವಸ್ಥಿತವಾಗಿ ಮತ್ತು ಚೊಕ್ಕಟವಾಗಿ ಪ್ರತಿಯೊಬ್ಬರಿಗೂ ಸಮಾಧಾನ ತರುವಂಥ ರೀತಿಯಲ್ಲಿ ಆಡಳಿತವನ್ನು ನಾವು ನೀಡಬೇಕಾಗಿದ್ದರೆ ಎರಡು ಅಂಶಗಳು ಬಹಳ ಮುಖ್ಯ. ಒಂದು ಆಡಳಿತದ ಯಂತ್ರ ಅಡ್ಮಿನಿಸ್ಟ್ರೇಶನ್ ಮೆಶಿನರಿ ಬಹಳ ಟ್ರಿಮ್ ಆಗಿರಬೇಕು ಚೊಕ್ಕಟವಾಗಿರಬೇಕು, ದಕ್ಷವಾಗಿ, ಪ್ರಾಮಾಣಿಕವಾಗಿ ಇರಬೇಕು. ಕೆಲಸಕಾರ್ಯಗಳು ಯಾವ ಒತ್ತಾಯಕ್ಕೂ ಮಣಿಯದೆ, ಪ್ರಭಾವ ಬಂದಾಗ ಮಾತ್ರ ಈ ಕೆಲಸಕಾರ್ಯಗಳು ಆಗುತ್ತವೆ, ಇಲ್ಲದಿದ್ದರೆ ಫೈಲುಗಳು ಅದೇ ಟೇಬಲ್‌ಮೇಲೆ ಹಾಗೆಯೇ ಇದ್ದು ಬಿಡುತ್ತವೆ ಎನ್ನುವ ವಾತಾವರಣ ಬರಲಾರದಂತೆ ಚುರುಕಾಗಿ ಕೆಲಸಕಾರ್ಯಗಳು ನಡೆಯಬೇಕಾಗಿದ್ದರೆ ಆಡಳಿತ ಯಂತ್ರ ಅಷ್ಟೇ ಚುರುಕಾಗಿ

ಇರಬೇಕಾದಂಥ ಅವಶ್ಯಕತೆ ಇದೆ ಆಡಳಿತ ಯಂತ್ರ ಸರಿಯಾಗಿ ಇರಲಾರದೇ ಹೋದರೆ ಎಷ್ಟೇ ಯೋಜನೆ ಇರಬಹುದು, ಅದು ಕಾರ್ಯಗತವಾಗುವುದಿಲ್ಲ.

೧೧–೧೫ ಎ. ಎಂ.

ಕಾರ್ಯಗತವಾದರೂ ಕೂಡ ಪೇಪರ್ ಮೇಲೆ, ಕಾಗದದ ಮೇಲೆ ಕಾರ್ಯಗತವಾಗುತ್ತದೆ. ಮತ್ತು ಅದರ ಲಾಭ ಜನಸಾಮಾನ್ಯರಿಗೆ ಸಿಕ್ಕುವ ಹಾಗೆ ಇಲ್ಲ. ಇದನ್ನು ನಾವು ಸರಿ ಮಾಡಬೇಕಾಗುತ್ತದೆ ನಿಜವಾಗಿಯೂ ಕೂಡ ಕರ್ನಾಟಕ ಜನತೆಗೆ, ಕರ್ನಾಟಕದ ರಾಜ್ಯಧಾನಿಯಿಂದ ಹಾಕುವಂತಹ ಯೋಜನೆಗಳ ಸಂಪೂರ್ಣ ಲಾಭ ಮುಟ್ಟಬೇಕಾಗುತ್ತದೆ. ಇನ್ನೊಂದು ಸಶಕ್ತ ಆರ್ಥಿಕ ಪರಿಸ್ಥಿತಿ sound financial position. ಈ ಒಂದು ಯಂತ್ರ ಸರಿ ಇರಬೇಕು ಮತ್ತು ಅನೇಕ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ನಾವು ಏನು ಹಾಕಿಕೊಳ್ಳುತ್ತೇವೆ ಇವುಗಳನ್ನು ಕಾರ್ಯಗತ ಮಾಡುವುದಕ್ಕೆ ಬೇಕಾಗಿರತಕ್ಕ ಹಣ, ಸಂಪನ್ಮೂಲಗಳು ಸಾಕಷ್ಟು ಪ್ರಮಾಣದಲ್ಲಿ ಇರಬೇಕು. ಈ ದೃಷ್ಟಿಯಿಂದ ವಿಚಾರ ಮಾಡಬೇಕಾಗಿದೆ. ೪ ತಿಂಗಳಲ್ಲಿ ಆಡಳಿತದಲ್ಲಿ ಬಿಗಿ ತರುವುದಕ್ಕೆ ಏನು ಮಾಡಿದ್ದೇವೆ, ಏನು ಸಾಧಿಸಿದ್ದೇವೆ ಮತ್ತು ಎಷ್ಟರ ಮಟ್ಟಿಗೆ ನಮಗೆ ಯಶಸ್ಸು ಸಿಕ್ಕಿದೆ ಎಂಬುದನ್ನು ಬಿಚ್ಚು ಮನಸ್ಸಿನಿಂದ ತಮ್ಮಲ್ಲಿ ಇಡುತ್ತಿದ್ದೇನೆ. ಇದನ್ನು ತಾವೇ ಅಳೆಯಬೇಕು. ನಾನು ಅಧಿಕಾರಕ್ಕೆ ಬಂದಕೂಡಲೇ ಮತ್ತು ಮೊದಲು ಅಧಿಕಾರದಿಂದ ಹೊರಗಿದ್ದಾಗಲೂ ಕೂಡ ಒಂದು ಭಾವನೆ ಇತ್ತು. ಆಡಳಿತದಲ್ಲಿ ಶಿಥಿಲತೆ ಬರುವುದಕ್ಕೆ demoralisation ಬರುವುದಕ್ಕೆ, ಭ್ರಷ್ಟಾಚಾರ ತಾಂಡವವಾಡುವುದಕ್ಕೆ ಮುಖ್ಯವಾದ ಕಾರಣ ರಾಜಕೀಯ ಆಡಳಿತದಲ್ಲಿ ಪ್ರವೇಶ. political inteference ಇದರಿಂದ ದುರ್ದೈವದಿಂದ ಕೆಲವು ದಿವಸಗಳವರೆಗೆ ಈ ವರ್ಗಾವಣೆ ದೊಡ್ಡ ಇಂಡಸ್ಟ್ರಿಯಾಗಿ ಕರ್ನಾಟಕದಲ್ಲಿ ಬೆಳೆಯಿತು. ಇದು ಬೆಳೆಯಬಾರದು ಅದಕ್ಕಾಗಿ ನಾನು ಮೊದಲನೇ ಕೆಲಸ ಮಾಡಿದೆ. ಇದು ಕೆಲವರಿಗೆ ಬೇಸರ ಆಗಿರಬಹುದು, ಇಲ್ಲ ಎಂದು ಹೇಳುವಹಾಗಿಲ್ಲ. ಕೆಲವರು ಮನಸ್ಸಿನಲ್ಲಿ ಬೇಸರಪಟ್ಟುಕೊಂಡಿರಬಹುದು. ಮೊದಲು ಏನು ಮಾಡಿದೆ, ಅಧಿಕಾರಕ್ಕೆ ಬಂದ ಒಂದು ವಾರದಲ್ಲಿ, No ad-hoc transfers' ಸಿಕ್ಕಾಪಟ್ಟೆ ಬೆಳಗ್ಗೆಯಿಂದ ಸಂಜೆಯವರೆಗೆ ೩–೪ ಆಫೀಸರುಗಳಿಗೆ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ವರ್ಗಾವಣೆ ಮಾಡುವಂತಹ ಪದ್ಧತಿಗೆ ನಾನು ಫುಲಿಸ್ಟಾಪ್ ಹಾಕುವ ಕೆಲಸ ಮಾಡಿದೆ. ಇದರಿಂದ ಯಶಸ್ಸು ಸಿಕ್ಕಿದೆಯೋ ಇಲ್ಲವೋ ಗೊತ್ತಿಲ್ಲ. ಎಷ್ಟರಮಟ್ಟಿಗೆ ಸಾಧನೆಯಾಗಿದೆ ಎಂಬುದನ್ನು ನೀವೇ ಅಳೆಯಿರಿ. ಇವತ್ತು ಸದನದಲ್ಲಿ ಇರಬಹುದು, ೨ ಲಕ್ಷ ಜನರ ಪ್ರತಿನಿಧಿ ಇರಬಹುದು. ನಾನು ದೇಶಸೇವೆ ಮಾಡುವಂತಹ ಭಾವನೆ ನಮ್ಮಲ್ಲಿರಬಹುದು. ಇದರ ಅರ್ಥ ಸರ್ಕಾರಿ ಹುದ್ದೆಯಲ್ಲಿದ್ದು, ಸರ್ಕಾರಿ ಇಲಾಖೆಗಳಲ್ಲಿದ್ದು, ಸರ್ಕಾರಿ ನೌಕರರು, ಜನರ ಹತ್ತಿರ ಹೋಗಿ ನಾವು ಹೇಗೆ ದೇಶಪ್ರೇಮಿಗಳಿದ್ದಾರೆ, ಜನಪ್ರೇಮಿಗಳಿದ್ದಾರೆ ಜನರಉದ್ಧಾರಕ್ಕೆ, ಜನರಸೇವೆಗೆ ದುಡಿಯುತ್ತಿದ್ದಾರೆ ಎಂಬುದನ್ನು ಮರೆಯುವುದಕ್ಕಾಗುವುದಿಲ್ಲ. ಇವರೂ ಕೂಡ ಸಮಾಜದ ಒಂದು ಅಂಗ. ಹೊರಗಿನಿಂದ ಬಂದವರಲ್ಲ. ಇವತ್ತು ಏನಾಗುತ್ತಿದೆ ಎಂದರೆ, ಅವರ ಸ್ಥಳದಲ್ಲಿ ನಾವು ಇದ್ದುಕೊಂಡು ನೋಡಿದರೆ, ಯಾವುದೇ ಒಬ್ಬ ಅಧಿಕಾರಿಯಾಗಿರಲಿ, ಅವರು ಸಣ್ಣ ಅಧಿಕಾರಿಯಾಗಿರಲಿ, ಅಥವಾ ದೊಡ್ಡ ಅಧಿಕಾರಿಯಾಗಿರಲಿ, ವರ್ಗಾವಣೆಯಾದರೆ, ನಮ್ಮ ಮಕ್ಕಳ ಗತಿ ಏನು. ಇವತ್ತು ಇಲ್ಲಿ ಅಭ್ಯಾಸ ಮಾಡುತ್ತಿದ್ದಾನೆ. ಈಗ ಇಂತಹ ಕಡೆ ನನ್ನನ್ನು ಹಾಕಿದ್ದಾರೆ. ಅಲ್ಲಿ ಅಭ್ಯಾಸಕ್ಕೆ ಅವಕಾಶ ಇದೆಯೋ, ಅಡ್ಮಿಷನ್ ಸಿಗುತ್ತದೆಯೋ. ನಮ್ಮ ಮಕ್ಕಳಿಗೆ ಅಡ್ಮಿಷನ್ ಸಿಕ್ಕದೇ ಹೋದರೆ, ನಾನು ಅಲ್ಲಿ ಮಕ್ಕಳು ಇಲ್ಲಿ, ಹೀಗೆ ಎರಡೂ ಕಡೆ ತೂಗಿಸುವುದಕ್ಕೆ ಸಾಧ್ಯವಾಗುತ್ತದೆಯೆ ಎಂಬುದನ್ನು ಯೋಚನೆ ಮಾಡುವಂತಾಗುತ್ತದೆ. ಅದರಲ್ಲಿಯೂ ಮಧ್ಯದಲ್ಲಿ ವರ್ಗಾವಣೆ ಮಾಡಿದರೆ ಆತ ವಿಪರೀತ ಕಷ್ಟಕ್ಕೆ ಗುರಿಯಾಗುತ್ತಾನೆ. ಅದಕ್ಕೋಸ್ಕರ ಒಂದು ನೀತಿ ಮೇ ತಿಂಗಳಲ್ಲಿ ಎಲ್ಲಾ ವರ್ಗಾವಣೆ ಆಗಬೇಕು ಆ ಆಫೀಸರು ವರ್ಗ ಮಾಡಿದ ಸ್ಥಳಕ್ಕೆ ಹೋಗಬೇಕು. ಎಂದು ಮಾಡಿದ್ದೇವೆ ಇದರಿಂದ ಆ ನೌಕರ ಎರಡು ಮೂರು ವರ್ಷ ನಮ್ಮ ತಂಟೆಗೆ ಬರುವುದಿಲ್ಲ ಎಂದು ತಿಳಿದುಕೊಂಡು, ಸಮಾಧಾನದಿಂದ, ತೃಪ್ತಿಯಿಂದ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ ಜೊತೆಗೆ ಮಕ್ಕಳ ಅಭ್ಯಾಸಕ್ಕೂ ಯಾವ ತೊಂದರೆಯಾಗುವುದಿಲ್ಲ. ಅದನ್ನು ಮಾಡುವುದಕ್ಕೆ ನಾನು ಸ್ವಲ್ಪಮಟ್ಟಿಗೆ ಪ್ರಯತ್ನ ಮಾಡಿದ್ದೇನೆ ಅಲ್ಲಿಂದ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಅನೇಕ ಜನ ರಿಟೈರ್ ಆಗುತ್ತಾರೆ: ಬಹುಶಃ ನನ್ನ ಲೆಕ್ಕದ ಪ್ರಕಾರ ಪ್ರತಿವರ್ಷ ಕನಿಷ್ಟ ೧೧ ಸಾವಿರ ಜನ ಗೌರ್ನ್‌ಮೆಂಟ್ ಎಂಪ್ಲಾಯೀಸ್ ರಿಟೈರ್ ಆಗುತ್ತಾರೆ. ಇಲ್ಲಿಯವರೆಗೆ ಏನು ನಡೆಯುತ್ತಿತ್ತು ಎಂದರೆ ಸಣ್ಣಪುಟ್ಟ ಆಫೀಸರ್ ಬಗ್ಗೆ ಯಾರೂ ವಿಚಾರ ಮಾಡುವುದಿಲ್ಲ. ಆದರೆ ಮೇಲ್ವರ್ಗದ ಆಫೀಸರ್ಸ್ ರಿಟೈರ್ ಆದರೂ ರಿಟೈರ್ ಆಗುವುದಕ್ಕೆ ತಯಾರಿಲ್ಲ ಎಕ್ಸ್‌ಟೆನ್‌ಷನ್‌ಗೆ ಕಾಗದ ಹಿಡಿದುಕೊಂಡು ಬರುವುದು ಅಥವಾ ಕೆಲವರನ್ನು ಹಿಡಿದುಕೊಂಡು ಬರುವುದು. ರಿಎಂಪ್ಲಾಯ್‌ಮೆಂಟ್ ಕೊಡಿರಿ ಅಥವಾ ಎಕ್ಸ್‌ಟೆನ್‌ಷನ್ ಆದರೂ ಕೊಡಿರಿ ಎಂದು ಕೇಳುವುದು. ಅವನಿಗೆ ಎಕ್ಸ್‌ಟೆನ್‌ಷನ್ ಕೊಟ್ಟರೆ ಏನಾಗುತ್ತದೆ

ಎಂದರೆ, ಕೆಳಗಿನವನು ಹಾದಿ ನೋಡುತ್ತಿರುತ್ತಾನೆ. ನನಗೆ ಯಾವಾಗ ಆ ಜಾಗ ಸಿಗುತ್ತದೆ ಎಂದು ನೋಡುತ್ತಿರುತ್ತಾನೆ. ಜೀವನದಲ್ಲಿ ಪ್ರಮೋಷನ್ ಇಲ್ಲದೇ ಹೋದರೆ ಸ್ವಾರಸ್ಯವೇ ಇರುವುದಿಲ್ಲ. ಈಗ ಏನಾಗುತ್ತಿತ್ತು ಎಂದರೆ ಮೇಲಿದ್ದವನು ಬಿಡುವುದಿಲ್ಲ. ಅವನು ಎಕ್ಸ್‌ಟೆನ್‌ಷನ್ ತೆಗೆದುಕೊಂಡು ಹೋಗುತ್ತಿದ್ದ. ಅವನ ಎಕ್ಸ್‌ಟೆನ್‌ಷನ್ ಪೀರಿಯಡ್ ಮುಗಿಯುವುದರೊಳಗೆ ಕೆಳಗಿದ್ದವನು ಹಾಗೆಯೇ ರಿಟೈರ್ ಆಗುತ್ತಿದ್ದ. ಆದಕ್ಕಾಗಿ ಇವತ್ತು ಎಂಪ್ಲಾಯೀಸ್‌ನಲ್ಲಿ ಸಮಾಧಾನದ ವಾತಾವರಣ ತರ ಬೇಕಾಗಿದ್ದರೆ ಇನ್ನು ಮುಂದೆ ಯಾವ ಎಕ್ಸ್‌ಟೆನ್‌ಷನ್ ಕೊಡತಕ್ಕದ್ದು ಇಲ್ಲ, ಯಾವ ರಿ–ಎಂಪ್ಲಾಯ್ ಮೆಂಟ್ ಕೊಡತಕ್ಕದ್ದು ಇಲ್ಲ ಎಂದು ನಿರ್ಣಯ ತೆಗೆದುಕೊಂಡಿದ್ದೇವೆ, ಅದನ್ನು ಜಾರಿಗೆ ತರುವುದಕ್ಕೆ ಸರ್ವರೀತಿಯಿಂದ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ತಮಗೆಲ್ಲರಿಗೂ ಗೊತ್ತಿರುವಹಾಗೆ ಇದು ನಾನು ಬಂದಮೇಲೆ ಆಯಿತೋ ಅಥವಾ ಇದು ಆಕಸ್ಮಿಕವಾಗಿ ಆಯಿತೋ ಗೊತ್ತಿಲ್ಲ. ೩–೪ ಲಾಕಪ್‌ನಲ್ಲಿ ಸಾವಿನ ಘಟನೆಗಳು ನಡೆದವು. ಸಾಯಂಕಾಲ ತೆಗೆದುಕೊಂಡು ಹೋಗಿ ಲಾಕಪ್‌ನಲ್ಲಿಡುವುದು ಬೆಳಗ್ಗೆ ಏಳುವುದರಲ್ಲಿ ಅವನು ಸತ್ತು ಹೋಗಿದ್ದಾನೆ ಎಂದು ಹೇಳುವುದು ಗೌರ್ನಮೆಂಟ್ ಮೆಷಿನರಿ ಎಷ್ಟು ಕ್ರೆಡಿಬಿಲಿಟಿ ಕಳೆದುಕೊಂಡಿತ್ತು ಎಂದರೆ. ಲಾಕಪ್‌ನಲ್ಲಿ ಯಾರು ಸತ್ತರೂ ಅಧಿಕಾರಿ ಬಡಿದೇ ಕೊಂದಿದ್ದಾನೆ ಎಂಬಭಾವನೆ ಬರುತ್ತಿತ್ತು ನಾವು ಹೇಳಲೇ ಬೇಕಾಗಿಲ್ಲ, ಆ ಭಾವನೆ ಜನರಮನಸ್ಸಿನಲ್ಲಿ ಮೂಡಿ ಬಿಡುತ್ತಿತ್ತು. ಕ್ರೆಡಿಬಿಲಿಟಿ ಅಷ್ಟು ಲೋ ಆಗಿದೆ. ನಮ್ಮ ಜನರ ವಿಶ್ವಾಸ, ನಮ್ಮ ಸಿಬ್ಬಂದಿಯ ಬಗ್ಗೆ ನಮ್ಮ ಮೆಷಿನರಿ ಬಗ್ಗೆ ನಮ್ಮ ಪೋಲೀಸ್ ಫೋರ್ಸ್ ಬಗ್ಗೆ ಬರಬೇಕಾಗಿದ್ದರೆ, ಎಲ್ಲೇ ಲಾಕಪ್ ಡೆತ್ಸ್ ಆದರೂ ಸಿ.ಒ.ಡಿ ಎನ್‌ಕ್ವೈರಿ ಆಗಬೇಕು ಎಂದು ನಿರ್ಣಯ ಮಾಡಿದ್ದೇವೆ. ಜನತಾ ಪಕ್ಷದ ವಿರೋಧಬಬ್ಬ ಸದಸ್ಯರೊಬ್ಬರು ಮೊಲ್ಮೆಯಲ್ಲಿ ಈ ಸಲಹೆ ಮಾಡಿದ ತಕ್ಷಣ ನಾನು ಒಪ್ಪಿಕೊಂಡೆ ಇಲ್ಲಿಯವರೆಗೆ ಲಾಕಪ್‌ನಲ್ಲಿ ಸತ್ತಿದ್ದರೆ ಎನ್‌ಕ್ವೈರಿ ಯಾರು ಮಾಡುತ್ತಿದ್ದರು ಎಂದರೆ, ಸಬ್ ಇನ್‌ಸ್ಪೆಕ್ಟರ್ ಮೇಲೆ ದೂರು ಬಂದರೆ, ಅಲ್ಲಿಯ ಇನ್‌ಸ್ಪೆಕ್ಟರ್ ಎನ್‌ಕ್ವೈರಿ ಮಾಡುವುದು, ಇನ್‌ಸ್ಪೆಕ್ಟರ್ ಇಲ್ಲ ಎಂದರೆ ಡಿಪ್ಯುಟಿ ಎಸ್‌ಪಿ ಮಾಡುವುದು ಇತ್ತು. ಇವರು ಆ ಸ್ಟೇಷನ್‌ಗೆ ಹೋದಾಗ ಆ ಸಬ್‌ಇನ್‌ಸ್ಪೆಕ್ಟರೇ ಅವರಿಗೆ ಸರಬರಾಯಿ ಮಾಡುತ್ತಿದ್ದ ಎಂದಮೇಲೆ ಅವರು ಅವನನ್ನು ಉಳಿಸುವುದಕ್ಕೆ ಏನೋ ಮಾಡಿದ್ದಾನೆ, ಅವನ ಜೀವನ ಏತಕ್ಕೆ ಹಾಳು ಮಾಡಬೇಕು, ಹೆಂಡತಿ ಮಕ್ಕಳು ಇದ್ದಾರೆ, ಮಕ್ಕಳಿಗೆ ಲಗ್ನ ಮಾಡಬೇಕಾಗಿದೆ, ಏತಕ್ಕೆ ಅವನನ್ನು ಮನೆಗೆ ಕಳುಹಿಸಬೇಕು ಎಂದು, ಒಂದು ರಿಪೋರ್ಟ್ ಮಾಡಿ, ಅವನನ್ನು ಎಕ್ಸಾನರೇಟ್ ಮಾಡಿ, ಅಲ್ಲಿಂದಲ್ಲೇ ಸರಿ ಮಾಡುತ್ತಿದ್ದರು. ಅದಕ್ಕಾಗಿ ಇದು ಆಗಬಾರದು, ಪೋಲೀಸರ ಬಗ್ಗೆ ಜನರಲ್ಲಿ ಅಷ್ಟೆ ಒಳ್ಳೆಯ ಭಾವನೆ, ವಿಶ್ವಾಸಮೂಡಿಸಬೇಕೆಂಬ ದೃಷ್ಟಿಯಿಂದ ಎಲ್ಲೇ ಲಾಕಪ್‌ಡೆತ್ ಆದರೂ ಸಿ.ಒ.ಡಿ. ತನಿಖೆ ಮಾಡಬೇಕೆಂಬ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅಲ್ಲಿಂದ ನಾವು ಇವತ್ತು ಎರಡು ಆರ್ಗನೈಜೇಷನ್ಸ್ ಸ್ಥಾಪನೆ ಮಾಡುವುದಕ್ಕೆ ಹೊರಟಿದ್ದೇವೆ. ಬಹಳ ಮುಂದೆ ಹೋಗಿದ್ದೇವೆ ಇದರ ಬಗ್ಗೆ ಅನೇಕ ಸಲ ನಾನು ಪ್ರಸ್ತಾಪ ಮಾಡಿದ್ದೇನೆ. ಸ್ಕ್ರೀನಿಂಗ್ ಕಮಿಟಿ ಮಾಡುವುದು. ಅನೇಕ ಜನ ಅಧಿಕಾರಿಗಳು ಸಣ್ಣವರಾಗಲಿ, ದೊಡ್ಡವರಾಗಲಿ, ನಮ್ಮ ಸರ್ವೀಸ್ ರೂಲ್ಸ್ ಪ್ರಕಾರ ೫೦ ವರ್ಷ ಅವರು ಮುಟ್ಟಿದ್ದರೆ, ಅಥವಾ ೨೫ ವರ್ಷ ಸರ್ವೀಸ್ ಮಾಡಿದ್ದರೆ, ನಮಗೆ ಅವರ ಸೇವೆ ಬೇಕಾಗಿದೆಯೋ ಇಲ್ಲವೇ ಎಂಬ ನಿರ್ಣಯ ಮಾಡುವ ಸಂಪೂರ್ಣ ಅಧಿಕಾರ ರಾಜ್ಯ ಸರಕಾರಕ್ಕೆ ಇದೆ ಸರ್ವೀಸ್ ರೂಲ್ಸ್ ಸೆಕ್ಷನ್ ೨೮೫ ಪ್ರಕಾರ ಇದು ಇದೆ. ಆದರ ಪ್ರಕಾರ ನಾವು ಸ್ಕ್ರೀನ್ ಮಾಡಿ, ಮಹಾರಾಯ ನಿನ್ನ ಸಹವಾಸ ಬೇಡ, ನಮ್ಮ ಸಹವಾಸ ನಿನಗೆ ಸಾಕು ನಿನ್ನ ಸಹವಾಸ ನಮಗೆ ಸಾಕು, ಮೂರು ತಿಂಗಳ ಸಂಬಳ ತೆಗೆದುಕೊಂಡು ಮನೆಗೆ ನಡೆ ಎಂದು ಹೇಳುವುದಕ್ಕೆ ಅವಕಾಶ ಇದೆ. ಈ ಒಂದು ಸೂತ್ರವನ್ನು ಸರಕಾರಕ್ಕೆ ಯಾರು ಹೊರೆಯಾಗಿದ್ದಾರೆ, ಯಾರು ಸಮಾಜಕ್ಕೆ ಹೊರೆಯಾಗಿದ್ದಾರೆ ಯಾರು ಇಷ್ಟೆಲ್ಲಾ ಸಂಬಳ ತೆಗೆದುಕೊಂಡರೂ ಅವರಿಂದ ಹೆಚ್ಚಿನ ಸೇವೆಯನ್ನು ಪಡೆಯುವುದಕ್ಕೆ ಸಾಧ್ಯ ಇಲ್ಲ, ಯಾರು ಲಂಚ ರುಷುವತ್ತುಗಳಲ್ಲಿ ಮುಳುಗಿ ತೇಲುತ್ತಿದ್ದಾರೆ ಅಂತಹ ಜನರಿಗೆ ಮನೆಗೆ ಕಳುಹಿಸ ಕಳುಹಿಸಬೇಕೆಂಬ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ಇದೇನೂ ಆರ್ಬಿಟ್ರರಿಯಾಗಿ ಅಧಿಕಾರ ನನ್ನ ಕೈಯಲ್ಲಿದೆ, ಸೂತ್ರ ನನ್ನ ಕೈಯಲ್ಲಿದೆ. ಯಾರ ಕುತ್ತಿಗೆಯಾದರೂ ಕುಯ್ಯಬಹುದೆಂಬ ದೃಷ್ಟಿಯಿಂದ ಮಾಡುತ್ತಿಲ್ಲ. ಈ ಒಂದು ಸ್ಕ್ರೀನಿಂಗ್ ಕಮಿಟಿಗೆ ಒಬ್ಬ ಹೈಕೋರ್ಟ್ ಜಡ್ಜ್ ಅಧ್ಯಕ್ಷರಾಗಿರುತ್ತಾರೆ. ಮತ್ತು ಕೆಲವು ಜನ ಯಾರು ಸರ್ವೀಸ್‌ನಲ್ಲಿ ತಮ್ಮ ಜೀವಮಾನವನ್ನು ಕಳೆದು ಒಳ್ಳೆಯ ಹೆಸರು ಪಡೆದಿದ್ದಾರೆ ಅಂತಹವರಿಗೆ ಸಮಾಜದಲ್ಲಿ ಉನ್ನತ ಸ್ಥಾನದಲ್ಲಿ ಇರುವಂತಹವರನ್ನು ಸೇರಿಸಿ ಮೂರು ನಾಲ್ಕು ಜನರ ಕಮಿಟಿ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಈಗಾಗಲೇ ಸಂಬಂಧಪಟ್ಟ ನ್ಯಾಯಾಧೀಶರಿಗೆ ನಾವು ಕಾಂಟ್ಯಾಕ್ಟ್ ಮಾಡಿದ್ದೇವೆ. ಉಳಿಕೆ ೩–೪ ಹೆಸರನ್ನು ಸೇರಿಸಿ, ಈ ಕಮಿಟಿಯನ್ನು ಪೂರ್ತಿ ಮಾಡುವತನಕ ಹೆಸರನ್ನು ಹೇಳಬಾರದು ಎಂಬ ದೃಷ್ಟಿಯಿಂದ ಇಲ್ಲಿ ನಾನು ಇದನ್ನು ಅನೌನ್ಸ್ ಮಾಡುತ್ತಿಲ್ಲ. ಹೆಸರನ್ನು ಹೇಳುವುದಿಲ್ಲ.

ಬಹುಶಃ ಇನ್ನು ಒಂದು ತಿಂಗಳ ಒಳಗಾಗಿ ಸ್ಕ್ರೀನಿಂಗ್ ಕಮಿಟಿಯನ್ನು ನಾವು ಮಾಡುತ್ತೇವೆ. ಮತ್ತು ಅನೇಕ ಜನರು ಕೆಲವರು ಇವತ್ತು ಸರ್ಕಾರಕ್ಕೆ ಹೊರೆಯಾಗಿರುವಂತಹ ಅಧಿಕಾರಿಗಳು ಇದ್ದಾರೆ ಅವರ ಕೇಸ್‌ಗಳೆಲ್ಲಾ ಈ ಸ್ಕ್ರೀನಿಂಗ್ ಕಮಿಟಿ ಮುಂದೆ ಹೋಗುತ್ತವೆ ಆಗ ಸ್ವಲ್ಪ ಮಟ್ಟಿಗೆ ಆಡಳಿತದಲ್ಲಿ ಬಿಗಿ ತರುವುದಕ್ಕೆ, ಶಿಸ್ತು ತರುವುದಕ್ಕೆ ಮತ್ತು ಸ್ವಲ್ಪ ಮಟ್ಟಿಗೆ ಆಡಳಿತದಲ್ಲಿರುವಂತಹ ಲಂಚ ರುಶುವತ್ತುಗಳು ಏನಿವೆ ಅವೆಲ್ಲವನ್ನೂ ನಾವು ಹತೋಟಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಒಂದು ತಿಂಗಳಲ್ಲಿ ನಾನು ಅದನ್ನು ಅನೌನ್ಸ್ ಮಾಡುತ್ತೇನೆ. ಘೋಷಣೆ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ನಾನು ಇರುತ್ತೇನೆ. ಅದೇ ರೀತಿಯಲ್ಲಿ ಇನ್ನೊಂದು ಆರ್ಗನೈಜೇಶನ್ ಅನ್ನು ಮಾಡುವವನಿದ್ದೇನೆ. ಅದು ಯಾವುದೆಂದರೆ ಎಫಿಷಿಯನ್ಸಿ ಅಂಡ್ ವಿಜಿಲೆನ್ಸ್ ಆರ್ಗನೈಜೇಶನ್ ಎಲ್ಲಾದರೂ ಆಫೀಸ್‌ಗಳಲ್ಲಿ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ ಯಾವ ಯಾವ ಆಫೀಸ್‌ಗಳಲ್ಲಿ ಸರಿಯಾಗಿ ಕೆಲಸ ನಡೆಯುತ್ತಿಲ್ಲ ಅದನ್ನು ನೋಡುವುದಕ್ಕೆ ಇವತ್ತು ನಮ್ಮಲ್ಲಿ ಏನೂ ಇಲ್ಲ. ಯಾರಾದರೂ ಒಬ್ಬ ವ್ಯಕ್ತಿಯ ಮೇಲೆ ದೂರು ಕೊಟ್ಟಾಗ ಆ ದೂರಿನಲ್ಲಿ ಏನಾದರೂ ಪ್ರೈಮಾಫೇಸಿ ಕೇಸ್ ಇದ್ದಾಗ ಅಂತಹ ಕೆಲವು ಕೇಸ್‌ಗಳನ್ನು ಲೋಕಾಯುಕ್ತರಿಗೆ ರೆಫರ್ ಮಾಡಬಹುದು. ಮತ್ತೆ ಅವರು ಯಾವ ರೀತಿ ಮಾಡುತ್ತಾರೆ ಎನ್ನುವ ಪ್ರಶ್ನೆ ಬೇರೆ. ಈಗ ನಮ್ಮ ಆಫೀಸ್‌ಗಳಲ್ಲಿ ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೆ ? ಆಫೀಸ್‌ಗಳಲ್ಲಿ ನಮ್ಮ ಸಿಬ್ಬಂದಿ ಟೈಮ್‌ಗೆ ಸರಿಯಾಗಿ ಬರುತ್ತಿದ್ದಾರೆಯೇ ಅವರು ಯಾವ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ ಯಾವ ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ಏನು ಮಾಡುತ್ತಿದ್ದಾರೆ ಎನ್ನುವುದಕ್ಕೆ ವಾಚ್ ಡಾಗ್ ತರಹದ ಕಮಿಟಿ ಒಂದನ್ನು ಮಾಡುತ್ತೇವೆ. ಇದರ ಜೊತೆಗೆ ಆ ಒಂದು ಘೋಷಣೆಯನ್ನು ಮಾಡುವಂತಹ ಪರಿಸ್ಥಿತಿಯಲ್ಲಿ ನಾನು ಇರುತ್ತೇನೆ. ಅಲ್ಲಿಂದ ಒಂದು ವಿಚಾರದಲ್ಲಿ ಎಲ್ಲರಿಗೂ ತಪ್ಪು ಅಭಿಪ್ರಾಯ ಇರಬಹುದು ಇಲ್ಲವೆಂದು ನಾನು ಹೇಳುವುದಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಇವರ ಕಣ್ಣು ಸರ್ಕಾರಿ ನೌಕರರ ಮೇಲೆ ಬಿದ್ದಿದೆ. ಸರ್ಕಾರ ಒಂದು ಟಾರ್ಗೇಟ್ ಇಟ್ಟುಕೊಂಡು ಸರ್ಕಾರಿ ನೌಕರರಿಗೆ ತೊಂದರೆ ಕೊಡುತ್ತಿದ್ದಾರೆ ಈ ಸರ್ಕಾರದವರು ಸರ್ಕಾರಿ ನೌಕರರನ್ನು ಸಿಕ್ಕಾಪಟ್ಟೆ ಬೈಯುತ್ತಾರೆ ಎನ್ನುವ ಏನೇನೋ ಅಭಿಪ್ರಾಯಗಳು ಅವರಲ್ಲಿ ಇದೆ ಅದಕ್ಕೆ ನಾನು ಇಲ್ಲಿ ಸ್ಪಷ್ಟಪಡಿಸುತ್ತಿದ್ದೇನೆ. ಆಡಳಿತ ಯಂತ್ರ ಇಲ್ಲದಿದ್ದರೆ ನಾವು ನಮ್ಮ ರಥ ಸಾಗಿಸುವುದು ಹೇಗೆ ? ನಮಗೆ ಆಡಳಿತ ಯಂತ್ರ ಬೇಕು. ಅದಕ್ಕೆ ಇವತ್ತು ಆಡಳಿತ ಯಂತ್ರದಲ್ಲಿ ನಮ್ಮ ಸರ್ಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವಂತಹ ಸಿಬ್ಬಂದಿ ಬಗ್ಗೆ ನಮಗೆ ಪೂರ್ಣ ವಿಶ್ವಾಸ ಇದೆ. ಆ ಭಾವನೆ ಅವರಲ್ಲಿ ಬರುವುದಕ್ಕೆ ಕಾರಣ ದುರಾದೃಷ್ಟವಶಾತ್ ಅವರು ಫೆಬ್ರವರಿ ತಿಂಗಳಲ್ಲಿ ಮುಷ್ಕರ ಮಾಡಿದರು, ೩–೪ ದಿವಸಗಳ ಕಾಲ ಮುಷ್ಕರ ಮಾಡಿ ಪುನಃ ವಾಪಸ್ಸು ಬಂದರು. ಆ ಮಾತು ಬೇರೆ ಅವರು ಮುಷ್ಕರ ಮಾಡಿದ ಮೇಲೆ ಅವರ ಮೇಲೆ ಸರ್ಕಾರಕ್ಕೆ ಯಾವುದೇ ರೀತಿಯ ಸೇಡಿನ ಭಾವನೆ ಇಲ್ಲ. ಅವರ ಬಗ್ಗೆ ನನಗೆ ಅನುಕಂಪ ಇದೆಯೇ ಹೊರತಾಗಿ ಅವರ ಬಗ್ಗೆ ನನಗೆ ಯಾವುದೇ ದ್ವೇಷ ಇಲ್ಲ. ನಾವು ಯಾವುದೇ ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಅದರ ಗುರಿ ಇಟ್ಟುಕೊಂಡು ಅದನ್ನು ಮುಟ್ಟಬೇಕಾದರೆ ಅವರ ಸಂಪೂರ್ಣ ಸಹಕಾರ ನಮಗೆ ಇಲ್ಲದಿದ್ದರೆ ಆ ಗುರಿಯನ್ನು ನಾವು ಮುಟ್ಟುವುದಕ್ಕೆ ಆಗುವುದಿಲ್ಲ. ಅದಕ್ಕೆ ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅವರ ಬೇಡಿಕೆಗಳು ಏನಿವೆ ಆ ಬೇಡಿಕೆಗಳು ಸರಿಯಾಗಿವೆ, ಸರಿ ಇಲ್ಲವೆಂದು ನಾನು ಹೇಳುತ್ತಿಲ್ಲ. ಆ ಬೇಡಿಕೆಗಳನ್ನು ಈಡೇರಿಸಲು ನನಗೆ ಶಕ್ತಿ ಇದೆಯೇ ಆ ಬೇಡಿಕೆಗಳನ್ನು ಪೂರ್ತಿಯಾಗಿ ಮಾಡುವುದಕ್ಕೆ ಆಗುತ್ತದೆಯೇ ? ಈ ಬಗ್ಗೆ ಆಲೋಚನೆ ಮಾಡಬೇಕು. ಅವರೂ ಸಹ ಈ ಸಮಾಜದಲ್ಲಿ ಒಂದು ಅಂಗ ಎಂದು ವಿಚಾರ ಮಾಡಬೇಕೆ ಹೊರತು ನೀವು ಬೇಡಿಕೆ ಈಡೇರಿಸದಿದ್ದರೆ ನಮ್ಮ ಹಾದಿ ನಾವು ಹಿಡಿಯುತ್ತೇವೆ ನಿಮ್ಮ ಹಾದಿ ನೀವು ಹಿಡಿಯಿರಿ ಎನ್ನುವ ವಾತಾವರಣ ಅವರಲ್ಲಿ ಬೆಳೆಯಬಾರದು ನಮ್ಮಲ್ಲಿಯೂ ಕೂಡ ಬೆಳೆಯಬಾರದು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ನಮ್ಮ ಸರ್ಕಾರಿ ನೌಕರರಿಗೆ ಸಂಬಂಧಪಟ್ಟ ಇನ್ನೊಂದು ಪ್ರಶ್ನೆ ಇದೆ. ನಮ್ಮ ಸರ್ಕಾರಿ ನೌಕರರ ಮೇಲೆ ನನಗೆ ಸಂಪೂರ್ಣ ಭರವಸೆ ಇದೆ. ಸಂಪೂರ್ಣವಾದ ವಿಶ್ವಾಸ ಇದೆ. ಮತ್ತು ಅವರಿಂದ ಸಂಪೂರ್ಣ ಸಹಕಾರ ಸಹಾಯ ನನಗೆ ದೊರೆಯುತ್ತದೆ ಎನ್ನುವ ಭರವಸೆ ಇದೆ ಇದೇ ಸಂದರ್ಭದಲ್ಲಿ ಈ ನಿವೃತ್ತಿ ವಯಸ್ಸಿನ ಬಗ್ಗೆಯೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಕೆಲವು ಜನರಲ್ಲಿ ಒಂದು ಕೆಟ್ಟ ಭಾವನೆ ಬರುವಂತಹ ರೀತಿಯಲ್ಲಿ ಹೇಳಿಕೆಗಳನ್ನು ಕೊಟ್ಟಿದ್ದಾರೆ ಏನಪ್ಪ ಇನ್ನು ಮೂರು ವರ್ಷಗಳು ಇದ್ದಂತೆ ನಮ್ಮನ್ನು ಮನೆಗಳಿಗೆ ಕಳುಹಿಸಿಕೊಡಬೇಕೆಂದು ಮಾನ್ಯ ವೀರೇಂದ್ರಪಾಟೀಲ್‌ರವರು ಮನಸ್ಸು ಮಾಡಿದಂತೆ ಕಾಣಿಸುತ್ತದೆ. ಈಗ ಇರುವ ೫೮ ವರ್ಷಗಳಿಂದ ೫೫ ವರ್ಷಗಳಿಗೆ ಇಳಿಸುವುದಕ್ಕೆ ಅವರು ಮನಸ್ಸು ಮಾಡಿದಂತೆ ಕಾಣಿಸುತ್ತದೆ ಅದನ್ನು ಅವರು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ತಮಗೆಲ್ಲಾರಿಗೂ ಗೊತ್ತಿದೆ ರಾಜ್ಯಪಾಲರ ಭಾಷಣದಲ್ಲಿ ಏನು ಪ್ರಸ್ತಾಪ ಮಾಡುತ್ತೇವೆ ಅದಕ್ಕೆ ಏನು ಸಲಹೆಗಳು ಬರುತ್ತವೆ ಅವೆಲ್ಲವನ್ನು ನಿರಾಕರಣೆ ಮಾಡ-

ವುದಕ್ಕೆ ಆಗುವುದಿಲ್ಲ. ಆ ಸಲಹೆಗಳು ಏತಕ್ಕೆ ಬರುತ್ತವೆ? ಅನೇಕ ಜನರು ನಮ್ಮ ಮಕ್ಕಳು ನಿರುದ್ಯೋಗಿಗಳಾಗಿದ್ದಾರೆ. ಅವರಿಗೆ ಉದ್ಯೋಗ ಸಿಕ್ಕಿಲ್ಲ.

ಅವರಿಗೆ ಉದ್ಯೋಗ ಎಲ್ಲರಿಗೂ ಒದಗಿಸುವುದಕ್ಕೆ ಸಾಧ್ಯವಿಲ್ಲ. ನಿವೃತ್ತಿ ವಯಸ್ಸನ್ನು ೫೫ಕ್ಕೆ ಇಳಿಸಿದರೂ ಎಲ್ಲರಿಗೂ ಉದ್ಯೋಗ ಕೊಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಆದರೂ ಸ್ವಲ್ಪ ಮಟ್ಟಿಗಾದರೂ ಆ ಮಕ್ಕಳಿಗೆ ಸಮಾಧಾನವಾಗುತ್ತದೆ. ನಾನು ಅಂಕಿ ಸಂಖ್ಯೆಗಳನ್ನು ಪೂರ್ತಿಯಾಗಿ ಶೇಖರಣೆ ಮಾಡಿಲ್ಲ ೫೫ ವರ್ಷಕ್ಕೆ ಇಳಿಸಿದರೆ, ಅಂದರೆ ಏಪ್ರಿಲ್ ತಿಂಗಳಿನಲ್ಲಿ ಇಳಿಸುತ್ತೇವೆಂದು ಹೇಳಿದರೆ ಸುಮಾರು ೩೩ ಸಾವಿರ ಹುದ್ದೆಗಳು ಖಾಲಿಯಾಗುತ್ತವೆ. ಹಿಂದಿನ ಹುದ್ದೆಗಳು ಸುಮಾರು ೬೦ ಸಾವಿರವೋ ೮೦ ಸಾವಿರವೋ ಇರಬಹುದು ಹಿಂದಿನ ಹುದ್ದೆಗಳು ೫೦ ಸಾವಿರ ಎಂದಿಟ್ಟುಕೊಳ್ಳಿ, ೫೦ ಮತ್ತು ಈಗ ಖಾಲಿ ಆಗುವ ೩೦ ಸಾವಿರ ಹುದ್ದೆಗಳು ಎಂದು ಇಟ್ಟುಕೊಳ್ಳಿ, ಒಟ್ಟು ೮೦ ಸಾವಿರ ಹುದ್ದೆಗಳು ಖಾಲಿ ಆಗುತ್ತವೆ. ಆಗ ನನಗೆ ಉದ್ಯೋಗ ಸಿಗಬಹುದು, ನನಗೆ ಸಿಗಬಹುದೆಂದು ನಿರುದ್ಯೋಗಿ ಮಕ್ಕಳಲ್ಲಿ ಒಂದು ರೀತಿಯ ಆಸೆ ಮೂಡಬಹುದು. ಈ ರೀತಿ ಮಾಡುವುದರಿಂದ ಆ ಯಂಗರ್ ಜನರೇಷನ್‌ಗೆ ಇದು ಒಂದು ರೀತಿಯ ಆಶಾಕಿರಣವಾಗಿ ಪರಿಣಮಿಸಬಹುದು. ಇನ್ನೊಂದು ರೀತಿಯಿಂದ ಒಬ್ಬ ಅಧಿಕಾರಿ ಏನು ಹೇಳುತ್ತಾನೆಂದರೆ, ಇನ್ನೂ ನನ್ನ ಮಕ್ಕಳು ದೊಡ್ಡವರಾಗಿಲ್ಲ. ನನ್ನ ಹೆಣ್ಣು ಮಕ್ಕಳಿಗೆ ಲಗ್ನ ಮಾಡಬೇಕಾಗಿತ್ತು ಇನ್ನು ಮೂರು ವರ್ಷ ನನಗೆ ಅವಕಾಶ ಸಿಕ್ಕಿದ್ದಿದ್ದರೆ ಬಹಳ ಅನುಕೂಲ ವಾಗುತ್ತಿತ್ತು. ಆದರೆ, ಈಗಲೇ ನಮ್ಮನ್ನು ಬಡಿದು ಹೊರಗೆ ಹಾಕಿದರು ಎಂದು ಅವರಲ್ಲಿ ವಿಚಾರ ಬರುವುದಕ್ಕೆ ಸಾಧ್ಯತೆ ಇದೆ. ಈ ಎರಡೂ ದೃಷ್ಟಿಯಿಂದ ನೋಡಿದರೆ ಎರಡರಲ್ಲೂ ಅಡ್ವಾಂಟೇಜ್ ಇದೆ, ಎರಡರಲ್ಲೂ ಡಿಸ್ ಅಡ್ವಾನ್‌ಟೇಜ್ ಇದೆ. ಈ ವಿಷಯವನ್ನು ರಾಜ್ಯಪಾಲರ ಭಾಷಣದಲ್ಲಿ ನಮೂದಿಸಿದಂಥ ಉದ್ದೇಶ ಏನು? ಇದೊಂದು ಸಣ್ಣ ವಿಚಾರವೆಂದು ನಾವು ನಮೂದಿಸಿಲ್ಲ. ಇದು ಗಹನವಾದಂಥ ವಿಚಾರ. ಇದು ಮೇಜರ್ ಪಾಲಿಸಿ ಡಿಸೀಷನ್ ಇದನ್ನು ಸರ್ಕಾರ ತೆಗೆದುಕೊಳ್ಳಬೇಕಾದ ವಿಚಾರ ಇದೆ. ಅದಕ್ಕೇ ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗಲೀ. ಇದರ ಸಾಧಕ ಬಾಧಕಗಳ ಬಗ್ಗೆ ಚರ್ಚೆಯಾಗಲೀ. ಇದು ಮಾಡುವಂಥಾದ್ದು ಯೋಗ್ಯವೋ ಅಯೋಗ್ಯವೋ ಎನ್ನುವಂತಾದ್ದು ಗೊತ್ತಾಗುತ್ತದೆ ಎನ್ನುವ ಉದ್ದೇಶದಿಂದ ಈ ವಿಷಯವನ್ನು ರಾಜ್ಯಪಾಲರ ಭಾಷಣದಲ್ಲಿ ನಮೂದು ಮಾಡಿದ್ದೇವೆ. ಎಷ್ಟು ಜನ ನೌಕರರು ನಿವೃತ್ತಿಯಾಗಬಹುದು ಹಾಗೂ ಅವರಿಗೆ ಕೊಡಬೇಕಾಗಿರುವ ಹಣದ ಹೊರೆಯನ್ನು ಸರ್ಕಾರ ಹೊರುವುದಕ್ಕೆ ಸಾಧ್ಯ ಇದೆಯೋ ಎಂಬುದು ಕೂಡ ಚರ್ಚೆ ಮಾಡುವುದರಲ್ಲಿ ಗೊತ್ತಾಗುತ್ತದೆ ಎನ್ನುವ ದೃಷ್ಟಿಯಿಂದ ಇದನ್ನು ಪ್ರಸ್ತಾಪ ಮಾಡಿದ್ದೇವೆ. ಚರ್ಚೆ ಆಗತಕ್ಕಂಥ ಸಮಯದಲ್ಲಿ ನಾನು ಪೂರ್ತಿ ಸಮಯ ಈ ಸದನದಲ್ಲಿ ಇರಲಾಗಲಿಲ್ಲ ಇದನ್ನು ಎಷ್ಟು ಜನ ಸ್ವಾಗತ ಮಾಡಿದರೋ ಎಷ್ಟು ಜನ ಸ್ವಾಗತ ಮಾಡಲಿಲ್ಲವೋ ಗೊತ್ತಿಲ್ಲ ಹೊರಗಡೆಯಿಂದ ಟೋಟಲ್ ಆಗಿ ನೋಡಿದರೆ ಎರಡೂ ರೀತಿಯಿಂದಲೂ ಸ್ವಾಗತ ಮಾಡಿರತಕ್ಕ ನಿದರ್ಶನಗಳು ಇವೆ. ಮುಖ್ಯಮಂತ್ರಿಯಾಗಿ ನಾನು ರಾಜ್ಯದ ಆಡಳಿತವನ್ನು ವಹಿಸಿಕೊಂಡಿದ್ದೇನೆ. ಯಾವುದಾದರೂ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ ಮೇಲೆ ಅದರ ಬಗ್ಗೆ ಅನಿಶ್ಚಿತ ವಾತಾವರಣ ಇರಬಾರದು. ಆ ದೃಷ್ಟಿಯಲ್ಲಿ ನಾನು ಸ್ಪಷ್ಟಪಡಿಸುತ್ತಿದ್ದೇನೆ. ೫೮ನೇ ವರ್ಷದ ನಿವೃತ್ತಿ ವಯಸ್ಸು ಹೋಗಿ ೫೫ಕ್ಕೆ ತರುವಂಥ ನಿರ್ಣಯವನ್ನು ಇನ್ನೂ ಸ್ವಲ್ಪ ದಿವಸ ಎಲ್ಲರೂ ಚರ್ಚೆ ಮಾಡಲಿ. ಅದರಿಂದ ನನಗೆ ಅವಶ್ಯ ಮಾಹಿತಿಗಳು ಸಿಗುತ್ತವೆ. ಅದರ ಬಗ್ಗೆ ಸರ್ಕಾರ ಅಂತಿಮ ನಿರ್ಣಯವನ್ನು ಮುಂದಿನ ಮಾರ್ಚಿ ೧೯೯೧ರೊಳಗೆ ತೆಗೆದುಕೊಳ್ಳುವ ಹಾಗಿಲ್ಲವೆಂದು ನಾನು ಹೇಳುತ್ತೇನೆ. ಇದನ್ನು ಸ್ವಾಗತ ಮಾಡುವವರ ಅಭಿಪ್ರಾಯವೂ ನನಗೆ ಬೇಕು, ಸ್ವಾಗತ ಮಾಡದೇ ಇರುವವರ ಅಭಿಪ್ರಾಯವೂ ನನಗೆ ಬೇಕು. ಆದುದರಿಂದ ಅಲ್ಲಿಯವರೆಗೂ ಇದರ ಬಗ್ಗೆ ಪೂರ್ಣವಾದ ಚರ್ಚೆಯಾಗಲಿ. ಈ ಮಧ್ಯೆ ಹಣಕಾಸನ್ನು ಯಾವ ರೀತಿ ವ್ಯವಸ್ಥೆ ಮಾಡಬೇಕಾಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ನಾನು ಹೇಳಬೇಕಾಗಿದ್ದರೆ. ಸ್ಪಷ್ಟವಾಗಿ ನಾವು ಈ ನಿರ್ಣಯವನ್ನು ಮಾರ್ಚಿ ೧೯೯೧ಕ್ಕೆ ತೆಗೆದುಕೊಳ್ಳುತ್ತೇವೆಂದು ಈ ಮೂಲಕ ಘೋಷಣೆ ಮಾಡುತ್ತೇನೆ. ಅದಕ್ಕೂ ಮೊದಲು ಯಾವ ತೀರ್ಮಾನವನ್ನು ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅಲ್ಲಿಂದ ಇನ್ನೊಂದು ವಿಚಾರ ಹೇಳಬೇಕಾದರೆ, ಹಿಂದಿನ ಸರ್ಕಾರಕ್ಕೆ ಒಂದು ಕೆಟ್ಟ ಹೆಸರು ಬರುವುದಕ್ಕೆ ಕಾರಣ ಏನೆಂದರೆ, ಆಗ ಕದ್ದು ಟೆಲಿಫೋನ್ ಕೇಳಿರುವಂಥಾದ್ದು ಒಂದು ಘಟನೆ. ಅದಕ್ಕಾಗಿ ಮುಖ್ಯಮಂತ್ರಿಗಳೇ ತಮ್ಮ ಸ್ಥಾನವನ್ನು ಕಳೆದು ಕೊಳ್ಳಬೇಕಾಯಿತು ಅಥವಾ ತೆರವು ಮಾಡಬೇಕಾಯಿತು. ಇವತ್ತು ಪ್ರಜಾಪ್ರಭುತ್ವದಲ್ಲಿ ನಮಗೆ ಅಚಲವಾದ ವಿಶ್ವಾಸ ಇದೆ. ನಾವು ಯಾವ ವ್ಯವಹಾರವನ್ನೂ ಕೇಳುವಂಥ ಪ್ರವೃತ್ತಿ ನನ್ನಲ್ಲಿ ಇಲ್ಲ. ಓಪನ್ ಸೊಸೈಟಿ ಇರಬೇಕು. ಪ್ರತಿಯೊಬ್ಬ ನಾಗರೀಕನಿಗೂ ಸಂಪೂರ್ಣವಾದ ಅವಕಾಶ ಇರಬೇಕು. ನಾಗರೀಕನಿಗೆ ಅವನು ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸ್ವಾತಂತ್ರ್ಯ ಇರಬೇಕು. ಆ ದೃಷ್ಟಿಯಿಂದ

ನಾನು ಅಧಿಕಾರಕ್ಕೆ ಬಂದ ಮೇಲೆ ಲಿಖಿತ ಮೂಲಕ ಚೀಫ್ ಸೆಕ್ರೆಟರಿಗೆ ಹೇಳಿದ್ದೇನೆ. ನಮ್ಮ ಎಲ್ಲಾ ಸಂಬಂಧಪಟ್ಟ ಆಫೀಸರ್‌ಗಳಿಗೆ ಯಾರ ಟೆಲಿಫೋನ್ ಕೂಡ ಕದ್ದು ಕೇಳಬಾರದೆಂದು. ಕಟ್ಟುನಿಟ್ಟಾಗಿ ಹೇಳಬೇಕು ಸಮಾಜದಲ್ಲಿರುವಂಥ ಜನ, ರಾಜಕೀಯ ಕ್ಷೇತ್ರದಲ್ಲಿರತಕ್ಕ ಜನರ ಟೆಲಿಫೋನ್‌ಗಳನ್ನು ಕದ್ದು ಕೇಳದ ಹಾಗೆ ಸೂಚನೆ ಕೊಟ್ಟಿದ್ದೇನೆ. ಈ ಕಾಪೀಪ್ರೋಸಾದಲ್ಲಿ ಕೆಲಸ ಮಾಡುವಂಥ ಜನರ ಟೆಲಿಫೋನ್ ಆಗಲಿ, ಅಥವಾ ಒಳಗಡೆ ಇದ್ದು ನಮ್ಮಲ್ಲಿರುವಂಥ ಒಂದು ಕಮ್ಯೂನಲ್ ಕ್ಲ್ಯಾಷ್ ಮತ್ತೊಂದು ಟೆನ್‌ಷನ್ ಬಗ್ಗೆಯಾಗಲಿ ಇದರ ಬಗ್ಗೆ ಅಲ್ಲ. ಇವೊತ್ತು ಪ್ರತಿಯೊಬ್ಬರು ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯುವವರು ಇರಲಿ, ರಾಜಕೀಯ ಕ್ಷೇತ್ರದಲ್ಲಿ ದುಡಿಯುವವರು ಇರಲಿ. ಅವರ ಯಾವ ಟೆಲಿಫೋನ್‌ನ್ನು ಕೂಡ ಕದ್ದು ಕೇಳತಕ್ಕಂಥ ಅವಶ್ಯಕತೆ ಇಲ್ಲ. ಅದನ್ನು ಕೇಳಬಾರದು ಎಂಬ ಒಂದು ಕಟ್ಟಪ್ಪಣೆಯನ್ನು ನಾನು ಈಗಾಗಲೇ ಹಾಕಿದ್ದೇನೆ. ಅಲ್ಲಿಂದ ತಮಗೆ ಇನ್ನೂ ಒಂದು ವಿಚಾರ ಗೊತ್ತಾಗಿರಬಹುದು. ಅದು ವಿಧಾನ ಸೌಧದ ವಿಚಾರ. ತಾವುಗಳು ಡೆಲ್ಲಿಯಲ್ಲಿ ನೋಡಿರಬಹುದು, ಅಲ್ಲಿ ಸೆಕ್ರೆಟರಿಯೇಟ್ ಬೇರೆ, ಪಾರ್ಲಿಮೆಂಟ್ ಬೇರೆಯಾಗಿ ಇದೆ. ಅಲ್ಲಿ ಪೂರ್ತಿಯಾಗಿ ಪಾರ್ಲಿಮೆಂಟ್ ಬೇರೆಯಾಗಿಯೇ ಇದೆ. ಸೆಕ್ರೆಟರಿಯೇಟ್ ಕೂಡ ಪೂರ್ತಿಯಾಗಿ ಬೇರೆಯೇ ಇದೆ. ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲ. ಆದರೆ ನಮ್ಮಲ್ಲಿ ವಿಧಾನಸೌಧದಲ್ಲಿ ಸೆಕ್ರೆಟರಿಯೇಟ್ ಇದೆ. ಅಸೆಂಬ್ಲಿ ಇದೆ. ಕೌನ್ಸಿಲ್ ಇದೆ. ಅಷ್ಟೇ ಅಲ್ಲದೆ ಲೆಜಿಸ್ಲೇಚರ್ ಸೆಕ್ರೆಟರಿಯೇಟ್ ಕೂಡ ಇದರಲ್ಲಿಯೇ ಇದೆ, ಇದರಿಂದ ಪರಿಣಾಮ ಏನಾಗಿದೆ ಎಂದರೆ ಬಹುಶಃ ತಾವು ಇದನ್ನು ನೋಡುತ್ತಿರಬಹುದು. ಈ ವಿಚಾರವಾಗಿ ಒಂದೊಂದು ಸಲ ನಮ್ಮ ಅಧಿಕಾರಿಗಳಿಗೂ ಹೇಳುತ್ತೇನೆ, ಈ ಕಾರಿಡಾರ್‌ನಲ್ಲಿ ಹೊರಟರೆ ನಾವು ಎಂ.ಜಿ, ರೋಡ್‌ನಲ್ಲಿ ತಿರುಗಾಡುತ್ತಾ ಇದ್ದೇವೋ, ಕಮರ್ಷಿಯಲ್ ರೋಡ್‌ನಲ್ಲಿ ತಿರುಗಾಡುತ್ತಾ ಇದ್ದೇವೋ ಅಥವಾ ಮಾರ್ಕೆಟ್‌ನಲ್ಲಿ ತಿರುಗಾಡುತ್ತಾ ಇದ್ದೇವೋ ಎನ್ನುವಂತೆ ಆಗುತ್ತದೆ, ಅಷ್ಟೊಂದು ಜನರು ತುಂಬಿಕೊಂಡಿರುತ್ತಾರೆ. ಇದ್ದವರಲ್ಲಿ ಯಾರು ಇದ್ದಾರೆ? ಎಲ್ಲಿಗೆ ಬಂದಿದ್ದಾರೆ? ಏತಕ್ಕೋಸ್ಕರವಾಗಿ ಬಂದಿದ್ದಾರೆ? ಯಾರನ್ನು ಭೇಟಿಯಾಗುವುದಕ್ಕೆ ಬಂದಿದ್ದಾರೆ ಎನ್ನುವ ಬಗ್ಗೆ ಏನೂ ಗೊತ್ತಾಗುವುದಿಲ್ಲ. ಸೆಕ್ರೇಟರಿಯೇಟ್ ಈ ರೀತಿಯಾಗಿ ಇರುವುದು ಯೋಗ್ಯವಲ್ಲ, ಕ್ಷೇಮವೂ ಅಲ್ಲ ಎಂದು ನಾನು ಹೇಳ ಬಯಸುತ್ತೇನೆ. ಆ ಬಗ್ಗೆ ನಾನು ವಿಚಾರ ಮಾಡುತ್ತಾ ಇದ್ದೇನೆ It is loud thinking ಸಾಧ್ಯವಾದರೆ ಲೆಜಿಸ್ಲೇಚರ್ ಸೆಕ್ರೇಟರಿಯೇಟ್‌ನ್ನು ನಾವು ಇನ್ನೊಂದು ಕಡೆಗೆ ಸಾಗಿಸಬಹುದು. ಇದನ್ನು ಪೂರ್ತಿಯಾಗಿ ಸರಕಾರಿ ಕಚೇರಿಗಳಿಗೆ. ಸರಕಾರಿ ಸೆಕ್ರೇಟರಿಯೇಟ್‌ಗೆ ವಿನಾಸಲಾಗಿಟ್ಟುಕೊಂಡು ಪಾರ್ಲಿಮೆಂಟ್‌ನಲ್ಲಿ ಯಾವರೀತಿಯಿಂದ ಸೆಕ್ರೇಟರಿಯೇಟ್ ಇದೆಯೋ, ಆ ರೀತಿಯಿಂದ ಇನ್ನೊಂದು ಸೆಕ್ರೇಟರಿಯೇಟ್‌ನ್ನು ಸಮೀಪದಲ್ಲಿ ನಾವು ಕಟ್ಟಬಹುದೋ ಏನೋ ಎನ್ನುವ ಬಗ್ಗೆ ನಾನು ವಿಚಾರ ಮಾಡುತ್ತಾ ಇದ್ದೇನೆ. ಸನ್ಮಾನ್ಯ ಸಭಾಧ್ಯಕ್ಷರನ್ನು ಮತ್ತು ಸನ್ಮಾನ್ಯ ಮೇಲ್ಮನೆಯ ಸಭಾಪತಿಯವರನ್ನು ಈ ಕುರಿತು ಕೇಳದೆ, ಅವರ ಅನುಮತಿಯನ್ನು ಕೇಳಲಾರದೆ, ಅವರ ವಿಶ್ವಾಸಕ್ಕೆ ತೆಗೆದುಕೊಳ್ಳಲಾರದೆ ಇದನ್ನು ಮಾಡುವಂಥಾದ್ದು ನನ್ನ ಮನಸ್ಸಿನಲ್ಲಿ ಇಲ್ಲ. ಆದರೆ ಇವೊತ್ತಲ್ಲ ನಾಳೆ ಈ ಲೆಜಿಸ್ಲೇಚರ್‌ನ ಎರಡು ವಿಂಗ್‌ಗಳು ಮತ್ತು ಲೆಜಿಸ್ಲೇಚರ್ ಸೆಕ್ರೇಟರಿಯೇಟ್ ಕಟ್ಟಡದ ಹೊರಗಡೆಗೆ ಹೋದಷ್ಟು ಇಲ್ಲಿ ಕೆಲಸ ಮಾಡುವವರಿಗೆ ಕ್ಷೇಮ ಇರುತ್ತದೆ. ಕರ್ನಾಟಕದ ಆಡಳಿತ ನಡೆಸುವುದಕ್ಕೂ ಕೂಡ ಅನುಕೂಲವಾಗುತ್ತದೆ, ಮತ್ತು ಎರಡನೇ ಕಡೆ ಲೆಜಿಸ್ಲೇಚರ್‌ನಲ್ಲಿ ಕೆಲಸ ಮಾಡುವವರಿಗೂ ಕೂಡ ಅನುಕೂಲವಾಗುತ್ತದೆ. ಯಾವ ರೀತಿಯಾಗಿ ನಾವು ಡೆಲ್ಲಿಯಲ್ಲಿ ನೋಡುತ್ತಾ ಇದ್ದೇವೋ ಅದನ್ನು ಇಲ್ಲಿಯೂ ಮಾಡುವುದಕ್ಕೆ ಸಾಧ್ಯವಿದೆಯೇ ? ಹೇಗೆ ? ಎಂಬ ಬಗ್ಗೆ ನಾನು ವಿಚಾರ ಮಾಡುತ್ತಾ ಇದ್ದೇನೆ. ಹಿಂದೆಯೂ ಕೂಡ ಈ ವಿಚಾರ ಇತ್ತು, ಇಲ್ಲ ಎಂದು ನಾನು ಹೇಳುವುದಿಲ್ಲ. ಇವೊತ್ತು ಈ ಪರಿಣಾಮವಾಗಿ ಕಾರಿಡಾರ್‌ನಲ್ಲಿ ತಿರುಗಾಡತಕ್ಕಂಥ ಜನರು ವಿಪರೀತವಾಗಿದ್ದಾರೆ. ಅದನ್ನು ನಾವು ರೆಗ್ಯೂಲೇಟ್ ಮಾಡದೇ ಹೋದರೆ ಒಳಗೆ ಕುಳಿತಿರತಕ್ಕಂಥವರು ಹೊರಗೆ ಇರುತ್ತಾರೆ, ಹೊರಗೆ ಇರುವಂಥವರು ಒಳಗೆ ಇರುತ್ತಾರೆ. ಯಾರು ಎಲ್ಲಿ ಇದ್ದಾರೆ ಎಂದು ಗೊತ್ತಾಗುವುದಿಲ್ಲ. ಇದನ್ನು ರೆಗ್ಯೂಲೇಟ್ ಮಾಡುತ್ತಾ ಇದ್ದೇವೆ ಎನ್ನುವುದನ್ನು ತಮಗೆ ತಿಳಿಸೋಣ ಎಂದು ಈ ವಿಚಾರವನ್ನು ಹೇಳಿದ್ದೇನೆ. ಇನ್ನು ಮುಂದೆ ಸೆಕ್ರೇಟರಿಯೇಟ್‌ನಲ್ಲಿ ಕೆಲಸ ಮಾಡುವಂಥ ಪ್ರತಿಯೊಬ್ಬರಿಗೂ ಬ್ಯಾಡ್ಜ್‌ಗಳನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಈ ಬಗ್ಗೆ ನಮ್ಮ ಚೀಫ್ ಸೆಕ್ರೇಟರಿಯವರಿಗೆ ಹೇಳಿದ್ದೇನೆ ಎಲ್ಲಾ ತಯಾರಿ ನಡೆಯುತ್ತಾ ಇದೆ. ಯಾರು ಇಲ್ಲಿ ಕೆಲಸ ಮಾಡುತ್ತಾರೋ ಅವರ ಫೋಟೋ ಇದ್ದ ಪ್ಲಾಸ್ಟಿಕ್ ಬ್ಯಾಡ್ಜ್‌ನ್ನು ಹಚ್ಚಿಕೊಂಡಿದ್ದರೆ ಮಾತ್ರ ಅವರಿಗೆ ಒಳಗೆ ಪ್ರವೇಶ ಇದೆ, ಇಲ್ಲದಿದ್ದರೆ ಪ್ರವೇಶ ಇಲ್ಲ ಎನ್ನುವಂಥ ಒಂದು ವ್ಯವಸ್ಥೆಯನ್ನು ಮಾಡುತ್ತಾ ಇದ್ದೇವೆ. ಇವೊತ್ತು ಒಳಗಡೆ ಯಾರು ಬೇಕಾದರೂ ಬರಬಹುದು. ಎಲ್ಲರಿಗೂ ಒಳಗಡೆ ಬರುವುದಕ್ಕೆ ಸಾಧ್ಯವಿದೆ. ತಾವೆಲ್ಲರೂ ಸದಸ್ಯರಿದ್ದೀರಿ, ಜನರ ಪ್ರತಿನಿಧಿಗಳಿದ್ದೀರಿ, ತಮ್ಮ ಮೇಲೆ ಈ ರಿಸ್ಟ್ರಿಕ್ಷನ್, ಕಟ್ಟಪ್ಪಣೆ ಹಾಕಬೇಕೆನ್ನುವಂಥ ದೃಷ್ಟಿಯಿಂದ ಈ ಕ್ರಮ ಅಲ್ಲ. ಆದರೆ ಜನರು ಸಿಕ್ಕಾಪಟ್ಟೆ ಒಳಗೆ ಏನು

ಬರುತ್ತಾ ಇದ್ದಾರೆ ಹೋಗುತ್ತಾ ಇದ್ದಾರೆ. ಅದನ್ನು ಬಹಳಮಟ್ಟಿಗೆ ನಾವು ನಿಲ್ಲಿಸಬೇಕಾದ ಅವಶ್ಯಕತೆ ಇದೆ. ಹಾಗೆಯೇ ಇಲ್ಲಿ ಒಂದು ಕ್ಯಾಂಟೀನ್ ಇದೆ. ಅದು ಎಲ್ಲಿದೆ ಎಂದು ನಾನು ನೋಡಿಲ್ಲ. ಅದು ಒಳಗೆ ಇದೆಯೋ ಹೊರಗೆ ಇದೆಯೋ ಗೊತ್ತಿಲ್ಲ ವಿಧಾನಸೌಧದಲ್ಲಿ ಯಾರಿಗೆ ಕೇಳಿದರೂ ಕಾಫಿಗೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಕಚೇರಿಗೆ ಬಂದು ಅರ್ಧಗಂಟೆ, ಮುಕ್ಕಾಲು ಗಂಟೆ ಆಗುವಷ್ಟರಲ್ಲಿಯೇ ಕಾಫಿಗೆ ಹೋಗುತ್ತಾರೆ. ಕಾಫಿಗೆ ಎಂದು ಹೋದವರು ಮತ್ತೆ ಕಚೇರಿಗೆ ಬರುವುದು ಅರ್ಧ ಮುಕ್ಕಾಲು ಗಂಟೆಯ ಬಳಿಕವೇ. ಇದಕ್ಕಾಗಿ ಕ್ಯಾಂಟೀನ್‌ನ್ನು ಮಧ್ಯಾಹ್ನದ ಊಟದ ವೇಳೆಗೆ ಮಾತ್ರ ತೆರೆದಿಟ್ಟು, ಉಳಿದ ವೇಳೆಯಲ್ಲಿ ಮುಚ್ಚಿಡಬೇಕು ಎನ್ನುವ ಒಂದು ಆದೇಶವನ್ನು ಕೊಡುವವನಿದ್ದೇನೆ. ಅದನ್ನು ಸ್ಪಷ್ಟವಾಗಿ ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ. ಅದರ ಬಗ್ಗೆ ದೀರ್ಘವಾಗಿ ಸಂಬಂಧಪಟ್ಟವರು ವರ್ಕ್‌ಔಟ್ ಮಾಡುತ್ತಾ ಇದ್ದಾರೆ. ಆ ರೀತಿಯಾಗಿ ಮಾಡಿ ಎಲ್ಲರೂ ಹತ್ತೂವರೆ ಗಂಟೆಗೆ ಬಂದವರು ಐದೂವರೆ ಗಂಟೆಯವರೆಗೆ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತಿದ್ದು ಕೆಲಸ ಮಾಡಬೇಕು ಊಟದ ವೇಳೆಯಲ್ಲಿ ಮಾತ್ರ ಕ್ಯಾಂಟೀನ್‌ಗೆ ಹೋಗಬೇಕು. ಈ ಬಗ್ಗೆ ಒಂದು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇದು ಆಡಳಿತದ ಸುದ್ದಿ. ಆಡಳಿತದಲ್ಲಿ ಬಿಗಿಯನ್ನು ತರುವುದಕ್ಕಾಗಿ ೬ ತಿಂಗಳಲ್ಲಿ ಮಾಡಿರುವಂತಹ ಕೆಲವು ವಿಚಾರಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಇನ್ನು ರಾಜ್ಯದ ಆರ್ಥಿಕ ವ್ಯವಸ್ಥೆ ಸುಧಾರಿಸುವುದಕ್ಕೆ ಏನು ಮಾಡಿದ್ದೇನೆಂಬುದನ್ನು ಹೇಳುತ್ತೇನೆ. ಒಂದು ಮಾತನ್ನು ನಾನು ಸಮಾಧಾನದಿಂದ ಹೇಳಬೇಕು. ಹಿಂದಿನ ಸರ್ಕಾರಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನೇ ಒಂದು ಬಂಡವಾಳ ಮಾಡಿಕೊಂಡು ನಾನು ಹೊಗಳಿಕೊಳ್ಳುವಂಥದ್ದು ನನ್ನದೇನಿಲ್ಲ. ಆದರೆ ೬ ತಿಂಗಳ ಹಿಂದೆ ಅಧಿಕಾರಕ್ಕೆ ಬಂದಮೇಲೆ ಧೈರ್ಯದಿಂದ ಹೇಳುತ್ತಿದ್ದೇನೆ. without any fear of contr-adiction, ಒಂದು ಬಿಲ್ಲೂ ಚೆಕ್ಕೂ ಬೌನ್ಸಾಗಿಲ್ಲ. ಯಾವ್ಯಾವ ಚೆಕ್ ಕೊಟ್ಟಿದ್ದೇವೋ ಮತ್ತು ಬಿಲ್ ಕೊಟ್ಟಿದ್ದೇವೋ ಅವೆಲ್ಲವನ್ನೂ ಬಹಳ ಮಟ್ಟಿಗೆ ಪೇಮೆಂಟ್ ಮಾಡಿದ್ದೇವೆ. ಹಣಕಾಸಿನ ಮಂತ್ರಿಗಳು ಸಾಕಷ್ಟು ಪ್ರಮಾಣದಲ್ಲಿ ಬಜೆಟ್‌ನಲ್ಲಿ ಎಲ್ಲಾ ಬಾಬ್ತಿಗೂ ಹಣ ಇಟ್ಟಿದ್ದಾರೆ, ಇಂಥ ಹಣಕಾಸಿನ ಕಷ್ಟಪರಿಸ್ಥಿತಿಯಲ್ಲೂ ಚೆಕ್‌ಗಳು ಯಾವುವೂ ಬೌನ್ಸಾಗದಂತೆ ನಡೆಸಿಕೊಂಡು ಹೋಗುತ್ತಿದ್ದಾರೆ. ಅನಂತರ ಯೋಜನೇತರ ಖರ್ಚುಗಳು ಏನಿವೆ ಅವನ್ನು ಬಹಳಮಟ್ಟಿಗೆ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದೇ ರೀತಿ ಸಿಬ್ಬಂದಿಯಲ್ಲಿ ಬಹಳಮಟ್ಟಿಗೆ ಸರ್ಪ್ಲಸ್ ಎಂದು ಎಲ್ಲಿ ಕಂಡುಬರುತ್ತಿದೆಯೋ ಅವನ್ನು ಕಡಿಮೆ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇನೆ. ಅಧಿಕಾರಿಗಳು ಕೂಡ ತಮ್ಮ ಡಿಪಾರ್ಟ್‌ಮೆಂಟ್‌ಗಳಲ್ಲಿ ಎಲ್ಲೆಲ್ಲಿ ಕಡಿತ ಮಾಡಬಹುದು ಎಂದು ತೋರಿಸಲು ಹೇಳಿದ್ದೇನೆ. ಅದಕ್ಕಾಗಿ ಇವತ್ತು ಆಡಳಿತದ ಮೇಲೆ ಏನು ಬೃಹದಾಕಾರವಾಗಿ ಖರ್ಚಾಗುತ್ತಿದೆ ಅವನ್ನು ಸಾಕಷ್ಟು ಮಟ್ಟಿಗೆ ಇಳಿಸಬೇಕೆಂದು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿದ್ದೇವೆ. ನಮಗೆಲ್ಲಾ ಗೊತ್ತಿದ್ದ ಹಾಗೆ ಸೆಕೆಂಡ್ಸ್ ಮಾರುತ್ತಿದ್ದುದನ್ನು ಬಹಳ ಮಟ್ಟಿಗೆ ನಿಲ್ಲಿಸಿದ್ದೇವೆಂದು ಅನಿಸುತ್ತದೆ. ಎಷ್ಟುಮಟ್ಟಿಗೆ ನಿಲ್ಲಿಸಿದ್ದೇವೆಂದು ನೀವೇ ತಿಳಿಯಬೇಕು. ನನ್ನ ಮಟ್ಟಿಗೆ ಈ ಸೆಕೆಂಡ್ಸ್ ಮಾರಾಟ ಅದು ರೈಟ್ ರಾಯಲ್ ರೋಡ್‌ನಂತಾಗಿತ್ತು, ಕೇಳುವುದಕ್ಕೆ ಹೋದರೆ ನೀವ್ಯಾರೀ ಕೇಳುವುದಕ್ಕೆ ಎನ್ನುವಷ್ಟು ಆರ್ಭಟ ಇತ್ತು. ಅವರಿಗೆ ಅದನ್ನು ಬಹಳ ಮಟ್ಟಿಗೆ ಕಡಿವಾಣ ಹಾಕುವುದರಲ್ಲಿ ನಾವು ಸಮರ್ಥರಾಗಿದ್ದೇವೆಂದು ಹೇಳುತ್ತಿದ್ದೇನೆ. ಬಹಳ ಕಷ್ಟಗಳಿವೆ, ಇಲ್ಲ ಎಂದು ಹೇಳುವಹಾಗಿಲ್ಲ. ನಮ್ಮ ಎಕ್ಸೈಜ್ ಪಾಲಿಸಿ ಏನೆಂದು ನೀವು ಕೇಳಬಹುದು. ನಾನು ಇಷ್ಟೇ ಹೇಳುವುದು. ಸುಪ್ರೀಂ ಕೋರ್ಟಿನಲ್ಲಿ ಈ ಪ್ರಶ್ನೆ ಇತ್ಯರ್ಥವಾದ ಮೇಲೆ ನಮ್ಮ ನೀತಿಯನ್ನು ಸದನಕ್ಕೆ ತಿಳಿಸುತ್ತೇನೆ. ಈ ಮಧ್ಯದಲ್ಲಿ ಇಲ್ಲಿ ಟ್ಯಾಕ್ಸ್ ಕಟ್ಟಲಾರದೆ ಹೊರಗಡೆ ಹೋಗಿದೆ ಎಂದು ಇಲ್ಲೇ ೧ ರೂ ಟ್ಯಾಕ್ಸ್ ಕೊಟ್ಟು ಸುತ್ತಿಡುತ್ತಿದ್ದ ಐಎಂಎಲ್ ಮತ್ತು ಐಎಂಪಿಎಫ್‌ಎಲ್‌ಗಳಿಗೆ ಸಾಕಷ್ಟು ಕಡಿವಾಣ ಹಾಕಿದ್ದೇವೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಎಕ್ಸೈಜ್ ಬಾಬಿನಿಂದ ಡಿಸೆಂಬರ್ ೮೮ಕ್ಕೆ ೧೭.೮೫ ಕೋಟಿ. ಆಮೇಲೆ ಡಿಸೆಂಬರ್ ಮೊದಲಿಗೆ ನಾನು ಅಧಿಕಾರ ತೆಗೆದುಕೊಂಡೆ. ಡಿಸೆಂಬರ್ ೮೯ಕ್ಕೆ ಅದು ೨೬.೪೪ ಕೋಟಿ ಅಂದರೆ ೮೮ ಡಿಸೆಂಬರ್‌ಗೆ ೧೭ ಕೋಟಿ ಇದ್ದುದು ಡಿಸೆಂಬರ್ ೮೯ಕ್ಕೆ ೨೬ ಕೋಟಿಗೆ ಏರಿದೆ. ಅಲ್ಲಿಂದ ಜನವರಿ ೧೯೮೯ಕ್ಕೆ ೩೪.೭೫ ಕೋಟಿ ಇತ್ತು ಜನವರಿ ೯೦ಕ್ಕೆ ೨೯.೫೦ ಕೋಟಿಗೆ ಬಂದಿದೆ.

೧೧.೪೫ ಎ.ಎಂ.

ಮಾರ್ಚ್ ತಿಂಗಳ ಬಗ್ಗೆ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಮಾರ್ಚಿಯಿಂದ ನಾವು ಶೇಖರಣೆ ಮಾಡಬೇಕಾಗುತ್ತದೆ. ಫೆಬ್ರವರಿ ೮೯ರಲ್ಲಿ ೩೨.೧೧ ಕೋಟಿ ರೂಪಾಯಿ ಇದ್ದರೆ, ಫೆಬ್ರವರಿ ೯೦ಕ್ಕೆ ೨೬ ಕೋಟಿ ರೂಪಾಯಿ ಇದು ಬರುವಂಥದ್ದು ನೋಡಿದರೆ ಬಹುಶಃ ಎಕ್ಸೈಜ್‌ನಲ್ಲಿ ಹತ್ತುಕೋಟಿಯನ್ನು

ತರುವುದಕ್ಕೆ ಯಾವ ರೀತಿ ಪ್ರಯತ್ನ ಮಾಡುತ್ತಿದ್ದೇವೆ ಅದರ ಫಲಿತಾಂಶವನ್ನು ಅಂಕಿ ಸಂಖ್ಯೆಗಳಿಂದ ನೋಡಿದರೆ ವ್ಯಕ್ತವಾಗುತ್ತದೆ. ಪ್ರೂಫ್ ಎಕ್ಸೈಜ್ ರೆವಿನ್ಯೂ ಎಷ್ಟು ಬಂದಿದೆ, ವರ್ಷ ವರ್ಷದ್ದು ತಮ್ಮ ಮುಂದೆ ಹೇಳುತ್ತಿದ್ದೇನೆ. ಏಕೆಂದರೆ ಯಾರ ಬಗ್ಗೆಯೂ ಹೇಳಲಾರದೆ ಒಂದು ಮಾತನ್ನು ಇಲ್ಲಿ ಹೇಳುತ್ತೇನೆ. ಈ ಎಕ್ಸೈಜ್‌ನಲ್ಲಿ ಸೋರಿಕೆ, ಬಹುಶಃ ಯಾವ ಡಿಪಾರ್ಟ್‌ಮೆಂಟ್‌ನಲ್ಲಿಯೂ ಇಷ್ಟು ದೊಡ್ಡ ಪ್ರಮಾಣದ ಸೋರಿಕೆ ಇರಲಿಲ್ಲ ಎಂದು ಹೇಳುತ್ತೇನೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಸೋರಿಕೆ ಹೋಗತಕ್ಕಂಥದ್ದು ಎಲ್ಲಿಯೂ ಇರಲಿಲ್ಲ ಎನ್ನುವಂಥದ್ದು ವ್ಯಕ್ತವಾಗುತ್ತದೆ. ಅದಕ್ಕೆ ಉದಾಹರಣೆಯನ್ನು ಕೊಡಬೇಕಾಗಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಡೆಲ್ಲಿಯಲ್ಲಿ ಇದ್ದಾಗ, ತಮ್ಮ ಪಕ್ಷದಲ್ಲಿ ಅನೇಕ ಜನ ಭಾಷಣ ಮಾಡುವಂಥದ್ದು ಪತ್ರಿಕೆಯಲ್ಲಿ ಬರುತ್ತಿತ್ತು. ಒಬ್ಬ ಪಾರ್ಟಿ ಒಂದು ಕೋಟಿ ರೂಪಾಯಿ ಟ್ಯಾಕ್ಸ್ ಇವೇಡ್ ಮಾಡುತ್ತಿದ್ದಾನೆ, ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ, ಈ ರೀತಿ ಅನೇಕ ಸಲ ಮಾತನಾಡುವಂಥದ್ದು ಪತ್ರಿಕೆಯಲ್ಲಿ ಬಂದಿದೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾವು ಏನು ಸಾಧಿಸಿದ್ದೇವೆ, ಇನ್ನು ಸಾಧಿಸಬೇಕು ಎಂದು ಹೇಳುತ್ತೇನೆ. ೮೪-೮೫ರಲ್ಲಿ ಎಕ್ಸೈಜ್ ಬಾಬಿನಿಂದ ಇನ್‌ಕಂ ೧೯೦ ಕೋಟಿ ರೂಪಾಯಿ, ಅದರಲ್ಲಿ ಲಕ್ಷವನ್ನು ನಾನು ಬಿಟ್ಟುಬಿಡುತ್ತೇನೆ. ೮೫-೮೬ರಲ್ಲಿ ೧೯೬ ಕೋಟಿ ರೂಪಾಯಿಗೆ ಏರಿದೆ. ಅದು ೩-೫ ಪರ್‌ಸೆಂಟ್. ೮೬-೮೭ರಲ್ಲಿ ೨೧೪ ಕೋಟಿ ರೂಪಾಯಿ, ೮೭-೮೮ರಲ್ಲಿ ೨೫೧ ಕೋಟಿ ರೂಪಾಯಿ, ೮೮-೮೯ರಲ್ಲಿ ೨೫೮ ಕೋಟಿ ರೂಪಾಯಿಗಳು, ೮೯-೯೦ರಲ್ಲಿ it jumped ೩೨೦ ಕೋಟಿ ರೂಪಾಯಿ. ಮತ್ತೆ ಇವೊತ್ತು ನನ್ನ ಅಧಿಕಾರದ ಅವಧಿಯಲ್ಲಿ ನೀವು ಲೆಕ್ಕ ಹಾಕಬೇಕು. ೧೯೯೦-೯೧ರಲ್ಲಿ ೩೬೦ Crores ೬೨ ಕೋಟಿ ಮೈನಸ್ ಆಗಿದೆ. Which we are losing because of prohibition of toddy. ಅದನ್ನು ನಾವು ಸೇರಿಸಿದರೆ ಬಹುಶಃ ೪೨೦ ಕೋಟಿ ರೂಪಾಯಿಗೆ ಹೋಗುತ್ತಿತ್ತು, ಎನ್ನತಕ್ಕಂಥದ್ದು ತಮಗೆ ಈ ಅಂಕಿ ಸಂಖ್ಯೆಗಳಿಂದ ಗೊತ್ತಾಗುತ್ತದೆ. ಆದರೆ ನಾನು ಏತಕ್ಕೆ ಇವನ್ನು ಹೇಳುತ್ತಿದ್ದೇನೆಂದರೆ ಎಷ್ಟು ದೊಡ್ಡ ಪ್ರಮಾಣದಲ್ಲಿ ಲೀಕೇಜ್ ಇತ್ತು, ಸೋರುತ್ತಿತ್ತು, ಪೈಪ್‌ನಲ್ಲಿ ಬರುತ್ತಿತ್ತು, ಆದರೆ ಹಾಗೆಯೇ ಟ್ರೆಜರಿಗೆ ಹೋಗುತ್ತಿರಲಿಲ್ಲ. ಬ್ರಾಂಚಸ್‌ನಲ್ಲಿ ಅದು ಹೋಗುತ್ತಿತ್ತು ಎನ್ನುವಂಥದ್ದು ಸ್ಪಷ್ಟವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ, ಅಲ್ಲಿಂದ ಈ ನಾಲ್ಕು ತಿಂಗಳ ಅವಧಿಯಲ್ಲಿ ನಾವು ಏನು ಸಾಧನೆ ಮಾಡಿದ್ದೇವೆ, ಅದರ ಸಂಕ್ಷಿಪ್ತ ಪರಿಚಯವನ್ನು ತಮಗೆ ನಾನು ನೀಡುತ್ತೇನೆ. ಸೇಂದಿ ಮಾರಾಟವನ್ನು ಪೂರ್ತಿಯಾಗಿ ಇಡೀ ಸ್ಟೇಟ್‌ನಲ್ಲಿ ನಾವು ಬಂದ್ ಮಾಡಿದ್ದೇವೆ, ಅದು ಒಂದನೇ ಜುಲೈನಿಂದ ಜಾರಿಗೆ ಬರುತ್ತದೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ನಾನು ಹೇಳಬೇಕಾಗುತ್ತದೆ. ಯಾವುದೇ ಒಂದು ಯೋಜನೆಯಿಂದ ಬಹಳಷ್ಟು ಜನರಿಗೆ ಅನುಕೂಲವಾದರೂ ಕೆಲವು ಜನರಿಗೆ ಅನಾನುಕೂಲವಾಗುತ್ತದೆ. ಅದು ಸ್ವಾಭಾವಿಕ. ಮತ್ತು ಈ ಒಂದು ನಮ್ಮ ಯೋಜನೆಯಿಂದ, ನಮ್ಮ ಘೋಷಣೆಯಿಂದ ಕರಾವಳಿ ಪ್ರದೇಶದಲ್ಲಿ ಇರುವಂಥ ಜನರಿಗೆ ಬಹಳ ಮಟ್ಟಿಗೆ ಅನಾನುಕೂಲವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಅವರಿಗೆ ಹೇಳುತ್ತೇನೆ, ಈ ಒಂದು ಸೇಂದಿ ಏನು ಇತ್ತು, ಅದು ಗುಲ್ಬರ್ಗಕ್ಕೆ ಹೋಗಬಹುದು, ರಾಯಚೂರಿಗೆ ಹೋಗಬಹುದು, ಬಿಜಾಪುರಕ್ಕೆ ಹೋಗಬಹುದು, ಧಾರವಾಡಕ್ಕೆ ಹೋಗಬಹುದು, ಚಿತ್ರದುರ್ಗಕ್ಕೆ ಹೋಗಬಹುದು, ಅಲ್ಲೆಲ್ಲಾ ನೋಡಿದರೆ ಸೇಂದಿ ಗಿಡಗಳೇ ಇಲ್ಲ, ಬಹಳ ಕಡಿಮೆ. ಸ್ವಾಭಾವಿಕವಾಗಿ ಸೇಂದಿ ಹೇಗೆ ಆಗುತ್ತದೆ ಎನ್ನುವುದನ್ನು ನಾವು ಲೆಕ್ಕ ಹಾಕಿದರೆ, ಟ್ಯಾಪರ್ ಸೇಂದಿಯನ್ನು ಇಳಿಸುತ್ತಾನೆ, ನೀರಾವನ್ನು ಇಳಿಸುತ್ತಾನೆ, ಫರ್‌ಮೆಂಟ್ ಆದಮೇಲೆ ಅದನ್ನು ನೀರಿನಲ್ಲಿ ಕಲಿಸಿ ಸೇಂದಿಯಾಗಿ ಮಾಡುತ್ತಾರೆ. It is food ಅಲ್ಲಿ ಗಿಡಗಳೇ ಇಲ್ಲ ಎಂದು ಹೇಳಿದರೆ ಸೇಂದಿ ಬರುವುದು ಎಲ್ಲಿಂದ? ಪ್ರಶ್ನೆ ಇರುವುದು ಇದು. ನಾನು ತಿದ್ದಿಕೊಳ್ಳುತ್ತೇನೆ. ಉಳಿಕೆ ಕಡೆ ಸೇಂದಿ ಹೇಗೆ ಅಂದರೆ ನೀರು +ಕ್ಲೋರಲ್ ಹೈಡ್ರೇಟ್ ಸೇರಿ ಹೋಗುತ್ತದೆ: ಈ ಎರಡೂ ಸೇಂದಿ ಹೊರತಾಗಿ ಅದರಲ್ಲಿ ನಿಜವಾದ ಸೇಂದಿ ಇರಲಿಲ್ಲ. ಅದರಿಂದ ಏನು ಆಗುತ್ತಿದೆ ಅಂದರೆ ಅದು ಸ್ಲೋಪಾಯಿಸನಿಂಗ್ ಕುಡಿದ ದಿವಸ ಸಾಯುವುದಿಲ್ಲ, ಕುಡಿಯುತ್ತಾ ಕುಡಿಯುತ್ತಾ ಸಾಯುತ್ತಾರೆ. ಈ ರೀತಿ ಸಾಯುವವರ ಸಂಖ್ಯೆ ಜಾಸ್ತಿ ಆಗುತ್ತದೆ. ಆದರೆ ನಮ್ಮ ಕರಾವಳಿಯಲ್ಲಿ ಈ ಪರಿಸ್ಥಿತಿ ಇಲ್ಲ. ಏಕೆಂದರೆ ಬಹಳಷ್ಟು ತೆಂಗಿನ ಮರಗಳು ಎಳೆನೀರಿನ ಮರಗಳು ಅಲ್ಲಿ ಇವೆ. ಅಲ್ಲಿ ನಿಜವಾದ ಸೇಂದಿಯನ್ನು ಮಾರುತ್ತಿದ್ದಾರೆ ಎಂದು ನನ್ನ ತಿಳುವಳಿಕೆಗೆ ಬಂದಂತಹ ವಿಚಾರ. ಆ ಜನರು ಇದೇ ಕಸಬನ್ನು ಮಾಡಿಕೊಂಡು ಜೀವಿಸುತ್ತಿದ್ದಾರೆ. ಸುಮಾರು ೧೦ ಸಾವಿರ ಕುಟುಂಬಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದರಿಂದ ಜೀವನ ಮಾಡುತ್ತಿದ್ದಾರೆ, ನಮ್ಮ ಗತಿ ಏನು ಎಂದು ಮೊನ್ನೆ ನಾನು ಮಂಗಳೂರಿನಲ್ಲಿ ಇದ್ದಾಗ ನನ್ನನ್ನು ಪ್ರಶ್ನಿಸಿದರು. ನಾನು ಏಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ನಾವು ಒಂದು ಯೋಜನೆಯನ್ನು ಕಾರ್ಯಗತ ಮಾಡುವ ಮುಂಚೆ ಯಾರಿಗೆ ಅನಾನುಕೂಲ ಆಗುತ್ತದೆ ಅವರಿಗೆ ಯಾವ ರೀತಿ ರೀ ಹ್ಯಾಬಿಲಿಟೇಷನ್ ಮಾಡಬೇಕು ಎಂಬುದನ್ನು ಯೋಚನೆ ಮಾಡಿ ಮಾಡಬೇಕು. ಅವರ

ವಸತಿ ಜೀವನಕ್ಕೆ ಹೆಚ್ಚು ಅನುಕೂಲ ಮಾಡಿಕೊಡಬೇಕು. ನಾನು ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ನಮ್ಮ ಅಧಿಕಾರಿಗಳಿಗೆ ಈಗಾಗಲೇ ಈ ಬಗ್ಗೆ ಕಾರ್ಯಕ್ರಮ ಮಾಡಬೇಕೆಂದು ಹೇಳಿದ್ದೇನೆ. ಅವರು ಮಾಡುತ್ತಿದ್ದಾರೆ. ಸಂಬಂಧಪಟ್ಟ ಆ ಭಾಗದ ಶಾಸಕರ ಜೊತೆ ಚರ್ಚೆ ಮಾಡಿ ಇದಕ್ಕೆ ಒಂದು ಒಳ್ಳೆಯ ಹಾದಿ, ಮಾರ್ಗ ಹುಡುಕಿ ಆ ಜನರಿಗೆ ಯಾವುದೇ ರೀತಿಯ ಅನಾನುಕೂಲ ಆಗದಂತೆ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಸುತ್ತೇನೆ ಅಲ್ಲಿಂದ ಇನ್ನೂ ಒಂದು ಸಾಧನೆ. ೨೭ ಪಟ್ಟಣಗಳಲ್ಲಿ ಕುಡಿಯುವ ನೀರಿನ ಬಗ್ಗೆ ವ್ಯವಸ್ಥೆ ನಮ್ಮಲ್ಲಿ ೧೭೫–೧೭೬ ಪಟ್ಟಣಗಳು ಇವೆ. ಮತ್ತು ಅನೇಕ ಪಟ್ಟಣಗಳಲ್ಲಿ ಕುಡಿಯುವ ನೀರಿಗೆ ಬಹಳ ಮಟ್ಟಿಗೆ ತಾಪತ್ರಯ ಇದೆ ಕಷ್ಟ ಇದೆ. ಅನೇಕ ಮಾನ್ಯ ಸದಸ್ಯರು ನನ್ನನ್ನು ಕೇಳುತ್ತಾರೆ. ಕುಡಿಯುವುದಕ್ಕೆ ನೀರು ಇಲ್ಲ ವ್ಯವಸ್ಥೆ ಮಾಡಿ, ಈಗ ತುರ್ತಾಗಿ ಮಾಡುವುದಕ್ಕೆ ಆಗದಿದ್ದರೆ ಬೋರ್‌ವೆಲ್ ಹಾಕಿ ನಮಗೆ ಐದು ಲಕ್ಷ ರೂಪಾಯಿ ಅಥವಾ ಹತ್ತು ಲಕ್ಷ ರೂಪಾಯಿಗಳನ್ನು ಕೊಡಿ ಎಂದು ಕೇಳುತ್ತಾರೆ. ಕುಡಿಯುವ ನೀರಿನ ವ್ಯವಸ್ಥೆ ಮಾಡಲಿಕ್ಕೆ ಆಗದೇ ಹೋದರೆ ಸರ್ಕಾರ ಇದ್ದು ಏನು ಲಾಭ ಎನ್ನುವ ವಾತಾವರಣ ಇದೆ. ಆದ್ದರಿಂದ ಇಂತಹ ಒಂದು ಹಣಕಾಸಿನ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿಯೂ ಕೂಡ ೨೭ ನಗರಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗೆ ಕಾರ್ಯಕ್ರಮವನ್ನು ಮಾಡಿದ್ದೇವೆ. ಅದಕ್ಕಾಗಿ ಸುಮಾರು ೧೦೦ ಕೋಟಿ ರೂಪಾಯಿಗಳು ಖರ್ಚು ಆಗುತ್ತದೆ: ಈ ೧೦೦ ಕೋಟಿ ರೂಪಾಯಿ ಕಾರ್ಯಕ್ರಮವನ್ನು ನಾವು ಈಗಾಗಲೇ ಘೋಷಣೆ ಮಾಡಿದ್ದೇವೆ. ಎಲ್ಲೆಲ್ಲಿ ವ್ಯವಸ್ಥೆ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಇಷ್ಟಕ್ಕೆ ನಮಗೆ ಸಮಾಧಾನ ಇಲ್ಲ. ಈಗಾಗಲೇ ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ. ಕನಿಷ್ಟ ೩೦–೪೦ ಪಟ್ಟಣಗಳಿಗೆ ಎಷ್ಟರಮಟ್ಟಿಗೆ ಈ ವರ್ಷದ ಬಜೆಟ್‌ನಲ್ಲಿ ಇನ್ನೂ ಹೆಚ್ಚಿನ ದುಡ್ಡು ಒದಗಿಸುವುದಕ್ಕೆ ಸಾಧ್ಯ ಇದೆಯೋ ಅದನ್ನು ಬಹಳ ಮಟ್ಟಿಗೆ ಒದಗಿಸಿ ಎಂದು ಹೇಳಿದ್ದೇನೆ. ಹುಡ್ಕೋದಿಂದ ಎಷ್ಟರಮಟ್ಟಿಗೆ ಸಹಾಯ ಬರುತ್ತದೆ, ಎಲ್.ಐ.ಸಿ.ಯಿಂದ ಎಷ್ಟು ಸಹಾಯ ಬರುತ್ತದೆ ಅದನ್ನು ಉಪಯೋಗ ಮಾಡಿಕೊಂಡು ಈ ರೀತಿ ಕ್ರಮೇಣವಾಗಿ ಎಲ್ಲಾ ಪಟ್ಟಣಗಳಿಗೆ ಸ್ಥಾಯಿಕವಾಗಿ ಅಂದರೆ ಪರ್ಮನೆಂಟ್ ಆಗಿ ವಾಟರ್ ಸಪ್ಲೈ ಯೋಜನೆಯನ್ನು ಕಾರ್ಯಗತ ಮಾಡಬೇಕು. ಅದೇ ರೀತಿ ಎಲ್ಲಾ ಹಳ್ಳಿಗಳಲ್ಲಿಯೂ ಕೂಡ ಈ ಯೋಜನೆ ಕಾರ್ಯಗತ ಮಾಡಬೇಕು. ಈ ಮಧ್ಯದಲ್ಲಿ ಯಾವಾಗ ಎಷ್ಟು ಸಲ ಎಸ್ಟಿಮೇಟ್ಸ್ ರಿವೈಜ್ ಆಗುತ್ತದೆಯೋ? ನಮ್ಮ ಇಂಜಿನಿಯರ್ಸ್ ಯಾವಾಗ ಮಾಡಿ ಮುಗಿಸುತ್ತಾರೋ? ಮಧ್ಯದಲ್ಲಿ ಏನು ಆಗುತ್ತದೆ ಅಂದರೆ ಗಡ್ಡಕ್ಕೆ ಬೆಂಕಿ ಹತ್ತಿದಾಗ ಬಾವಿ ತೋಡಲಿಕ್ಕೆ ನೀವು ಹೊರಟ ಹಾಗೆ ಆಗುತ್ತದೆ. ಈಗಾಗಲೇ ನಮ್ಮ ಹಣಕಾಸಿನ ಮಂತ್ರಿಗಳಿಗೆ ಹೇಳಿದ್ದೇನೆ. ಪಟ್ಟಣಗಳ ಕುಡಿಯುವ ನೀರಿನ ಯೋಜನೆಯ ಸಲುವಾಗಿ ಎರಡೂವರೆ ಕೋಟಿ ರೂಪಾಯಿಗಳನ್ನು ಇಡಬೇಕಾಗುತ್ತದೆ. ಇದಕ್ಕಾಗಿ ಹಣ ರಿಸರ್ವ್ ಮಾಡಿ ಇಯರ್ ಮಾರ್ಕ್ ಮಾಡಿ ಸ್ಪೆಷಲ್ ಆಗಿ ಇಡಿ ಎಂದು ಹೇಳಿದ್ದೇನೆ. ಎಲ್ಲೆಲ್ಲಿ ಕಷ್ಟ ಬರುತ್ತದೆ, ಅಲ್ಲಿನ ಪ್ರತಿನಿಧಿಗಳು ಬಂದು ಹೇಳಿದರೆ ಈ ರೀತಿ ಹಣ ಬಿಡುಗಡೆ ಮಾಡುವ ವ್ಯವಸ್ಥೆ ಮಾಡಬೇಕು, ಈಗಾಗಲೇ ನಾನು ಅವರ ಜೊತೆ ಮಾತನಾಡಿದ್ದೇನೆ. ಈ ವ್ಯವಸ್ಥೆ ಮಾಡುತ್ತೇನೆ. ಹಿಂದಿನ ಸರ್ಕಾರದಲ್ಲಿ ಎಲ್ಲಾ ರಿಕ್ರೂಟ್‌ಮೆಂಟ್‌ಗಳು ನಿಂತು ಹೋಗಿತ್ತು. ಸರ್ಕಾರಿ ಹುದ್ದೆಗಳನ್ನು ತುಂಬುವುದನ್ನು ಹಾಗೆಯೇ ಬಿಟ್ಟು ಬಿಟ್ಟರು. ನಾನೂ ಸಹ ಅನಾವಶ್ಯಕ ಹುದ್ದೆಗಳನ್ನು ತುಂಬಬೇಕು ಎಂದು ಹೇಳುವುದಿಲ್ಲ. ಆದರೆ ಇಲ್ಲಿ ಏನು ನಡೆಯುತ್ತಿದೆ. ಶಾಲೆಗಳು ಇವೆ, ಓದಿಸುವುದಕ್ಕೆ ಶಿಕ್ಷಕರು ಇಲ್ಲ, ದವಾಖಾನೆಗಳಲ್ಲಿ ರೋಗಿಗಳ ಚಿಕಿತ್ಸೆಗಳಿಗೆ ಅವರ ರೋಗ ತಪಾಸಣೆ ಮಾಡುವುದಕ್ಕೆ ಅದಕ್ಕೆ ಅಲ್ಲಿರುವಂತಹ ಡಾಕ್ಟರ್‌ಗಳು ಇಲ್ಲ. ಅದೇ ರೀತಿ ನರ್ಸ್‌ಗಳು ಇಲ್ಲ. ಅನೇಕ ಹಾಸ್ಪಿಟಲ್‌ಗಳಲ್ಲಿ ನರ್ಸ್‌ಗಳು ಸಾಕಷ್ಟು ಸಂಖ್ಯೆಯಲ್ಲಿಲ್ಲ, ಡಾಕ್ಟರ್‌ಗಳು ಇಲ್ಲ. ಪ್ರೈಮರಿ ಟೀಚರ್ಸ್ ಎಷ್ಟು ಆಗುತ್ತದೆಯೋ ಗೊತ್ತಿಲ್ಲ. ಐದು ಸಾವಿರ ಅಥವಾ ಆರು ಸಾವಿರವೋ ಗೊತ್ತಿಲ್ಲ. ಆದರೆ ನಮ್ಮ ಸ್ಕೇಲ್ ಪ್ರಕಾರ ಎಷ್ಟು ಪ್ರೈಮರಿ ಟೀಚರ್ಸ್ ಬೇಕಾಗುತ್ತಾರೆ ಅಷ್ಟು ಜನರನ್ನು ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ಈಗಾಗಲೆ ಹೇಳಿದ್ದೇನೆ. ಇನ್ನು ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಂತಹ ಹುದ್ದೆಗಳನ್ನು ಖಾಲಿ ಬಿಡಬಾರದೆಂದು ಮಾಡಿದ್ದೇವೆ. ಆದರೆ ಅನಾವಶ್ಯಕವಾಗಿ ಹುದ್ದೆಗಳನ್ನು ತುಂಬಲಿಕ್ಕೆ ನಾವು ಹೋಗುವುದಿಲ್ಲ. ಅದನ್ನು ಈಗಾಗಲೇ ಸರ್ಕಾರಕ್ಕೆ ಹೇಳಿದ್ದೇನೆ.

ಇನ್ನೊಂದು ವಿಚಾರ ಏನೆಂದರೆ ನಾನು ಬಂದಮೇಲೆ ಕಾವೇರಿ ಮತ್ತು ಕೃಷ್ಣ ಈ ನದಿ ನೀರಿನ ತಂಟೆ ಏನಿತ್ತೋ, ಅದರ ಬಗ್ಗೆ ಕ್ರಮ ಕೈಗೊಂಡಿದ್ದೇನೆ. ನದಿ ನೀರಿನ ಹಂಚಿಕೆ ಬಗ್ಗೆ ಇರತಕ್ಕ ವಿವಾದವನ್ನು ಒಳ್ಳೆಯ ವಾತಾವರಣದಲ್ಲಿ ಬಗೆಹರಿಸಬೇಕು. ಎಂದು ನಾನು ನಿರ್ಧರಿಸಿದ್ದೇನೆ. ಈ ವಿವಾದಗಳನ್ನು ನಮ್ಮ ನಮ್ಮಲ್ಲೇ ಬಗೆಹರಿಸಿಕೊಳ್ಳುವ ದೃಷ್ಟಿಯಿಂದ ನಾನು ಮೊದಲನೆಯಸಲ ತಮಿಳುನಾಡಿನ ಮುಖ್ಯಮಂತ್ರಿಗಳಾದ ಶ್ರೀ ಕರುಣಾನಿಧಿಯವರಿಗೆ ಸಂಪರ್ಕ ಬೆಳೆದು ಅವರಿಗೆ ಹೇಳಿದೆ. ಸುಮ್ಮಸುಮ್ಮನೆ ಟ್ರಿಬ್ಯುನಲ್ ಎಂದು ಕುಳಿತುಕೊಳ್ಳಬೇಡಿ. ಏನಾದರೂ ಮಾತನಾಡಿ, ನಾವು ನೀವು ಎದುರುಗಡೆ ಕುಳಿತುಕೊಂಡು ಮಾತನಾಡಿದರೆ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದೆಂದು ಹೇಳಿದೆ. ನಮಗೆ

ಇರತಕ್ಕ ಪ್ರದೇಶ ವೆಷ್ಟು ನಿಮಗೆ ಇರತಕ್ಕ ನೀರಾವರಿ ಪ್ರದೇಶ ಎಷ್ಟು ಎಲ್ಲವನ್ನು ನೋಡಿ, ಒಂದು ತೀರ್ಮಾನಕ್ಕೆ ಬರಬಹುದೆಂದು ಹೇಳಿದ್ದೆ. ಕೆ ಆರ್.ಎಸ್. ನಲ್ಲಿ ಎಷ್ಟು ನೀರಿದೆ ಎಂಬುದನ್ನು ನೋಡಿಕೊಂಡು ಒಂದು ಮಾತುಕತೆ ನಡೆಸೋಣವೆಂದು ಅವರಿಗೆ ತಿಳಿಸಿದ್ದೆ. ಅದು ತಮಿಳುನಾಡು ಆಗಿರಬಹುದು ನಾವು ಕರ್ನಾಟಕದವರು ಆಗಿರಬಹುದು. ಆದರೆ ನಾವೆಲ್ಲ ಒಂದೇ ದೇಶದಲ್ಲಿರತಕ್ಕ ಜನ ಆದ್ದರಿಂದ ಸಮಾಧಾನವಾಗಿ ನಾವು ಈ ಸಮಸ್ಯೆಯನ್ನು ಬಗೆಹರಿಸೋಣ ಮತ್ತೆ ನಾವು ಟ್ರಿಬ್ಯೂನಲ್, ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಹೋಗಬೇಕಾದ ಅವಶ್ಯಕತೆ ಇಲ್ಲವೆಂದು ತಿಳಿಸಿದೆ. ಅದಕ್ಕೆ ಅವರು ಒಪ್ಪಿಕೊಂಡರು. ಒಂದು ಸಲ ಬರುತ್ತೇನೆಂದು ಹೇಳಿದರು, ಆಗ ಸರ್ಕಾರಿ ನೌಕರರು ಸ್ಟ್ರೈಕ್ ಹೋಗಿದ್ದರಿಂದ ನಾನೇ ಬರಬೇಡಿ ಎಂದು ಹೇಳಿದ್ದೆ. ಎರಡನೆಯ ಸಲ ಒಂದು ತಾರೀಖನ್ನು ನಿಗಧಿ ಮಾಡಿದ್ದರು ಅಷ್ಟರಲ್ಲಿ ಕೇಂದ್ರ ಸರ್ಕಾರದವರು ಅವರಿಗೆ ಪತ್ರಬರೆದು ನೀವು ಅಲ್ಲಿಗೆ ಬಂದುಬಿಡಿ ನಾವು ಅದನ್ನು ಬಗೆಹರಿಸುತ್ತೇವೆಂದು ತಿಳಿಸಿದರು ಅವರು ನಾನು ಕರೆದಿರುವ ಸಭೆಯನ್ನು ಕ್ಯಾನ್ಸಲ್ ಮಾಡಿ ನಾವು ನೀವು ಎಲ್ಲರೂ ದೆಹಲಿಗೆ ಹೋಗೋಣವೆಂದು ತಿಳಿಸಿದರು. ಇದರಿಂದ ನಿಜವಾಗಿ ನನಗೆ ಬಹಳ ಬೇಸರವಾಯಿತು. ಏತಕ್ಕೆಂದರೆ, ನಾನಾಗಿಯೇ ಮುಂದೆ ಬಂದು ಕುಳಿತು ಒಂದು ಸಲ ಮಾತುಕತೆ ಮಾಡಿ ಅದೇನಾದರೂ ಸಫಲವಾಗದಿದ್ದರೆ ಅಲ್ಲಿಗೆ ಹೋಗೋಣ, ಎಂದು ನಾನು ಹೇಳಿದ್ದೆ. ಅವರು ಮೊದಲು ಇದಕ್ಕೆ ಒಪ್ಪಿಕೊಂಡಿದ್ದರು. ಆದರೆ ದುರಾದೃಷ್ಟವಶಾತ್ ಅವರಿಗೆ ಯಾವುದೋ ರಾಜಕೀಯ ಒತ್ತಡವಿರಬೇಕೆಂದು ನನಗನ್ನಿಸುತ್ತದೆ, ಅವರು ನೀವು ದೆಹಲಿಗೆ ಬನ್ನಿ ನಾವು, ನೀವು ಕುಳಿತು ಕೇಂದ್ರ-ಸರ್ಕಾರದ ಮಂತ್ರಿಯವರೊಂದಿಗೆ ಸಮಾಲೋಚನೆ ಮಾಡೋಣವೆಂಬ ಧೋರಣೆಯನ್ನು ಅವರು ತಳೆದರು. ಇವತ್ತು ಮಧ್ಯಾಹ್ನ ನಾನು ದೆಹಲಿಗೆ ಹೋಗುತ್ತಿದ್ದೇನೆ. ಅಲ್ಲಿ ನಾನು ಚರ್ಚೆ ಮಾಡುತ್ತೇನೆ ಅಲ್ಲಿಂದ ಬಂದ ನಂತರ ಆದರ ಪರಿಣಾಮ ಏನೆಂಬುದನ್ನು ತಮಗೆಲ್ಲರಿಗೂ ತಿಳಿಸಲು ಪ್ರಯತ್ನ ಪಡುತ್ತೇನೆ. ಇನ್ನು ಕೃಷ್ಣ ನೀರಿನ ಹಂಚಿಕೆ ಬಗ್ಗೆಯೂ ಕೂಡ ನಾನು ಮೊದಲನೆಯ ಸಲ ಹೈದರಾಬಾದ್ ಮೂಲಕ ಗುಲ್ಬರ್ಗಕ್ಕೆ ಹೋದಾಗ ಆಂಧ್ರ ಪ್ರದೇಶದ ಮುಖ್ಯಮಂತ್ರಿಯವರಾದ ಡಾ. ಚೆನ್ನಾರೆಡ್ಡಿಯವರ ಜೊತೆಯಲ್ಲಿ ಮಾತನಾಡಿದೆ. ನಾವು ಏತಕ್ಕೆ ಎರಡು ಸಾವಿರ ಎ.ಡಿ. ಯವರಿಗೆ ಕಾಯಬೇಕು. ಎಷ್ಟು ನೀರು ಸರ್‌ಪ್ಲಸ್ ಇದೆ ಎಂಬುದನ್ನು ನಾವು ತಿಳಿದುಕೊಂಡು ಈಗಲೇ ಹಂಚಿಕೊಳ್ಳೋಣ. ಸಮುದ್ರಕ್ಕೆ ಹೋಗತಕ್ಕ ನೀರನ್ನು ತಡೆದು ನ್ಯಾಯವಾದ ರೀತಿಯಲ್ಲಿ ನಾವುಗಳು ಹಂಚಿಕೊಳ್ಳೋಣವೆಂದು ಹೇಳಿದೆ. ನಾವು ನೀವು ಕುಳಿತುಕೊಂಡರೆ ಸಮಾಧಾನ ಹಾದಿಯನ್ನು ಹುಡುಕಲು ಸಾಧ್ಯವಿದೆ ಏತಕ್ಕೆ ಈ ಜಗಳ ತಕರಾರು ಎಂದು ಹೇಳಿದಾಗ ಅವರು ಒಪ್ಪಿಕೊಂಡರು. ನಂತರ ಮಹಾರಾಷ್ಟ್ರದ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡಿದೆ. ಏತಕ್ಕೆ ನಾವು ಕೇಂದ್ರಕ್ಕೆ ಹೋಗಬೇಕು. ನಾವು ನೀವು ಕುಳಿತು ಬಗೆಹರಿಸೋಣವೆಂದು ಕೇಳಿದಾಗ ಅವರು ಬಹಳ ಸಂತೋಷದಿಂದ ಒಪ್ಪಿಕೊಂಡರು. ಮೊನ್ನೆ ಒಂದು ಪತ್ರ ಅವರಿಂದ ಬಂದಿದೆ. ಡಾ. ಚೆನ್ನಾರೆಡ್ಡಿಯವರು ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಹಾಗು ನಾವು ತಿರುಪತಿಯಲ್ಲಿ ಇದೇ ತಿಂಗಳು ೨೨, ೨೩ನೇ ತಾರೀಖು ಸೇರಿ ಅಲ್ಲಿ ಚರ್ಚೆ ಮಾಡಿ, ಸಮಾಧಾನದಿಂದ ಒಂದು ತೀರ್ಮಾನಕ್ಕೆ ಬರೋಣವೆಂದು ಅವರೆಲ್ಲರೂ ಹೇಳಿದ್ದಾರೆ. ಅಲ್ಲಿ ವಾತಾವರಣ ಚೆನ್ನಾಗಿರುತ್ತದೆ, ಆದ್ದರಿಂದ ನಾವುಗಳು ಅಲ್ಲಿ ಸೇರಿ ಚರ್ಚೆ ಮಾಡಿ ಎಂದು ಸಮಾಧಾನಕರವಾದ ಹಾದಿಯನ್ನು ಕಂಡು ಹಿಡಿಯಲು ಸಾಧ್ಯವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನೊಂದು ಸಾಧನೆ ಬಹಳ ಅಭಿಮಾನದಿಂದ ನಾನು ಹೇಳಬೇಕು ಅಂದರೆ ಹೈದರಾಬಾದ ಕರ್ನಾಟಕ ಏರಿಯಾದ ಅಭಿವೃದ್ಧಿ ಪ್ರಶ್ನೆ. ಇದು ಕರ್ನಾಟಕ ಏಕೀಕರಣವಾದಂದಿನಿಂದ ನಾವು ಇಲ್ಲಿಯುವರೆಗೆ ಮಾಡಿದ್ದುದು ಲಿಪ್ ಸರ್ವೀಸ್. ಅಲ್ಲಿ ಬಹಳ ಹಿಂದುಳಿದಿದ್ದಾರೆ. ಏನಾದರೂ ಮಾಡಬೇಕು ಅವರಿಗೆ ಬಹಳ ಹಿಂದುಳಿದಂಥ ಪ್ರದೇಶ. ಓದಲಿಕ್ಕೆ ಬರುವುದಿಲ್ಲ, ಬರೆಯುವುದಕ್ಕೆ ಬರುವುದಿಲ್ಲ. ನಿರಕ್ಷರಿದ್ದಾರೆ ಉದ್ಯೋಗವಿಲ್ಲ, ಮತ್ತೊಂದು ಇಲ್ಲ, ಔಷಧಿ ಇಲ್ಲ, ಒಳ್ಳೆಯ ರೋಡ್ಸ್ ಇಲ್ಲ ಎಂದು ಹೇಳಿದ್ದೇ ಹೇಳಿದ್ದು ಆದರೆ ಮಾಡಿದ್ದುದು ಏನೂ ಇಲ್ಲ. ಇವತ್ತು ನನಗೆ ಒಂದು ಸಮಾಧಾನ ದೆ ಮೊದಲನೆಯ ಸಲ ಹೈದರಾಬಾದ್ ಕರ್ನಾಟಕ ಕ್ಷೇತ್ರದ ಅಭಿವೃದ್ಧಿಗಾಗಿ ಯೋಜನೆಯಲ್ಲಿ ಒಂದು ಮೊತ್ತವನ್ನು ಇಯರ್ ಮಾರ್ಕ್‌ಆಗಿ ಇಟ್ಟಿದ್ದೇವೆ. ೪೦ ಕೋಟಿ ರೂಪಾಯಿಯನ್ನು ಯೋಜನಾ ಆಯೋಗದ ಮಂಜೂರಾತಿ ಪಡೆದು ಬಹುಶ: ಕರ್ನಾಟಕದ ಇತಿಹಾಸದಲ್ಲೇ ಮೊದಲನೇ ಸಲ ಈ ಕ್ಷೇತ್ರದ ಅಭಿವೃದ್ಧಿಗಾಗಿ ಹಣ ಇಟ್ಟಿದ್ದೇವೆ. ಆ ಕ್ಷೇತ್ರದ ಅಭಿವೃದ್ಧಿ ಆಗಬೇಕು ಎಂದು ತಾವೆಲ್ಲಾ ಒಪ್ಪಿಕೊಂಡಿದ್ದೀರಿ ೪೦ ಕೋಟಿ ರೂಪಾಯಿ ೧೯೯೦-೯೧ರಲ್ಲಿ ಖರ್ಚಾಗಬೇಕು ಒಂದು ವರ್ಷದಲ್ಲಿ ೪೦ ಕೋಟಿ ರೂಪಾಯಿ ಖರ್ಚಾಗಬೇಕು ಅಂದರೆ ಕನಿಷ್ಟ ೧೦೦ ಅಲ್ಲ ೧೨೦ ಕೋಟಿ ರೂಪಾಯಿಯ ಒಂದು

ಕಾರ್ಯಕ್ರಮ ಮಾಡಿಕೊಳ್ಳಬೇಕು. ಈ ೯೦ ಕೋಟಿ Over and above the budget provision ನಾರ್ಮಲ್ ಬಜೆಟ್ ಇದೆಯಲ್ಲ ಅದನ್ನು ಬಿಟ್ಟು ಇದಕ್ಕಾಗಿಯೇ ಪ್ರತ್ಯೇಕವಾದಂಥ ೪೦ ಕೋಟಿ ರೂಪಾಯಿ ಇಡಲಾಗಿದೆ. ನನಗೆ ಸಮಾಧಾನ ಏನೆಂದರೆ ನಾನು ಆ ಭಾಗದಿಂದ ಬರುತ್ತಾ ಇದ್ದೇನೆ ಅದಕ್ಕಾಗಿ ನನಗೆ ಸಮಾಧಾನ ಬಂದಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮತ್ತು ಹಿಂದುಳಿದಂಥ ಪ್ರದೇಶದ ಅಭಿವೃದ್ಧಿ ಮಾಡುವಂಥ ಜವಾಬ್ದಾರಿ ಎಲ್ಲರದ್ದೂ ಇದೆ ನನ್ನದೂ ಇದೆ. ಆ ಒಂದು ಜವಾಬ್ದಾರಿ ದೃಷ್ಟಿಯಿಂದ ಕೂಡ ನನಗೆ ಸಮಾಧಾನ ಬಂದಿದೆ. ಇನ್ನು ಒಂದು ವಿಚಾರ. ಅನೇಕ ಜನ ಮಾನ್ಯ ಸದಸ್ಯರು ಬಳ್ಳಾರಿಯವರು ನಮ್ಮ ಗತಿ ಏನು? ಹೈದರಾಬಾದ್ ಕರ್ನಾಟಕ ಏರಿಯಾದಿಂದ ಬಂದವರು ನೀವೆಲ್ಲರೂ ಇಲ್ಲಿದ್ದೀರಿ. ಇಲ್ಲಿಯವರೆಗೆ ಹೇಳಿಕೊಂಡು ಬರುತ್ತಾ ಇದ್ದೀರಿ ನಮ್ಮದು ಕೈಬಿಟ್ಟಿರಿ ಎನ್ನುವಂಥ ಪ್ರಶ್ನೆ ಉದ್ಭವವಾಗಿದೆ. ಇವತ್ತು ನಾನು ಇಷ್ಟೇ ಹೇಳುವಂಥಾದ್ದು ಹೈದರಾಬಾದ್ ಕರ್ನಾಟಕ ಭಾಗದ ಜನ ಬಡವರು ಇರಬಹುದು, ಹಿಂದುಳಿದವರು ಇರಬಹುದು, ಮತ್ತು ಅಲ್ಲಿ ಹೆಚ್ಚು ಅನುಕೂಲತೆಗಳು ಇರಲಿಕ್ಕಿಲ್ಲ, ಆದರೆ ಅಲ್ಲಿನ ಜನಗಳು ವಿಶಾಲ ಹೃದಯಿಗಳಿದ್ದಾರೆ ಎನ್ನುವಂಥ ಮಾತನ್ನು ಬಳ್ಳಾರಿಯ ನನ್ನ ಸ್ನೇಹಿತರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದುವೇಳೆ ನಾವು ಬರುತ್ತೇವೆ ಜೊತೆಯಲ್ಲಿ ಕರೆದುಕೊಂಡು ಹೋಗಿ ಅಂದಾಗ ಇಲ್ಲ ನೀವು ಬರುವುದು ಬೇಡ ನಾವೇ ಹೋಗುತ್ತೇವೆ ಎನ್ನುವಂಥ ಸಂಕುಚಿತ ಮನೋಭಾವನೆ ತಾಳುವುದಕ್ಕೆ ನಾನು ಇಲ್ಲ ಮತ್ತು ಅನೇಕ ಜನ ನಮ್ಮ ಮಾನ್ಯ ಸದಸ್ಯರೂ ಕೂಡ ಆ ಭಾವನೆ ತಾಳುವ ಹಾಗಿಲ್ಲ. ಅದಕ್ಕಾಗಿ ಅವರನ್ನೂ ನಾವು ಜೊತೆಗೆ ತೆಗೆದುಕೊಂಡು ಹೋಗುತ್ತೇವೆ ಆದರೆ ಒಂದೇ ಒಂದು ಪ್ರಶ್ನೆ ಇದೆ. ಹೈದರಾಬಾದ್ ಕರ್ನಾಟಕ ಏರಿಯಾದ ಅಭಿವೃದ್ಧಿಗೆ ಏನಾದರೂ ಬೋರ್ಡ್ ಮಾಡಬೇಕೇ, ಸ್ಟ್ಯಾಚುಟರಿ ಬೋರ್ಡ್ ಮಾಡಬೇಕೇ, ಅಡ್ವೈಸರಿ ಬೋರ್ಡ್ ಮಾಡಬೇಕೇ ಮಾನಿಟರಿ ಕಮಿಟಿ ಮಾಡಬೇಕೇ ಎನ್ನುವುದರ ಬಗ್ಗೆ ಎಲ್ಲರನ್ನೂ ಕರೆದು ಅವರ ಜೊತೆಯಲ್ಲಿ ಸಮಾಲೋಚನೆ ಮಾಡುತ್ತೇವೆ. ಅಲ್ಲಿ ಏನು ಅಭಿಪ್ರಾಯ ಮೂಡುತ್ತದೆ ಅದರ ಪ್ರಕಾರ ಹೋಗುತ್ತೇವೆ, ಆದರೆ ಒಂದೇ ಒಂದು ವಿಚಾರ ಹೇಳುತ್ತೇನೆ. ಅವರಿಗೆ ನಾನು ಅಂಕಿಸಂಖ್ಯೆ ಕೊಡುತ್ತೇನೆ, ಎಕನಾಮಿಕ್ ಬ್ಯಾಕ್‌ವರ್ಡ್‌ನೆಸ್ ಇಂಡಿಕೇಟರ್ ಎಂದು ಹಿಂದಕ್ಕೆ ಮಾಡಿದ್ದಾರೆ, ನನ್ನ ಕಾಲದ್ದು ಅಲ್ಲ, ಹಿಂದೆ ಏನು ಮಾಡಿದ್ದಾರೆ ತಜ್ಞರು ಮಾಡಿದ್ದಾರೆ. ಆ ಒಂದು ಏರಿಯಾದ ಬ್ಯಾಕ್‌ವರ್ಡ್‌ನೆಸ್ ದೂರ ಮಾಡುವುದಕ್ಕೆ ಏನು ಕಾರ್ಯಕ್ರಮ ಇದೆ ಅದಕ್ಕೆ ಬೇಕಾದಂಥ ದುಡ್ಡನ್ನು ಒದಗಿಸೋಣ. ಆದರೆ ೪೦ ಕೋಟಿ ಬಂದಿದೆಯಲ್ಲ ೧೦ ಕೋಟಿ ಎಲ್ಲರಿಗೂ ಹಂಚಿಬಿಡಿರಿ ಎನ್ನುವಂಥ ವಾದವನ್ನು ಅವರು ಮಾಡುವ ಹಾಗಿಲ್ಲ, ಆ ವಾದವನ್ನು ಯಾರೂ ಒಪ್ಪಿಕೊಳ್ಳುವ ಹಾಗೆ ಇಲ್ಲ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಯಾವನೋ ಒಬ್ಬ ಪೇಷೆಂಟ್ ಇದ್ದಾನೆ. ಕ್ಷಯರೋಗದಿಂದ ನರಳುತ್ತಾ ಇರುವಂಥ ಒಬ್ಬ ರೋಗಿ ಇದ್ದರೆ ಅವನಿಗೆ ಡಾಕ್ಟರ್ ಸ್ಟ್ರೆಪ್ಟೋಮೈಸಿನ್ ಕೊಡುತ್ತಾನೆ. ಅವನ ಮಗ್ಗುಲಲ್ಲಿ ಇದ್ದವನು ಅವನಿಗೆ ಸ್ಟ್ರೆಪ್ಟೋಮೈಸಿನ್ ಕೊಟ್ಟಿರಲ್ಲ ನನಗೂ ಕೊಡಿ ಎಂದು ಕೇಳಿದರೆ ಅದು ತಪ್ಪಾಗುತ್ತದೆ. ಏಕೆಂದರೆ, ರೋಗ ಯಾರಿಗೆ ಇದೆ ಅವರಿಗೆ ಆ ಔಷಧಿಯನ್ನು ಕೊಡಬೇಕೇ ಹೊರತು ರೋಗ ಇಲ್ಲದವನು ಸ್ಟ್ರೆಪ್ಟೋಮೈಸಿನ್ ಇಂಜಕ್ಷನ್ ಕೊಡಿ ಎಂದು ಕೇಳಲಿಕ್ಕೆ ಆಗುವುದಿಲ್ಲ. ಇವತ್ತು ಮೂರು ಡಿಸ್ಟ್ರಿಕ್ಟ್‌ನಲ್ಲಿ ಯಾವ ತರಹ ಬ್ಯಾಕ್‌ವರ್ಡ್‌ನೆಸ್ ಇದೆ, ಬಳ್ಳಾರಿಯಲ್ಲಿ ಯಾವ ತರಹ ಬ್ಯಾಕ್‌ವರ್ಡ್‌ನೆಸ್ ಹಿಂದುಳಿದಿರುವಿಕೆ ಇದೆಯೋ ಅದನ್ನು ಗಮನದಲ್ಲಿಟ್ಟುಕೊಂಡು ನಾವು ಅವರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇವೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಬಳ್ಳಾರಿಯ ನಮ್ಮ ಜನಪ್ರತಿನಿಧಿಗಳಾದ ಮಾನ್ಯ ಶಾಸಕರಿಗೆ ನಾನು ತಿಳಿಸುವುದಕ್ಕೆ ಇಷ್ಟಪಡುತ್ತಾ ಇದ್ದೇನೆ. ಏಕೆಂದರೆ ಬಹಳ ಜನರ ಮನಸ್ಸಿನಲ್ಲಿ ಒಂದು ಕಳವಳ ಇದೆ.

ಶ್ರೀ ಎಂ. ರಾಮಪ್ಪ — ಇಂಜಕ್ಷನ್ ನಮಗೆ ಮಾಡಿರಿ, ನಿಮಗೆ ಬೇಡ ಎಂದು ಹೇಳುವಂಥ ಪರಿಸ್ಥಿತಿಯಲ್ಲ. ಬ್ಯಾಕ್‌ವರ್ಡ್‌ನೆಸ್ ಎಂದು ಹೇಳಿದಾಗ ನಮ್ಮಲ್ಲಿ ಬ್ಯಾಕ್‌ವರ್ಡ್‌ನೆಸ್ ಬಹಳ ಇದೆ, ನೀವು ಅದನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ ಈಗ ಪರ್‌ಕ್ಯಾಪಿಟಾ ಇನ್‌ಕಂ ಅಂದರೆ ನಮ್ಮ ಪರ್‌ಕ್ಯಾಪಿಟಾ ಇನ್‌ಕಂ ನಮಗೆ ಕಾಣುತ್ತಾ ಇರುತ್ತದೆ. ಏಕೆಂದರೆ ನಮ್ಮಲ್ಲಿ ಮೈನ್ಸ್ ಇದೆ ಮೈನ್ಸ್ ಏರಿಯಾದಲ್ಲಿ ಬರುವ ಅಮೌಂಟ್‌ನಲ್ಲಿ ನೀವು ನಮಗೆ ಏನೂ ಕೊಡುತ್ತಾ ಇಲ್ಲ. ನಮ್ಮಿಂದ ಸಾಕಷ್ಟು ವಿದೇಶಿ ರಫ್ತಿನ ಹಣದಿಂದ ನಮಗೆ ಒಂದು ನಯಾಪೈಸೆಯೂ ಸಿಗುತ್ತಾ ಇಲ್ಲ. ನಮ್ಮ ಕ್ಷೇತ್ರದ ಅಭಿವೃದ್ಧಿ ಯಾಗಬೇಕು. ಪರ್ ಕ್ಯಾಪಿಟಾ ಇನ್‌ಕಂ ಮಾತ್ರ ತೋರಿಸುತ್ತೀರಿ, ಡಾಲರ್ಸ್ ಬೇಕಾದಾಗ, ನಮ್ಮ ಮೈನ್ಸ್ ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರಿ. ನಮ್ಮ ಕಡೆ ಒಂದು ರೋಡು ಕೂಡ ಮಾಡಿಸುತ್ತಿಲ್ಲ ನಮ್ಮ ಕಡೆ ಜನಜೀವನ ಬಹಳ ಅಧ್ವಾನದ ಸ್ಥಿತಿಯಲ್ಲಿದೆ. ನಾವು ಇಂಜಕ್ಷನ್ ಕೊಡಿ ಎಂದು ಕೇಳುವುದಿಲ್ಲ. ನಮಗೆ ಟಾನಿಕ್ ಕೊಡಿ ಸಾಕು.

ಅಧ್ಯಕ್ಷರು.— ಆಂಟಿ ಪೋಲಿಯೋ ಕೊಡಿ ಎಂದು ಹೇಳುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್.— ಎಲ್ಲಾ ಶಾಸಕರನ್ನು ಕರೆಯಿಸಿ ಚರ್ಚೆ ಮಾಡುತ್ತೇನೆ. ಯಾವ ಯಾವ ಜಿಲ್ಲೆಗಳ ಆರ್ಥಿಕ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ನಂಬರ್ ಹಾಕಿದ್ದಾರೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ್ದೇವೆನ್ನುವುದನ್ನು ಸಭೆಗೆ ತಿಳಿಸುತ್ತೇನೆ. ಅವರು ನಮ್ಮ ಜೊತೆಯಲ್ಲಿ ಬರುತ್ತೇವೆಂದಾಗ, ಕರೆದುಕೊಂಡು ಹೋಗುತ್ತೇವೆ. ಅಲ್ಲಿಯೂ ಆಗತಕ್ಕ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ.— ಕೋಲಾರ ಜಿಲ್ಲೆಯು ಪರ್ ಕ್ಯಾಪಿಟಾ ಇನ್‌ಕಂ ಕೊನೆಯಲ್ಲಿ ಇದೆ.

ಶ್ರೀ ಎಂ. ವೀರೇಂದ್ರ ಪಾಟೀಲ್.— ಇನ್ನು ಒಂದು ಯೋಜನೆ ಇತ್ತು, ಅದೂ ಕೂಡ ಕಾರ್ಯಗತವಾಗಿರಲಿಲ್ಲ. ಹರಿಜನ ಗಿರಿಜನ ವಿದ್ಯಾರ್ಥಿಗಳು ಹೆಚ್ಚಿಗೆ ಅಂಕ ಪಡೆದು ತೇರ್ಗಡೆಯಾದರೆ, ಗ್ರೂಪ್ ಎ ಮತ್ತು ಬಿ ವರ್ಗದಲ್ಲಿ ನೇರ ನೇಮಕ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ಹಿಂದಿನ ಸರ್ಕಾರ ಇದನ್ನು ಮಾಡಿದ್ದರೂ ಕಾರ್ಯರೂಪಕ್ಕೆ ಬಂದಿರಲಿಲ್ಲ. ಇವತ್ತು ಅದನ್ನು ಜಾರಿಗೆ ತಂದಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಇನ್ನೊಂದು ವಿಚಾರವನ್ನು ಕೂಡ ಸ್ಪಷ್ಟಪಡಿಸಬೇಕಾಗಿದೆ, ಯಾವ ಯಾವ ಹುದ್ದೆಗಳನ್ನು ತುಂಬಬಾರದೆಂದು ಕಟ್ಟುಪ್ಪಣೆಯಾಗಿದೆಯೋ ಅದರಿಂದ ಪರಿಶಿಷ್ಟ ಜಾತಿ ಮತ್ತು ವರ್ಗಗಳವರಿಗೆ ಬ್ಯಾಕ್‌ಲಾಗ್ ತುಂಬುವುದಕ್ಕೆ ತೊಂದರೆಯಾಗುತ್ತದೆ, ನಮ್ಮ ಪಾಲು ಸಿಗದೇ ಹೋಗುತ್ತದೆಂದು ಕೆಲವು ಮಾನ್ಯ ಸದಸ್ಯರುಗಳು ಕಾಲ್ ಅಟೆನ್‌ಷನ್ ಮೂಲಕ ಪ್ರಸ್ತಾಪ ಮಾಡಿದ್ದಾರೆ. ನಾನು ಸ್ಪಷ್ಟಪಡಿಸುತ್ತೇನೆ. ಇದು ಅದಕ್ಕೆ ಅನ್ವಯಿಸುವುದಿಲ್ಲ, ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಏನೊಂದು ಕೋಟಾ ಇದೆ ಅದನ್ನು ಬ್ಯಾಕ್‌ಲಾಗ್ ಮೂಲಕ ತುಂಬುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ, ಅದಕ್ಕೆ ಈ ನಿರ್ಬಂಧನೆ, ಕಟ್ಟುಪ್ಪಣೆ, ರಿಸ್ಟ್ರಿಕ್ಷನ್ ಬ್ಯಾನ್ ಅನ್ವಯವಾಗುವುದಿಲ್ಲ. ಬ್ಯಾಕ್‌ಲಾಗ್ ತುಂಬುವುದಕ್ಕೆ ಪೂರ್ತಿ ಪ್ರಯತ್ನ ಮಾಡುತ್ತೇವೆ. ಮುನಿಸಿಪಾಲಿಟಿಗಳಿಗೆ ಮತ್ತು ಕಾರ್ಪೊರೇಷನ್‌ಗಳಿಗೆ ಚುನಾವಣೆಗಳಾಗಿರಲಿಲ್ಲ ನಾವು ಅಧಿಕಾರಕ್ಕೆ ಬಂದಕೂಡಲೇ ಅವುಗಳಿಗೆ ಚುನಾವಣೆಗಳನ್ನು ಮಾಡುವಂಥ ನಿರ್ಣಯ ತೆಗೆದುಕೊಂಡೆವು. ದುರ್ದೈವ ಕೆಲವು ಕಾರಣಗಳಿಂದ ಯಾವ ದಿವಸ ಚುನಾವಣೆಯಾಗಬೇಕು, ಮತದಾನ ಆಗಬೇಕೆಂದು ಗೊತ್ತು ಮಾಡಿದ ದಿವಸವನ್ನು ಮುಂದಕ್ಕೆ ಹಾಕಬೇಕಾಗಿ ಬಂತು. ಅಂತಿಮವಾಗಿ ಇವತ್ತು ನಾನು ತಿಳಿಸುತ್ತಿದ್ದೇನೆ. ಯಾರು ೨೯ನೇ ಏಪ್ರಿಲ್ ೧೯೯೦ರಂದು ಇಡೀ ಕರ್ನಾಟಕ ರಾಜ್ಯದ ಎಲ್ಲಾ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳಿಗೆ ಚುನಾವಣೆಗಳಾಗುತ್ತವೆ. ಯಾರೂ ಸಂಶಯ ಪಡಬೇಕಾಗಿಲ್ಲ ಇದನ್ನು ಯಾರಿಂದಲೂ ಯಾವ ಕಾರಣದಿಂದಲೂ ಮುಂದೂಡುವುದಿಲ್ಲವೆಂದು ಸ್ಪಷ್ಟಪಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ಬೆಳಗಾವಿ ನಗರ ಸಭೆ ಬಗ್ಗೆ ಏನು ಹೇಳುತ್ತೀರಿ ಅಲ್ಲಿ ಗಂಭೀರವಾದ ಪರಿಸ್ಥಿತಿ ಇದೆ.

ಶ್ರೀ ವೀರೇಂದ್ರ ಪಾಟೀಲ್.— ಇಡೀ ರಾಜ್ಯದಲ್ಲಿ ಚುನಾವಣೆಗಳನ್ನು ಮಾಡುವಾಗ, ಬೆಳಗಾವಿ ನಗರ ಸಭೆಯ ಚುನಾವಣೆಯನ್ನು ಮುಂದೂಡುವುದಕ್ಕೆ ಆಗುವುದಿಲ್ಲ. ಇನ್ನೂ ಒಂದು ವಿಚಾರವನ್ನು ಇಲ್ಲಿ ಹೇಳುವುದಾದರೆ, ರಾಜ್ಯದಲ್ಲಿ ಕಾಲೇಜು ಶಿಕ್ಷಕರು ಏನಿದ್ದಾರೆ, ಅವರಿಗೆ ಯು.ಜಿ.ಸಿ. ಪೇ ಸ್ಕೇಲ್ ಕೊಡುವುದಕ್ಕೆ ಸರ್ಕಾರ ೩೧ನೇ ಮಾರ್ಚ್ ೧೯೯೦ರಂದು ಆಜ್ಞೆ ಮಾಡಲಾಗಿದೆ. ಇದರಿಂದ ೧೦.೫೭೭ ಜನ ಕಾಲೇಜು ಶಿಕ್ಷಕರಿಗೆ ಅನುಕೂಲವಾಗುತ್ತದೆ. ಇನ್ನೊಂದು ಮಾತನ್ನು ಸಂತೋಷದಿಂದ ಹೇಳುತ್ತೇನೆ. ರಾಜ್ಯದಲ್ಲಿ ಇಂಜಿನಿಯರಿಂಗ್ ಮತ್ತು ೨ನೇ ಟೆಕ್ನಿಕಲ್ ಕಾಲೇಜುಗಳಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ಏಯಿಡೆಡ್ ಕಾಲೇಜು ಶಿಕ್ಷಕರಿಗೆ ಎ.ಐ.ಸಿ.ಟಿ.ಯವರು ಗೊತ್ತುಮಾಡಿರುವ ಪೇ ಸ್ಕೇಲ್ ಕೊಡಲು ಆರ್ಡರ್ ಮಾಡಿದ್ದೇವೆ ಇನ್ನು ಒಂದೇ ಒಂದೇ ಉಳಿದಿರುವಂಥಾದ್ದು ಮೆಡಿಕಲ್ ಕಾಲೇಜು ಟೀಚರ್ಸ್ ಬಗ್ಗೆ, ಅದಕ್ಕೆ ಒಂದು ಸಣ್ಣ ಸಮಿತಿಯನ್ನು ನಾವುಮಾಡಿದ್ದೇವೆ.

SRI QUMARUL ISLAM.— Why don't you include polytechnics in this?

ಶ್ರೀ ವೀರೇಂದ್ರಪಾಟೀಲ್.— ನನಗೆ ಗೊತ್ತಿದ್ದ ಹಾಗೆ ಒಂದೇ ಒಂದು ಮೆಡಿಕಲ್ ಕಾಲೇಜು ಮಾತ್ರ ಇದೆ. ಅದರ ಬಗ್ಗೆ ಒಂದು ಕಮಿಟಿ ಮಾಡಿದ್ದೇವೆ. ಆ ಕಮಿಟಿಯ ರಿಪೋರ್ಟ್ ಬಂದ ಮೇಲೆ ಮುಂದೆ ಯೋಗ್ಯ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಇನ್ನೊಂದು ಸಾಧನೆಯ ಬಗ್ಗೆ ನಾನು ಸಮಾಧಾನದಿಂದ ಹೇಳಬೇಕಾಗಿದೆ. ತಮಗೆಲ್ಲರಿಗೂ ಗೊತ್ತಿದೆ. ನಮ್ಮ ರಾಷ್ಟ್ರದ ನಾಯಕರು, ಮಾಜೀ ಪ್ರಧಾನ ಮಂತ್ರಿಗಳಾದ ರಾಜೀವ್ ಗಾಂಧಿಯವರು ಒಂದು ಯೋಜನೆಯನ್ನು ಪ್ರಾರಂಭ ಮಾಡಿದರು. ನೆಹರೂ ರೋಜ್‌ಗಾರ್ ಯೋಜನೆ ಎಂದು ೧೯೮೯ ಅಕ್ಟೋಬರ್‌ನಲ್ಲಿ ಅದನ್ನು ಪ್ರಾರಂಭ ಮಾಡಿದ್ದಾರೆ. ಆ ಯೋಜನೆ ಕೆಳಗೆ ಪಟ್ಟಣದಲ್ಲಿರುವಂಥ ಅನೇಕ ಬಡವರಿಗೆ ಬಹಳ ರೀತಿಯ

ಅನುಕೂಲವಾಗುತ್ತದೆ. ಆ ಯೋಜನೆಯನ್ನು ನಾವು ಕಾರ್ಯಗತ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಅದಕ್ಕೆ ೧೯೮೯-೯೦ರಲ್ಲಿ ೩೮ ಕೋಟಿ ೩೯ ಲಕ್ಷ ರೂಪಾಯಿ ಒದಗಿಸಿದ್ದೇವೆ. ಅದರಿಂದ ಸುಮಾರು ೪೪.೪೨೨ ಬಡ ಕುಟುಂಬಗಳಿಗೆ ಅನುಕೂಲವಾಗುತ್ತದೆ. ಅದಕ್ಕೆ ಈ ಒಂದು ಯೋಜನೆ ಕಾರ್ಯಗತ ಮಾಡುವ ಸಲುವಾಗಿ ಈಗಾಗಲೇ ಸರ್ಕಾರದ ಆರ್ಡರನ್ನು ಮಾಡಿದ್ದೇವೆ. ಇದನ್ನು ಜಾರಿಗೆ ತರುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಮತ್ತು ಪಟ್ಟಣದಲ್ಲಿರುವಂಥ ಅನೇಕ ಬಡ ಕುಟುಂಬ ಗಳಿಗೆ ಇದರಿಂದ ಹೆಚ್ಚಿನ ಮಟ್ಟಕ್ಕೆ ಅನುಕೂಲವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿಂದ ಇನ್ನು ಒಂದೆರಡು ವಿಚಾರ ತಮ್ಮ ಮುಂದೆ ಹೇಳಬೇಕಾಗುತ್ತದೆ ಅರ್ಬನ್ ಲ್ಯಾಂಡ್ ಬಗ್ಗೆ ಹಿಂದಿನ ಸರ್ಕಾರಕ್ಕೆ ಬಹಳ ಮಟ್ಟಿಗೆ ಕೆಟ್ಟ ಹೆಸರು ಬರಲಿಕ್ಕೆ ಕಾರಣ ಎರಡು ಎಂದು ನನಗೆ ಅನ್ನಿಸುತ್ತದೆ. ತಮಗೆಲ್ಲಾ ಗೊತ್ತಿರುವ ಹಾಗೆ ಬೆಂಗಳೂರು ಬೃಹದಾಕಾರವಾಗಿ ಬೆಳೆಯುತ್ತಿದೆ. ಬೆಂಗಳೂರಿನಲ್ಲಿ ಭೂಮಿ ಗೋಲ್ಡ್ ಮೈನ್ ಇದ್ದ ಹಾಗೆ. ಅದಕ್ಕೆ ಏನು ಬೆಲೆ ಕಟ್ಟುವ ಹಾಗೆ ಇಲ್ಲ. ಇದರ ಉಪಯೋಗ ಇದರ ಶೋಷಣೆ, ಇದರ ವ್ಯವಹಾರ ಬಹಳ ರೀತಿಯಿಂದ ಈ ಹಿಂದೆ ನಡೆದಿದೆ. ದುರ್ದೈವ ಎಂದು ನಾವು ಹೇಳಬೇಕಾಗುತ್ತದೆ. ಬೆಂಗಳೂರಿನಲ್ಲಿ ಅನೇಕ ಕಟ್ಟಡಗಳು ಅಕ್ರಮವಾಗಿ ಬಂದಿವೆ. ಕೆಲವು ಅನಂತರ ಸಕ್ರಮವಾಗಿವೆ ಆ ಮಾತು ಬೇರೆ. ನಾನು ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ. ನ್ಯಾಷನಲ್ ಫ್ರಂಟ್ ಸರ್ಕಾರದವರು ಹಿಂದಿನ ಸರ್ಕಾರದ ಬಗ್ಗೆ ಇಷ್ಟೆಲ್ಲಾ ತನಿಖೆ ಮಾಡುತ್ತಿದ್ದಾರೆ. ಇಷ್ಟೆಲ್ಲಾ ಸಮಿತಿಗಳನ್ನು ಮಾಡುತ್ತಿದ್ದಾರೆ. ಇಷ್ಟೆಲ್ಲಾ ವಿಚಾರ ಮಾಡುತ್ತಿದ್ದಾರೆ, ಆದರೆ ವೀರೇಂದ್ರ ಪಾಟೀಲರು ಏತಕ್ಕೆ ಮಾಡುತ್ತಿಲ್ಲವೆಂದು ಬರೆದಿರುವುದನ್ನು ನಿನ್ನೆ ಒಂದು ಪತ್ರಿಕೆಯಲ್ಲಿ ನೋಡಿದೆ. ಬಹುಶಃ ಹಿಂದಿನ ಸರ್ಕಾರದಲ್ಲಿದ್ದಂತ ಮುಖ್ಯಮಂತ್ರಿಗಳವರು ಆಪ್ತ ಸ್ನೇಹಿತರು ಇರುವುದರಿಂದ, ಕಣ್ಣುಮುಚ್ಚಿಕೊಂಡು ಕುಳಿತಿದ್ದ ಹಾಗೆ ಕಾಣಿಸುತ್ತದೆ ಎಂದು ಕೆಲವರು ಬರೆಯುತ್ತಿದ್ದಾರೆ, ಕೆಲವರು ಹೇಳುತ್ತಾರೆ, ಕೆಲವರು ಪ್ರಚಾರ ಮಾಡುತ್ತಿದ್ದಾರೆ, ಕೆಲವರು ಕಿವಿಯಲ್ಲಿ ಗುಸುಗುಸು ಮಾತನಾಡುತ್ತಿದ್ದಾರೆ.

ಶ್ರೀ ಎಚ್. ಏಕಾಂತಯ್ಯ.— ನಿಮ್ಮ ಪಕ್ಷದವರೇ ಇರಬೇಕು.

ಶ್ರೀ ವೀರೇಂದ್ರ ಪಾಟೀಲ್.—ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾನು ಮೊದಲೇ ಅಧಿಕಾರಕ್ಕೆ ಬಂದಾಗ ಹೇಳಿದೆ, ನನಗೆ ವಿಚ್ ಹಂಟಿಂಗ್‌ನಲ್ಲಿ ವಿಶ್ವಾಸ ಇಲ್ಲ. ತಪ್ಪು ಇದ್ದರೆ ಕಾನೂನು ಪ್ರಕಾರ ಏನು ಆಗುತ್ತದೆ, The law will take its own course. ಸುಮ್ಮನೆ ಹಿಂದಿನವರ ಮುಖಕ್ಕೆ ಮಸಿ ಬಳಿಯಬೇಕು ಎನ್ನುವಂಥ ದೃಷ್ಟಿ ಅಥವಾ ಉದ್ದೇಶ ನನಗೂ ಇಲ್ಲ. ನಮ್ಮ ಪಕ್ಷದ್ದು ಇಲ್ಲ. ನಮ್ಮ ಯಾರದೂ ಆ ಉದ್ದೇಶ ಇಲ್ಲ. ಒಂದು ಮಾತು ಹೇಳುತ್ತೇನೆ ಈ ನಾಲ್ಕು ತಿಂಗಳುಗಳಿಂದ ಅನೇಕ ವಿಚಾರಗಳು ನನ್ನ ಗಮನಕ್ಕೆ ಏನು ಬಂದಿದೆ ಇದನ್ನು ನೋಡಿದರೆ ಬೆಂಗಳೂರಿನ ಭೂಮಿ ವ್ಯವಹಾರದಲ್ಲಿ ಸಾಕಷ್ಟು ದುರ್ವ್ಯವಹಾರವಾಗಿದೆ.

೧೨.೧೫ ಪಿ. ಎಂ.

ಉದಾಹರಣೆಗೆ ನಾನು ಹೇಳುತ್ತೇನೆ. "ಒಬ್ಬ ವ್ಯಕ್ತಿ ಈ ಸುಮಾರು ಎರಡೂವರೆ ಕೋಟಿ ರೂಪಾಯಿ ಖರ್ಚು ಮಾಡಿ ಹೋಟೆಲ್ ಮಾಡಬೇಕೆನ್ನುವ ದೃಷ್ಟಿಯಿಂದ ೮—೧೦ ಅಂತಸ್ತಿನ ಕಟ್ಟಡವನ್ನು ಕಟ್ಟಿದ ನಂತರ ಏನೋ ಲೈಸನ್ಸ್‌ಗೆಂದು ನಗರ ಸಭೆಯ ಹತ್ತಿರ ಹೋದ. ಆಗ ಅವರು ಇಲ್ಲಿ ಹೋಟೆಲ್ ಅನ್ನು ಹೇಗೆ ಕಟ್ಟಿದ್ದೀರಿ ಅದು ರೆಸಿಡೆನ್‌ಷಿಯಲ್ ಏರಿಯಾ ಇಲ್ಲಿ ಹೋಟೆಲ್ ಅನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಇಲ್ಲಿ ಕಮರ್ಷಿಯಲ್ ಆಕ್ಟಿವಿಟೀಸ್ ಮಾಡುವುದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಆಗ ಆತನು ಅವರ ಸಹವಾಸ ಬೇಡ ಎಂದು ಮೇಲೆ ಬಂದ, ವಿಧಾನ ಸೌಧಕ್ಕೆ ಬಂದ ಅಲ್ಲಿ ಅವರು ಇದು ರೆಸಿಡೆನ್‌ಷಿಯಲ್ ಏರಿಯಾ ಇಲ್ಲಿ ಹೋಟೆಲ್‌ಗೆ ಅಥವಾ ಕಮರ್ಷಿಯಲ್‌ಗೆಂದು ಲೈಸನ್ಸ್ ಕೊಡುವುದಕ್ಕೆ ಬರುವ ಹಾಗಿಲ್ಲ ಎಂದು ಹೇಳಿದರು. ಆ ಮನುಷ್ಯ ತುಂಬಾ ಪ್ರಭಾವಿ ವ್ಯಕ್ತಿ. ಅಡ್ಮಿನಿಸ್ಟ್ರೇಟರ್ ಅನ್ನು ಕರೆಸಿದ ಅರ್ಬನ್ ಡೆವಲಪ್‌ಮೆಂಟ್ ಸೆಕ್ರೆಟರಿಯವರನ್ನು ಕರೆಸಿದ. ಅವರ ಮೇಲಿನ ಮಂತ್ರಿಗಳಿಂದ "ನೋಡಿರಿ ಇದಕ್ಕೆ ಏನಾದರೂ ಹಾದಿ ಹುಡುಕಿರಿ. ಕಾನೂನು ಕಾಯಿದೆ ನೋಡಬೇಡಿ, ಈ ಕೆಲಸ ಮಾಡಬೇಕು ಇದಕ್ಕೊಂದು ಸೊಲ್ಯೂಷನ್ ತಂದುಕೊಡಿ" ಎಂದು ಹೇಳಿದರು. ಕಾನೂನು ಕಾಯಿದೆಯನ್ನು ನಾವೇ ಓದಿಕೊಂಡು ಅರ್ಥ ಮಾಡಿಕೊಳ್ಳುತ್ತೇವೆ ನೀವು ಇದಕ್ಕೆ ಒಂದು ದಾರಿ ಕಂಡುಹಿಡಿಯಿರಿ ಎಂದು ಹೇಳಿದರು, ಆಗ ಆ ಅಧಿಕಾರಿ ಹೇಳುತ್ತಾನೆ. ಇದಕ್ಕೆ ಒಂದೇ ಒಂದು ಹಾದಿ ಇದೆ. ಇದಕ್ಕೆ ಲೈಸನ್ಸ್ ಅನ್ನು ಕೊಡಲೇಬೇಕು ಎಂದರೆ ಇವತ್ತಿನವರೆಗೂ ಇದು ರೆಸಿಡೆನ್‌ಷಿಯಲ್ ಏರಿಯಾ ಎಂದು ಇದೆ ಇವರಿಗೆ ಲೈಸನ್ಸ್ ಅನ್ನು ಕೊಡಲೇಬೇಕೆಂದರೆ ಇದನ್ನು ಕಮರ್ಷಿಯಲ್ ಏರಿಯಾ ಎಂದು ಕನ್‌ವರ್ಟ್ ಮಾಡಬೇಕು. You have to convert this residential area

into Commercial area and then only it is possible for us to give the licence. Yes, convert it into a commercial area. Only to help one individual, the entire area was converted into commercial area from Risidential area. ಒಬ್ಬನಿಗೆ ಸಹಾಯ ಮಾಡಬೇಕೆಂದು ಇಡೀ ಏರಿಯಾವನ್ನು ಕಮಾರ್ಷಿಯಲ್ ಎಂದು ಬದಲಾವಣೆ ಮಾಡಿದರು.'' ಇನ್ನೊಂದು ಬಹಳ ತಮಾಷೆ ಅದನ್ನು ನಾನು ಹೇಳುತ್ತೇನೆ. ಬಿ.ಡಿ.ಎ. ಇತಿಹಾಸದಲ್ಲಿ ಇಂಥಾದ್ದು ಆಗಿದ್ದು. ಎಷ್ಟೋ ನನಗೆ ಗೊತ್ತಿಲ್ಲ. ಬಿ.ಡಿ.ಎ.ಯ ಸಭೆಯಲ್ಲಿ ಅಲ್ಲಿರುವಂತಹ ಛೇರ್ಮನ್‌ರವರು ಒಡವರಿಗೆ ಇಷ್ಟು ದಿವಸದ ಒಳಗೆ ಹತ್ತು ಸಾವಿರ ನಿವೇಶನಗಳನ್ನು ಹಂಚುತ್ತೇವೆಂದು ಡಿಕ್ಲೇರ್ ಮಾಡಿದರು. ಆದರೆ ಯಾವತ್ತು ಇದನ್ನು ಡಿಕ್ಲೇರ್ ಮಾಡಿದರು. ಆವೊತ್ತು ಬಿಡಿಎ ನಲ್ಲಿ ಭೂಮಿ ಇಲ್ಲ ನಿವೇಶನ ಇಲ್ಲ ಆದರೂ ಕೂಡ ಡಿಕ್ಲೇರ್ ಮಾಡಿದರು. ಡಿಕ್ಲೇರ್ ಮಾಡಿದ ಮೇಲೆ ಹಂಚಬೇಕಲ್ಲವೇ ? ಇಲ್ಲಿಯುವರೆಗೂ ೪೨೮೦ ನಿವೇಶನಗಳನ್ನು ಹಂಚಿದ್ದಾರೆ. ಆದರೆ ಭೂಮಿ ಇಲ್ಲ. ಲೇ ಔಟ್ ಪ್ಲಾನ್ ಇಲ್ಲ. ನಿವೇಶನ ಇಲ್ಲ ಮತ್ತು ಎಲ್ಲಿ ಹಂಚಬೇಕೆನ್ನುವುದು ಅವರಿಗೂ ಗೊತ್ತಿಲ್ಲ. ಹಿಂದಿನವರು ಈ ದೋಷ ಮಾಡಿ ಹೋಗಿದ್ದಾರೆ ಎಲ್ಲಿ ನಿವೇಶನಗಳನ್ನು ಹಂಚೋಣ ಹೇಳಿ ಎಂದು ಈಗ ಹೇಳುತ್ತಾರೆ. ಯಾವ ರೀತಿ ಹಿಂದೆ ದುರ್ವ್ಯವಹಾರಗಳು ನಡೆದಿವೆ ಎಂಬ ಬಗ್ಗೆ ಈ ಒಂದು ನಿದರ್ಶನವನ್ನು ತಮ್ಮ ಮುಂದಿಡುತ್ತಿದ್ದೇನೆ. ಇನ್ನು ತಮ್ಮೆಲ್ಲರಿಗೂ ಗೊತ್ತಿರುವ ಹಾಗೆ ೧೯೭೬ರಲ್ಲಿ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಬಂತು. ಅದರ ಪ್ರಕಾರ ೯,೮೦,೦೦,೦೦೦ ಸ್ಕ್ವೇರ್ ಫೀಟ್ ಸರ್‌ಪ್ಲಸ್ ಲ್ಯಾಂಡ್ ಇತ್ತು ೭ ದೊಡ್ಡ ಪಟ್ಟಣಗಳಿಗೆ ಅನ್ವಯವಾಗುವಂತೆ ಈ ಆಕ್ಟ್ ಈಗ ಬಂದಿದೆ. ೯,೮೦,೦೦,೦೦೦ ಸ್ಕ್ವೇರ್‌ಫೀಟ್ ಲ್ಯಾಂಡ್ ಎಕ್ಸೆಸ್ ಇದ್ದು ಇದು ಕರ್ನಾಟಕಕ್ಕೆ ಬರಬೇಕಾಗಿತ್ತು ಇದನ್ನು ಸರಕಾರ ಹೇಗೆ ವಿತರಣೆ ಮಾಡಬೇಕು. ಯಾವ ರೀತಿ ವಿನಿಯೋಗ ಮಾಡಬೇಕು. ಆ ಪ್ರಶ್ನೆ ಬೇರೆ ಆದರೆ ಅದರಲ್ಲಿ ೮,೨೫,೦೦,೦೦೦ ಸ್ಕ್ವೇರ್ ಫೀಟ್ ಅನ್ನು ನಮಗೆ ಅದು ಬರಬೇಕಾಗಿಲ್ಲ ಎಂದು ಎಕ್ಸೆಂಪ್‌ಷನ್ ಮಾಡಿದ್ದಾರೆ. ಆ ಭೂಮಿ ನಮಗೆ ಬರಲಿಲ್ಲ. ಇನ್ನೂ ಸುಮಾರು ೧ ಕೋಟಿ ಚಿಲ್ಲರೆ ಚದರ ಮೀಟರ್ ಭೂಮಿ ನಮ್ಮ ಸರ್ಕಾರಕ್ಕೆ ಬರಬೇಕು. ಆದರೆ ಈ ಜನ ಏನು ಹೇಳುತ್ತಾರೆಂದರೆ, ಅಷ್ಟೊಂದು ಜನರಿಗೆ ಎಕ್ಸೆಂಪ್‌ಷನ್ ಕೊಟ್ಟಿದ್ದೀರಿ. ಅದೇ ರೀತಿ ನಮಗೂ ಎಕ್ಸೆಂಪ್‌ಷನ್ ಕೊಡಿ ಎಂದು. ಈ ಅಪ್ಲಿಕೇಷನ್‌ಗಳು ಇನ್ನೂ ಪೆಂಡಿಂಗ್ ಇವೆ. Is it not a mockery of the Act which was meant to help the poorer sections in urban area ? ಸರ್ಪ್ಲಸ್ ಲ್ಯಾಂಡ್ ಎಂದು ಮಾಡುವುದು, ಅರ್ಬನ್ ಲ್ಯಾಂಡ್ ಎಂದು ಮಾಡುವುದು ಅರ್ಜಿಯನ್ನು ಕರೆಯುವುದು, ಎಕ್ಸೆಂಪ್‌ಷನ್ ಕೊಡುವುದು ಸೈಟುಗಳನ್ನು ಹಂಚುವುದು ಇಂಥಾದ್ದೆಲ್ಲಾ ಬಹಳ ದಿನಗಳಿಂದಲೂ ನಡೆಯುತ್ತಲೇ ಬಂದಿದೆ. ನಾನು ಈ ಬಗ್ಗೆ ಇನ್ನೂ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಗಳ ಬಗ್ಗೆ, ಅವುಗಳ ವ್ಯವಹಾರದ ಬಗ್ಗೆ ಬಹಳ ದೊಡ್ಡ ಚರಿತ್ರೆಯೇ ಇದೆ. ರಾಜ್ಯದಲ್ಲಿ ೯೮ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿಗಳಿಗೆ ಬೇಕಾದಂಥ ೯೦೦೦ ಎಕರೆ ಭೂಮಿಯನ್ನು ಸರ್ಕಾರದ ಪರವಾಗಿ ಅಕ್ವೈರ್ ಮಾಡಿ ಕೊಡಬೇಕೆಂದು ಪ್ರೊಸೀಡಿಂಗ್ಸ್ ನಡೆಯುತ್ತಿದೆ. ಈ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಗಳ ವಿಚಾರಕ್ಕೆ ನಾನು ಅನಂತರ ಬರುತ್ತೇನೆ. ೧೯೮೫ರಲ್ಲಿ ಒಂದು ಗೌರ್ನಮೆಂಟ್ ಆರ್ಡರ್ ಆಗಿದೆ, directing the Bangalore Development Authority to withdraw the Land Acquisition Proceedings in favour of the House Building Co-operative Societies. ತಮಗೆ ಬೇಕಾದರೆ ಆ ಆರ್ಡರ್ ಕಾಪಿಯನ್ನು ಕೊಡುತ್ತೇನೆ. ಮತ್ತು ಅದರ ಪೂರ್ಣ ವಿವರಗಳನ್ನು ಕೊಡುತ್ತೇನೆ. ಬಿ.ಡಿ.ಎ.ನವರು ಜಮೀನನ್ನು ಅಕ್ವೈರ್ ಮಾಡುವುದು ಬೇಡ, ಅದನ್ನೆಲ್ಲಾ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಗಳಿಗೆ ಬಿಟ್ಟುಬಿಡಿ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ಅಂದರೆ ಸರ್ಕಾರದವರ ಅನುಕಂಪ ಬಿ.ಡಿ.ಎ.ಯವರ ಮೇಲಿದೆಯೋ ಅಥವಾ ಸೊಸೈಟಿಯವರ ಮೇಲಿದೆಯೋ ಎಂಬುದನ್ನು ಇದೊಂದರಿಂದಲೇ ನೀವೇ ಅರ್ಥಮಾಡಿಕೊಳ್ಳಿ. ಈ ಹೌಸಿಂಗ್ ಸೊಸೈಟಿಗಳಲ್ಲಿ ಬಹಳಷ್ಟು ಬೋಗಸ್ ಸೊಸೈಟಿಗಳಿವೆ. ಅವುಗಳಲ್ಲಿ ಎಷ್ಟು ಸೊಸೈಟಿಗಳು ಜೆನ್ಯುಯಿನ್ ಆಗಿವೆ, ಅವುಗಳಲ್ಲಿ ಎಷ್ಟು ಜನ ಸದಸ್ಯರಿದ್ದಾರೆ. ಅವರ ಪೈಕಿ ಎಷ್ಟು ಜನರಿಗೆ ಸೈಟಿನ ಅವಶ್ಯಕತೆ ನಿಜವಾಗಿಯೂ ಇದೆ ಎಂಬುದು ಗೊತ್ತಾಗುತ್ತಿಲ್ಲ. ಹೌಸ್ ಬಿಲ್ಡಿಂಗ್ ಸೊಸೈಟಿಗಳ ವಿಚಾರಕ್ಕೆ ಸಂಬಂಧಪಟ್ಟಂತೆ ಜಿ.ವಿ.ಕೆ.ರಾವ್‌ರವರು ಸಂಪೂರ್ಣವಾಗಿ ವರದಿ ಮಾಡಿದ್ದಾರೆ. ಅನೇಕ ಸೊಸೈಟಿಗಳಲ್ಲಿ ಸದಸ್ಯರು ಅರ್ಜಿಗಳನ್ನು ಹಾಕುವಾಗ ಕೇರಾಫ್ ಛೇರ್ಮನ್ ಎಂದು ಆ ಸೊಸೈಟಿಯ ಹೆಸರನ್ನು ಹಾಕಿದ್ದಾರೆ. ಕೆಲವು ಸೊಸೈಟಿಗಳು ಅಸ್ತಿತ್ವದಲ್ಲೇ ಇಲ್ಲ. ಇನ್ನು ಕೆಲವು ಸೊಸೈಟಿಗಳಲ್ಲಿ ಸದಸ್ಯರು ತಮ್ಮ ಅರ್ಜಿಗೆ ಸಹಿಯನ್ನೇ ಹಾಕದೆ ಕೊಟ್ಟಿದ್ದಾರೆ, ಮತ್ತೆ ಕೆಲವರು ತಮ್ಮ ಅಡ್ರೆಸ್‌ನ್ನು ಸುಳ್ಳು ಕೊಟ್ಟಿದ್ದಾರೆ. ಇದನ್ನು ನಾನು ತಮಗೆ ಒಂದು

ನಿದರ್ಶನ ರೂಪದಲ್ಲಿ ಹೇಳುತ್ತಿದ್ದೇನೆ. ಈ ರೀತಿ ಇರತಕ್ಕ ಸೊಸೈಟಿಗಳನ್ನು ನಾವು ಏನು ಮಾಡಬೇಕು? ಅನೇಕ ಸದಸ್ಯರು ಹೊರಗಿನಿಂದ ಬಂದವರು ನನ್ನನ್ನು ಕೇಳುತ್ತಾರೆ. ಯಾವೋ ಕೆಲವು ಸೊಸೈಟಿಗಳು ದುರ್ವ್ಯವಹಾರವನ್ನು ಮಾಡಿರಬಹುದು, ಅಲ್ಲಿಯ ಪದಾಧಿಕಾರಿಗಳು ಮಾಡಿರಬಹುದು. ಆದರೆ ಯಾವ ಸೊಸೈಟಿ ಜೆನ್ಯುಯಿನ್ ಸೊಸೈಟಿ ಇದೆ, ಎಷ್ಟು ಜನ ಜೆನ್ಯುಯಿನ್ ಸದಸ್ಯರಿದ್ದಾರೆ, ಅವರು ಬಂದು ನನ್ನನ್ನು ಕೇಳುತ್ತಿದ್ದಾರೆ. ನಾವು ಸೈಟಿಗೋಸ್ಕರ ಹಣವನ್ನು ಕಟ್ಟಿ ಸೈಟು ಸಿಕ್ಕುತ್ತದೆ ಎಂದು ಕಾಯುತ್ತಾ ಕುಳಿತಿದ್ದೇವೆ ಎಂದು ಹೇಳುತ್ತಿದ್ದಾರೆ. ನಾವು ಈ ಸೊಸೈಟಿಗಳನ್ನು ಏನು ಮಾಡಬೇಕು? ನನಗೆ ಗೊತ್ತಿರುವಂತೆ ಜಿ.ವಿ.ಕೆ.ರಾವ್‌ರವರ ರಿಪೋರ್ಟ್‌ನ್ನು ಈ ಸದನದ ಮುಂದಿಟ್ಟಿದ್ದಾರೆ. ಅದರಲ್ಲಿ ಬಹಳಷ್ಟು ಸೊಸೈಟಿಗಳಿಗೆ ನೋಟೀಸ್ ಸರ್ವ್ ಮಾಡಿ ನೀವು ಎನ್‌ಕ್ವೈರಿ ಸಮಯದಲ್ಲಿ ಹಾಜರಿರಬೇಕೆಂದು ತಿಳಿಸಿದ್ದರೂ ಕೂಡ ಅನೇಕ ಸೊಸೈಟಿಗಳವರು ನಾವು ಅಲ್ಲಿ ಹೋದರೆ ಎಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೋ ಎಂದು ಎನ್‌ಕ್ವೈರಿಗೇ ಹೋಗಲಿಲ್ಲ. ಆ ಸೊಸೈಟಿಯವರಿಗೆ ಏನು ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳುತ್ತಿದ್ದಾರೆ ಅದನ್ನು ಫ್ರೀಜ್ ಮಾಡಬೇಕೆಂದು ನಾವು ಮಾಡುತ್ತಿದ್ದೇವೆ. ಇನ್ನು ಮುಂದೆ ಯಾರಿಗೆ ನಿಜವಾಗಿಯೂ ಸೈಟುಗಳಿಲ್ಲ, ಯಾರಿಗೆ ಸೈಟುಗಳ ಅವಶ್ಯಕತೆ ತುಂಬಾ ಇದೆ ಯಾವುದು ಜೆನ್ಯುಯಿನ್ ಸೊಸೈಟಿ ಎಂಬುದನ್ನೆಲ್ಲಾ ಸಂಪೂರ್ಣವಾಗಿ ಪರಿಶೀಲಿಸಿ ಅವಶ್ಯಕತೆ ಇರುವವರಿಗೆ ಈ ಸೈಟುಗಳು ಸಿಕ್ಕುವಂತಾಗಬೇಕು. ಅಂಥ ಸೊಸೈಟಿಗಳಿಗೆ ಭೂಮಿಯನ್ನು ಕೊಡಬೇಕು ಎಂದು ನಾವು ಮಾಡಿದ್ದೇವೆ. ಈಗ ಏನಾಗಿದೆ ಸೊಸೈಟಿ ಆಕ್ಟ್ ಪ್ರಕಾರ ಇದರಲ್ಲಿ ದುರ್ವ್ಯವಹಾರ ಆಗಿದ್ದರೆ write to the office bearers to rectify those irregularities ಎಂದು ಹೇಳುತ್ತೇನೆ. ಮಾನ್ಯ ಏಕಾಂತಯ್ಯನವರಿಗೆ ಗೊತ್ತು, ಸೊಸೈಟಿ ಆಕ್ಟ್‌ಗೆ ಏನು ಶಕ್ತಿ ಇದೆ ಎಂದು. ಅವರು ದುಡ್ಡು ತಿಂದಿದ್ದಾರೆ, ಸಾಕಷ್ಟು ಕಮಿಷನ್ ಅವರಿಗೆ ಹೋಗಿದೆ. ದುಡ್ಡನ್ನು ತಿಂದವರು ಯಾರು ಯಾರೋ ಅವರೆಲ್ಲಾ ಹೋಗಿಬಿಟ್ಟರು. ಇವತ್ತು ನಮಗೆ ನಿವೇಶನ ಸಿಕ್ಕುತ್ತದೆ ನಾಳೆ ಸಿಕ್ಕುತ್ತದೆಂದು ದುಡ್ಡನ್ನು ಕಟ್ಟಿದವರು ಬಕಪಕ್ಷಿಯಂತೆ ಅಲ್ಲಿ ಕಾದು ಕುಳಿತಿದ್ದಾರೆ. ಅವರ ಇಂಟರೆಸ್ಟ್‌ನ್ನು ಯಾವರೀತಿ ಸೇಫ್‌ಗಾರ್ಡ್ ಮಾಡಬೇಕು ಎನ್ನುವುದು ನಮ್ಮ ಮುಂದಿರತಕ್ಕಂಥ ಪ್ರಶ್ನೆಯಾಗಿದೆ. ಅದರ ಬಗ್ಗೆ ಇಷ್ಟರಲ್ಲಿಯೇ ಒಂದು ಸಮಿತಿಯನ್ನು ಮಾಡುತ್ತೇವೆ. ಆ ಸಮಿತಿಯವರು ಅದರ ವಿತರಣೆ ಯಾವ ರೀತಿಯಾಗಬೇಕು, ದುರ್ವ್ಯವಹಾರ ನಡೆಯುವುದನ್ನು ಯಾವರೀತಿ ತಪ್ಪಿಸಬೇಕೆಂಬುದಕ್ಕೆ ಶಿಫಾರಸ್ಸು ಮಾಡುತ್ತಾರೆ, ಇನ್ನು ಒಂದೂ ಒಂದೂವರೆ ತಿಂಗಳಲ್ಲಿಯೇ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಮನಸ್ಸು ಮಾಡಿದ್ದೇನೆ. ಅದು ಕಷ್ಟವಾದರೆ ತಾವು ಏನು ನಿರ್ಣಯವನ್ನು ಕೊಡುತ್ತೀರೋ ಅದನ್ನು ಪಾಲಿಸಿಕೊಂಡು ಹೋಗುತ್ತೇನೆಂದು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಲು ಇಚ್ಛೆಪಡುತ್ತೇನೆ.

ಇನ್ನೊಂದೇ ಒಂದು ವಿಚಾರ. ಬೆಂಗಳೂರು ಬಹಳವಾಗಿ ಬೆಳೆದಿದೆ. ಇನ್ನು ಹೆಚ್ಚು ಬೆಳೆಯುವುದಕ್ಕೆ ಬಿಟ್ಟರೆ ಸ್ವಾರಸ್ಯವಿರುವುದಿಲ್ಲ. ಬೆಂಗಳೂರಿನ ಸೌಂದರ್ಯ ಸಂಪೂರ್ಣವಾಗಿ ಹಾಳಾಗಿ ಹೋಗಿದೆ. ಈಗಾಗಲೇ ಭೂಮಿ, ಸೈಟ್ ಇಲ್ಲದ ಜನರನ್ನು ಗುರುತಿಸಿ ಅವರಿಗೆ ಗ್ರೂಪ್ ಹೌಸಿಂಗ್ ಮುಖಾಂತರ ಮನೆಗಳ ಸಮಸ್ಯೆಯನ್ನು ನಿವಾರಣೆ ಮಾಡಬೇಕೆಂದು ಮಾಡಿದ್ದೇವೆ. ಇನ್ನು ಮುಂದೆ ಪ್ರತಿಯೊಬ್ಬರೂ ಕಾಂಪೌಂಡ್‌ವಾಲ್ ಹಾಕಿಕೊಳ್ಳತಕ್ಕಂಥ ಪರಿಸ್ಥಿತಿಯಿಲ್ಲ. ಗ್ರೀನ್ ಬೆಲ್ಟ್ ಈಗಾಗಲೇ ತುಮಕೂರು ಮುಟ್ಟುತ್ತಿದೆ, ಈ ಕಡೆ ಹೊಸೂರು ಮುಟ್ಟುತ್ತಿದೆ, ಎರಡನೆಯದು ರಾಮನಗರವನ್ನು ಮುಟ್ಟುತಕ್ಕಂಥ ಪರಿಸ್ಥಿತಿ ಬರುತ್ತದೆ. ಹೌಸಿಂಗ್ ಕೋ ಆಪರೇಟಿವ್ ಸೊಸೈಟಿಗಳ ಮುಖಾಂತರ ಗ್ರೂಪ್ ಹೌಸಿಂಗ್ ಮಾಡಬೇಕೆನ್ನುವ ವಿಚಾರವನ್ನು ನಾನು ಮಾಡುತ್ತಿದ್ದೇನೆ. ಮಾನ್ಯ ಸದಸ್ಯರಾದ ಕೆ. ಹೆಚ್. ಪಾಟೀಲ್‌ರವರು ಸರ್ಕಾರಕ್ಕೆ ಅಧಿಕಾರ ಇದೆ. ಇಂಥ ದುರ್ವ್ಯವಹಾರ ಆಗಿರುವಂಥ ಸೊಸೈಟಿಗಳಿಗೆ ಏತಕ್ಕೆ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಬಾರದೆಂದು ಹೇಳಿದ್ದಾರೆ. ಆ ವಿಚಾರ ಈಗಾಗಲೇ ಮಾಡಿದ್ದೇವೆ. ನಮ್ಮ ಅಧಿಕಾರಿಗಳು ಏನು ಹೇಳುತ್ತಿದ್ದಾರೆಂದರೆ ಸ್ವಾಮಿ ಎಷ್ಟೋ ದುರ್ವ್ಯವಹಾರ ನಡೆದು ಹೋಗಿದೆ. ಅದಕ್ಕೆ ಕೈಹಾಕಿದರೆ ಜೇಂಕಿ ಮುಟ್ಟಿದಂತಾಗುತ್ತದೆ. ಅದನ್ನು ಮುಟ್ಟಲೇಬೇಡಿ ಎಂದು ಕೆಲವರು ಹೇಳುತ್ತಿದ್ದಾರೆ. ಅಡ್ಮಿನಿಸ್ಟ್ರೇಟರನ್ನು ಹಾಕಿದರೆ ಎಲ್ಲಾ ಜವಾಬ್ದಾರಿಯನ್ನು ನಾವೇ ತಲೆಗೆ ಕಟ್ಟಿಕೊಳ್ಳಬೇಕಾಗುತ್ತದೆ. ಈ ವಿಚಾರವಿದೆ, ಇಲ್ಲವೆಂದು ಹೇಳುವುದಿಲ್ಲ. ಅಡ್ಮಿನಿಸ್ಟ್ರೇಟರನ್ನು ಹಾಕಿ ತಲೆಗೆ ಕಟ್ಟಿಕೊಳ್ಳುವುದು ಬೇಡ ಅದಕ್ಕಾಗಿ ಒಂದು ಕಮಿಟಿಯನ್ನು ಮಾಡಿ ಎಂದು ಅನೇಕ ಅಧಿಕಾರಿಗಳು ಹೇಳುತ್ತಾರೆ. ಅದನ್ನು ಕೂಡ ವಿಚಾರ ಮಾಡುತ್ತಿದ್ದೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮುಖ್ಯವಾಗಿ ಈಗಾಗಲೇ ಒಂದೂವರೆ ಗಂಟೆಯಾಗಿರುತ್ತದೆ. ಇನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈಗ ಎರಡು ವಿಚಾರಗಳು ಬಹಳ ಮುಖ್ಯವಾಗಿ ನಮ್ಮ ಮುಂದೆ ಬಂದಿವೆ. ಅದು

ವಿದ್ಯುಚ್ಛಕ್ತಿ. ವಿದ್ಯುಚ್ಛಕ್ತಿಯ ಬಗ್ಗೆ ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ. ನಮ್ಮಲ್ಲಿ ವಿದ್ಯುಚ್ಛಕ್ತಿಯ ಕೊರತೆ ಬಹಳಷ್ಟು ಇದೆ. ಅದನ್ನು ಯಾವರೀತಿ ನೀಗಿಸುವುದಕ್ಕೆ ಸಾಧ್ಯವಾಗುತ್ತದೆಂಬುದು ನನಗಂತೂ ಅರ್ಥವಾಗುತ್ತಿಲ್ಲ. ಡಿಮ್ಯಾಂಡ್ ದಿನೇ ದಿನೇ ಬೆಳೆಯುತ್ತಿದೆ, ಆದರೆ ವಿದ್ಯುಚ್ಛಕ್ತಿಯ ಉತ್ಪಾದನೆಯಲ್ಲಿ ಯಾವ ರೀತಿಯಾದ ಬದಲಾವಣೆಯೂ ಕಾಣಿಸುತ್ತಿಲ್ಲ. ಒಂದೆರಡು ಯೋಜನೆಗಳು ಸ್ವಲ್ಪಮಟ್ಟಿಗೆ ಮುಗಿದಿರಬಹುದು. ಅದರಿಂದ ಹೆಚ್ಚಿನ ಮಟ್ಟದಲ್ಲಿ ಅನುಕೂಲವಾಗುತ್ತಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗುತ್ತದೆ. ಈಗ ಇದನ್ನು ಯಾವರೀತಿ ಸರಿದೂಗಿಸಬೇಕೆಂಬುದನ್ನು ವಿಚಾರ ಮಾಡಬೇಕಾಗುತ್ತದೆ. ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಮಾಡಲು ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಏತಕ್ಕೆಂದರೆ ಒಂದೇ ದಿವಸದಲ್ಲಿ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಸಾಧ್ಯವಾಗುವುದಿಲ್ಲ. ಇವೊತ್ತು ಕಾರ್ಖಾನೆಗಳಿಗೆ ವಿದ್ಯುಚ್ಛಕ್ತಿ ಬೇಕು. ಅದೇ ರೀತಿಯಲ್ಲಿ ರೈತರ ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಬೇಕು, ನೀರಾವರಿಗೆ ವಿದ್ಯುಚ್ಛಕ್ತಿ ಬೇಕು ವಿದ್ಯುಚ್ಛಕ್ತಿ ಅಭಾವ ಇದ್ದಾಗ ಡಿಮ್ಯಾಂಡ್ ಹೆಚ್ಚಾದಾಗ, ಹಣದ ಮುಗ್ಗಟ್ಟು ಇದ್ದಾಗ ಅದನ್ನು ಯಾವರೀತಿ ಸರಿದೂಗಿಸಬೇಕೆಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಹೆಚ್ಚು ಹಣವನ್ನು ಅದಕ್ಕೆ ಇಡಲಾರದೆ ಹೋದರೆ ವಿದ್ಯುಚ್ಛಕ್ತಿಯ ಅಭಾವವನ್ನು ಎದುರಿಸಬೇಕಾಗುತ್ತದೆ.

ಎಲ್ಲಾ ಕಾರ್ಖಾನೆಗಳಿಗೆ ವಿದ್ಯುಚ್ಛಕ್ತಿ ಕಡಿಮೆ ಮಾಡಿ ಎಂದು ಸದಸ್ಯರು ಹೇಳುತ್ತಾರೆ. ಕಾರ್ಖಾನೆಗಳಿಗೆ ಕಡಿಮೆ ಮಾಡಿದರೆ ಅಲ್ಲಿರತಕ್ಕ ಕಾರ್ಮಿಕರಿಗೆ ಹೊರ ಹಾಕಬೇಕಾಗುತ್ತದೆ. ಸುಡ್ಡಿದ್ದು ಮೆಟೀರಿಯಲ್ ಇದ್ದು, ರಾ ಮೆಟೀರಿಯಲ್ ಇದ್ದು ಉತ್ಪಾದನೆ ಕಡಿಮೆಯಾದರೆ ಸೇಲ್ಸ್ ಟ್ಯಾಕ್ಸ್ ಮುಂತಾದ ಟ್ಯಾಕ್ಸ್ ಕಡಿಮೆಯಾಗುತ್ತದೆ. ಉದ್ಯೋಗವಕಾಶ ಕಡಿಮೆಯಾಗುತ್ತದೆ. ಅಗ್ರಿಕಲ್ಚರ್‌ನಲ್ಲಿ ಸಮತೋಲನ ಮಾಡುವ ವಿಚಾರ ಮಾಡಬೇಕಾದರೆ ಒಂದೇ ಹಾದಿ ಎಂದರೆ ಅದಷ್ಟು ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ವಿದ್ಯುಚ್ಛಕ್ತಿ ಮೇಲೆ ಏನು ಇನ್‌ವೆಸ್ಟ್‌ಮೆಂಟ್ ಮಾಡಿದ್ದೇವೆ ಇದು ಸಾಲದು. ಇನ್ನೂ ಹೆಚ್ಚಿನ ಮಟ್ಟಿಗೆ ಮಾಡಬೇಕು. ಈ ಬಗ್ಗೆ ಕೇಂದ್ರ ಸರ್ಕಾರದೊಡನೆ ಪ್ರಯತ್ನ ಮಾಡುತ್ತಿದ್ದೇವೆ. ಇಷ್ಟು ತೀವ್ರವಾಗಿ ವಿದ್ಯುಚ್ಛಕ್ತಿ ಉತ್ಪಾದಿಸುವ ಮಟ್ಟದಲ್ಲಿ ಯೋಜನೆಗಳು ಬರುತ್ತಿವೆ ಎಂದು ಕಾಣುತ್ತಿಲ್ಲ. ಸದಸ್ಯರು ಸಲಹೆ ಕೊಟ್ಟರೆ ಅದರಂತೆ ನಡೆಸಿಕೊಡಲು ಯತ್ನಿಸುತ್ತೇನೆ. ಹಣದ ಮುಗ್ಗಟ್ಟು ಬಹಳ ಇದೆ. ಕೆ.ಇ.ಬಿ.ಯಲ್ಲಿ ಕೂಡ ಹಣಕಾಸಿನ ಪರಿಸ್ಥಿತಿ ಕೆಟ್ಟಿದೆ. ಅವರಿಗೂ ದುಡ್ಡಿಲ್ಲ. ಬಹಳಷ್ಟು ಖೋತ ಆಗುತ್ತಿದೆ, ಲಾಸ್ ಆಗುತ್ತಿದೆ. ಅದಕ್ಕಾಗಿ ಟ್ಯಾರಿಫ್ ಕಮಿಟಿ ಮಾಡಿದ್ದೇವೆ. ಅವರು ಎಷ್ಟರಮಟ್ಟಿಗೆ ಇಂಪ್ರೂವ್ ಮಾಡುವುದಕ್ಕೆ ಸಲಹೆ ಮಾಡುತ್ತಾರೆಂದು ನೋಡಬೇಕಾಗುತ್ತದೆ. ಕೆ ಇ ಬಿ.ಯ ಹಣಕಾಸಿನ ಪರಿಸ್ಥಿತಿ ಸುಧಾರಿಸದೆ ಹೋದರೆ ಈ ಸಮಸ್ಯೆ ಬಗೆಹರಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ಎಲ್ಲರೂ ಸಹಕಾರ ನೀಡಬೇಕೆಂದು ವಿನಂತಿಸುತ್ತೇನೆ.

ಸಾರಿಗೆ ಬಗ್ಗೆ ಎಷ್ಟು ಮಾತನಾಡಿದರೂ ಕಡಿಮೆ ಎನ್ನಿಸುತ್ತದೆ. ಇದೊಂದು ವೈಟ್ ಎಲಿಫೆಂಟ್ ೩೦ ರಿಂದ ೬೦ ಕೋಟಿ ರೂಪಾಯಿಗಳವರೆಗೆ ವರ್ಷ ವರ್ಷ ಹೋಗುತ್ತಿದೆ. ಬಂಗಾಲದಲ್ಲಿ ಅಧಿಕ ಮಾಸ ಬಂತು ಅಂದ ಹಾಗೆ ಕೇಂದ್ರ ಸರ್ಕಾರದಲ್ಲೂ ಡೀಸಲ್ ಪ್ರೈಸ್ ಹೆಚ್ಚು ಮಾಡಿದ್ದಾರೆ. ಅವರ ಪರಿಣಾಮ ಇದರ ಮೇಲೆ ಆಗುತ್ತದೆ. ಅಲ್ಲಿ ಸರಿ ಮಾಡದೆ ಹೋದರೆ ಲಾಸ್ ಹೆಚ್ಚಾಗುತ್ತದೆಯೇ ಹೊರತು ಕಡಿಮೆ ಆಗುವುದಿಲ್ಲವೆಂಬ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದಕ್ಕಾಗಿ ನಾನು ವಿಚಾರ ಮಾಡುತ್ತಿದ್ದೇನೆ. ಕೆ.ಎಸ್.ಆರ್.ಟಿ.ಸಿ.ಯವರಿಗೆ ಬೇಕಾದಷ್ಟು ಬಸ್ಸುಗಳನ್ನು ತೆಗೆದುಕೊಂಡು ನಡೆಸಿ ಎಂದು ಹೇಳುವ ಪರಿಸ್ಥಿತಿಯಲ್ಲಿ ಸರ್ಕಾರ ಇಲ್ಲ ನಮ್ಮ ನೀತಿಯಲ್ಲಿ ಬಹುಮಟ್ಟಿಗೆ ಮಾರ್ಪಾಟು ಮಾಡಬೇಕಾದ ಪರಿಸ್ಥಿತಿಗೆ ಬಂದಿದ್ದೇವೆ. ಇವೊತ್ತು ಪ್ರಯಾಣಿಕರಿಗೆ ಅನುಕೂಲವಾಗಬೇಕು. ನ್ಯಾಷನಲೈಸೇಷನ್ ಏತಕ್ಕೆ ಮಾಡಬೇಕು ? ನ್ಯಾಷನಲೈಸೇಷನ್ ಮಾಡಿದರೆ ಪ್ರಯಾಣಿಕರಿಗೆ ಅನುಕೂಲವಾಗಬೇಕು, ಸುಮ್ಮನೆ ರಾಷ್ಟ್ರೀಕರಣ ಮಾಡಿದ್ದೇವೆಂದು ಸಂತೋಷಕ್ಕಾಗಿ ಹೇಳಿಕೊಂಡರೆ ಸಾಲದು. ಖಾಸಗೀ ವ್ಯಾನುಗಳಿಗೆ ಬಸ್ಸುಗಳಿಗೆ ಸ್ಪೆಶಲ್ ಪರ್ಮಿಟ್ ಕೊಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಡೆಲ್ಲಿಯಲ್ಲಿ ನಾನು ಸಾರಿಗೆ ಮಂತ್ರಿಯಾಗಿದ್ದಾಗ ದೊಡ್ಡ ಪ್ರಮಾಣದಲ್ಲಿ ಯೋಜನೆ ನಡೆದಿತ್ತು. ಅದಕ್ಕೂ ಮೊದಲು ನಡೆಯುತ್ತಿತ್ತು ಅದರ ಉದ್ದೇಶ ಬಾಡಿಗೆಗೆ ಬಸ್ಸುಗಳನ್ನು ತೆಗೆದುಕೊಂಡು ಓಡಿಸುವುದು ಅವನ್ನು ನಾವು ಇಟ್ಟುಕೊಳ್ಳಬೇಕೆಂದು ಇಲ್ಲ ಡೆಲ್ಲಿ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್‌ನವರು ಬಾಡಿಗೆ ಮೇಲೆ ತೆಗೆದುಕೊಂಡು 'ಆಪರೇಟೆಡ್ ಅಂಡರ್ ಡಿಸಿಪಿ' ಎಂದು ಬೋರ್ಡ್ ಹಾಕಿಕೊಂಡು ನಡೆಸುತ್ತಾರೆ. ಅದಕ್ಕಾಗಿ ನಾವು ಕೂಡ ಬಸ್ಸುಗಳನ್ನು ಬಾಡಿಗೆಗೆ ತೆಗೆದುಕೊಳ್ಳಬೇಕೆಂಬ ಯೋಜನೆಯನ್ನು ನಿರೂಪಿಸುತ್ತಿದ್ದೇವೆ. ಅವುಗಳನ್ನು ನಡೆಸಲು ಏನು ಮಾಡುತ್ತೀರಿ ಅಂದರೆ ಎಕ್ಸ್ ಸರ್ವೀಸ್‌ಮನ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ

ಆದ್ಯತೆ ಕೊಡೋಣವೆಂದು ಇದ್ದೇವೆ. ಒಬ್ಬ ನಿರುದ್ಯೋಗಿ ಇದ್ದಾನೆ, ಬಸ್ ತೆಗೆದುಕೊಳ್ಳುತ್ತಾನೆಂದರೆ ೮೦ ಪರ್ಸೆಂಟ್ ಸಾಲ ಸಿಗುತ್ತದೆ. ಅದರ ಮೇಲೆ ಬಾಡಿ ಬಿಲ್ಡ್ ಮಾಡಿ ಅದನ್ನು ನಡೆಸಬಹುದು. ಅವನ ಅಣ್ಣ ತಮ್ಮ ಅಥವಾ ಸಂಬಂಧೀಕರು ಕ್ಲೀನರ್ ಆಗಬಹುದು. ಡ್ರೈವರ್ ಆಗಬಹುದು. ನಮಗೆ ಅತ ಬಸ್ ತೆಗೆದುಕೊಂಡು ಬಂದು ದಿನಕ್ಕೆ ಇಷ್ಟು ಗಂಟೆ ನಡೆಸಬೇಕು. ಅವರಿಗೆ ನಾವು ಕಿಲೋಮೀಟರ್ ಮೇಲೆ ದುಡ್ಡು ಕೊಡುತ್ತೇವೆ. ಮಿನಿಮಂ ಮೈಲೇಜ್ ಗ್ಯಾರಂಟಿ ಕೊಡುತ್ತೇವೆಂದರೆ ಅವನು ಬದುಕುತ್ತಾನೆ.

ನಮಗೆ ಖರ್ಚು ಸಹ ಕಡಿಮೆ ಆಗುತ್ತದೆ. ಒಂದು ಬಸ್ಸನ್ನು ಹಾಕುವಷ್ಟು ಬಂಡವಾಳ ನಮ್ಮ ಹತ್ತಿರ ಇಲ್ಲ. ಈಗ ಅಂಥ ಪರಿಸ್ಥಿತಿ ಇದೆ. ಪ್ರಯಾಣಿಕರಿಗೆ ಹೆಚ್ಚಿನ ಮಟ್ಟಿನ ಸೌಲಭ್ಯ ಒದಗಿಸಬೇಕು ಎಂಬ ದೃಷ್ಟಿಯಿಂದ ಇದೂ ಒಂದು ಮಾರ್ಗವೆಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ನಾನು ದೀರ್ಘವಾಗಿ ವಿಚಾರ ಮಾಡುತ್ತಿದ್ದೇನೆ. ಯೋಜನೆಗಳನ್ನು ಮಾಡುತ್ತಿದ್ದೇನೆ. ಈ ರೀತಿಯಿಂದ ಬಾಡಿಗೆ ಬಸ್ಸುಗಳನ್ನು ತೆಗೆದುಕೊಂಡು ಅವರೇ ದುಡ್ಡು ಕೊಟ್ಟು ನಾವೇ ನಡೆಸುವುದು, ಕಂಟ್ರೋಲ್ ನಮ್ಮದೇ ಇರುತ್ತದೆ. ಕಂಡಕ್ಟರ್ ಸಹ ನಮ್ಮವರೇ ಇರುತ್ತಾರೆ. ಆದರೆ ಬಸ್ಸನ್ನು ನೋಡುವಂಥದ್ದು, ಅದನ್ನು ಮೇಂಟೇನ್ ಮಾಡುವುದು, ನಡೆಸುವುದು ಎಲ್ಲಾ ಆ ಬಸ್ಸಿನ ಮಾಲೀಕನದ್ದು ಇರುತ್ತದೆ. ಇಂತಹ ಒಂದು ಪದ್ಧತಿಯನ್ನು ಹಾಕಿಕೊಳ್ಳುತ್ತೇವೆ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇನ್ನು ಅನೇಕ ವಿಚಾರಗಳನ್ನು ನಾನು ಈಗಾಗಲೇ ಹೇಳಿದ್ದೇನೆ. ಈಗ ಶ್ರೀಮಾನ್ ಎ. ಕೆ. ಅನಂತಕೃಷ್ಣ ಅವರು ನನಗೆ ಒಂದು ಚೀಟಿ ಕಳುಹಿಸಿದ್ದಾರೆ. ಅದರಲ್ಲಿ ವಿಶ್ವಭಾರತಿ ಕಾಂಪ್ಲೆಕ್ಸ್‌ನವರ ಬಗ್ಗೆ ಬರೆದಿದ್ದಾರೆ. ಅವರಿಗೆ ದುಡ್ಡು ಮಾತ್ರ ಜಾಸ್ತಿ ಇದ್ದ ಹಾಗೆ ಕಾಣುತ್ತದೆ. ಏಕೆಂದರೆ ಒಂದೊಂದು ಅಡ್ವಟೈಸ್‌ಮೆಂಟ್‌ಗೆ ಒಂದು ಲಕ್ಷ ಎರಡು ಲಕ್ಷ ಮೂರು ಲಕ್ಷ ಖರ್ಚು ಮಾಡಿದಂತೆ ಕಾಣಿಸುತ್ತದೆ. ಅವರು ಎಷ್ಟು ಖರ್ಚು ಮಾಡುತ್ತಾರೆ, ಎಷ್ಟು ದುಡ್ಡು ಅವರ ಹತ್ತಿರ ಇದೆ ಎಂದು ಇದರಿಂದ ಅರ್ಥವಾಗುತ್ತದೆ. ಇದರ ಬಗ್ಗೆ ನಮ್ಮ ಹತ್ತಿರ ದೂರುಗಳು ಬಂದಿದೆ, ಅವರು ಯಾರಿಗೂ ಕೇರ್ ಮಾಡುವುದಿಲ್ಲವಂತೆ. ಸರ್ಕಾರಕ್ಕೂ ಕೇರ್ ಮಾಡುವ ಹಾಗೆ ಇಲ್ಲ ಅವರು ತಮ್ಮದೇ ಆದ ಎಂಪೈಯರ್‌ನ್ನು ಕಟ್ಟಿಕೊಂಡಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ಈ ಚೀಟಿಯಲ್ಲಿ ಬರೆದಿದ್ದಾರೆ ಇದರ ಬಗ್ಗೆ ವಿಚಾರ ಮಾಡುತ್ತೇನೆ ಅಲ್ಲಿ ಏನು ಆಗಿದೆ ಎಂದು ತಿಳಿದು ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ. ಇಂಡಸ್ಟ್ರಿಗಳಲ್ಲಿ ಉದ್ಯೋಗೀಕರಣ ಆಗಬೇಕು ಉದ್ಯೋಗೀಕರಣ ಬೆಳೆಯಬೇಕು. ಏಕೆಂದರೆ ನಾವು ನೋಡುತ್ತೇವೆ, ಉದ್ಯೋಗೀಕರಣದಲ್ಲಿ ಆಗಲಿ ಅಥವಾ ವಿದ್ಯುತ್ತಿನ ಉತ್ಪಾದನೆಯಲ್ಲಿ ಆಗಲಿ ಅಥವಾ ಎರಡರ ಉತ್ಪಾದನೆಯಲ್ಲಿಯೂ ನಾವು ಕೆಳಗೆ ಹೋಗುತ್ತಿದ್ದೇವೆ. ಅದರ ಸಲುವಾಗಿ ನಾವು ಈಗಾಗಲೇ ಇದರ ಬಗ್ಗೆ ಯಾವ ರೀತಿಯಿಂದ ವಿಚಾರ ಮಾಡಬೇಕು, ಮಾಡಿ ಯಾವ ರೀತಿಯ ಉದ್ಯೋಗ ಒದಗಿಸಬಹುದು ಎಂದು ಯೋಚನೆ ಮಾಡುತ್ತಿದ್ದೇವೆ. ನಮ್ಮಲ್ಲಿ ವಿದ್ಯುತ್ತಿನ ಕೊರತೆ ಇದೆ ಇದು ಅವರಿಗೆ ಗೊತ್ತಿದೆ ಆದ್ದರಿಂದ ನಮ್ಮಿಂದ ಏನು ಸಾಧ್ಯವಾಗುತ್ತದೆ. ಅವರಿಗೆ ಕೊಡುವಂಥ ಕ್ಲಿಯರೆನ್ಸ್ ಕೊಡೋಣ ಸಿಂಗಲ್ ವಿಂಡೋ ಕ್ಲಿಯರೆನ್ಸ್ ಮಾಡಿಕೊಂಡು ನಾವು ಮಾಡಬೇಕು ಎಂಬ ವಿಚಾರ ಮಾಡುತ್ತಿದ್ದೇವೆ. ಅಲ್ಲಿಂದ ಅನೇಕ ವಿಚಾರಗಳನ್ನು ನಾವು ಬಜೆಟ್‌ನಲ್ಲಿ ಹೇಳಿದ್ದೇವೆ. ಅದಕ್ಕಾಗಿ ಹೆಚ್ಚು ಪ್ರಸ್ತಾಪ ಮಾಡುತ್ತಿಲ್ಲ. ಈಗ ಬಡವರು ಒಂದು ಎಕರೆ, ಎರಡು ಎಕರೆ ಮೂರು ಎಕರೆಯನ್ನು ಎನ್‌ಕ್ರೋಚ್ ಮಾಡಿಕೊಂಡಿದ್ದಾರೆ ಅದನ್ನು ಅವರಿಗೆ ರೆಗ್ಯುಲರೈಸ್ ಮಾಡಬೇಕೆನ್ನುವ ವಿಚಾರ ಮಾಡುತ್ತಿದ್ದೇವೆ. ಆದರೆ ಅರಣ್ಯ ಭೂಮಿ ಇದ್ದರೆ ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ ನಾವು ಏನೂ ಮಾಡುವ ಹಾಗೆ ಇಲ್ಲ ಅದಕ್ಕೆ ಇದರ ಬಗ್ಗೆಯೂ ಕೂಡ ವಿಚಾರ ಮಾಡುತ್ತೇವೆ ಇನ್ನೊಂದು ವಿಚಾರ ಹೇಳಬೇಕು ಅಂದರೆ ನಮ್ಮ ಎಲ್ಲರ ಅನುಭವಕ್ಕೂ ಬಂದಿರುವ ವಿಚಾರ ಅನೇಕ ಗುಡ್ಡಗಳನ್ನು ನಾವು ನೋಡುತ್ತಿದ್ದೇವೆ ಅಲ್ಲಿ ಏನೇನೂ ಬೆಳೆಯುವುದಕ್ಕೆ ಸಾಧ್ಯ ಇಲ್ಲ ನೀವು ಹೇಳಬಹುದು ಅಲ್ಲಿ ಅರಣ್ಯಗಳನ್ನು ಬೆಳೆಸುವುದಕ್ಕೆ ಸಾಧ್ಯ ಹೌದು ಅರಣ್ಯವನ್ನು ಬೆಳೆಸಬೇಕು, ಅದಕ್ಕೆ ದುಡ್ಡು ಬೇಕು. ಪ್ರಶ್ನೆ ಏನು ಅಂದರೆ ದುಡ್ಡು ಇಲ್ಲ ನಮ್ಮ ಹತ್ತಿರ ದುಡ್ಡು ಇಲ್ಲ. ಬ್ಯಾರನ್ ಆಗಿ ಗುಡ್ಡಗಳು ಉಳಿಯಬೇಕು ಅಥವಾ ಯಾರಾದರೂ ಬಂದಾಗ ಅವರಿಗೆ ಅದನ್ನು ಕೊಡಬೇಕು ಎಂಬ ವಿಚಾರ ಇದೆ. ಇವೊತ್ತು ನಾವು ಯಾವ ನಿರ್ಣಯಕ್ಕೂ ಬರುತ್ತಿಲ್ಲ. ಅಲ್ಲಿ ಏನು ಆಗುತ್ತಿದೆ ಅಂದರೆ ನಾವು ಮಾಡುತ್ತಿಲ್ಲ, ಎರಡನೆಯವರಿಗೂ ಮಾಡುವುದಕ್ಕೆ ಕೊಡುತ್ತಾ ಇಲ್ಲ. ನಾವು ಮಾಡುತ್ತೇವೆ ಎಂದು ಬಹಳ ಜನ ಮುಂದೆ ಬರುತ್ತಾರೆ. ನಮಗೆ ಇಷ್ಟು ವರ್ಷ ಕೊಡಿ ನಿಮಗೆ ಎಷ್ಟು ರಾಯಲ್ಟಿ ಕೊಡಬೇಕೋ ಕೊಡುತ್ತೇವೆ, ಮತ್ತು ನೀವು ಗಿಡವನ್ನು ಹೇಳಿದ ಹಾಗೆ ಬೆಳೆಸುತ್ತೇವೆ ಮತ್ತು ನೀವು ಹೇಳಿದ ಹಾಗೆ explott ಮಾಡುತ್ತೇವೆಂದು ಹೇಳುತ್ತಾರೆ. ನಾವು ಹಾಕತಕ್ಕಂತಹ ಶರತ್ತಿಗೆ ಒಪ್ಪಿಕೊಂಡು ಬರುತ್ತಾರೆ ಆದರೆ ನಾವು ಬೆಳೆಸುವುದಕ್ಕೆ ತಯಾರು ಇಲ್ಲ, ಎರಡನೆಯವರು ಬೆಳೆಸುವುದಕ್ಕೆ ಬಿಡುವುದಿಲ್ಲ

‘Dog in the manager policy’ಯಾಗಿ ಇವೊತ್ತು ಕರ್ನಾಟಕದಲ್ಲಿ ೧೫–೨೦ ಪರ್ಸೆಂಟ್ ಅರಣ್ಯ ಇರಬಹುದು, ನಿಜವಾಗಿ ಅರಣ್ಯ ೮–೧೦ ಪರ್ಸೆಂಟ್ ಇಲ್ಲ. ಈ ಸ್ಥಿತಿಗೆ ಬಂದಿರುವುದರಿಂದ ವರ್ಷಕ್ಕೊಮ್ಮೆ ಒಂದಲ್ಲ ಒಂದು ಕಡೆ ಕ್ಷಾಮ, ಡ್ರೌಟ್, ಮಳೆ ಇಲ್ಲ, ಜನ ಸಾಯುತ್ತಿದ್ದಾರೆ, ಅನುಕೂಲ ಇಲ್ಲ. ಊರು ಬಿಟ್ಟು ಓಡಿ ಹೋಗುತ್ತಾರೆ. ಊರು ಬಿಟ್ಟು ದೊಡ್ಡ ದೊಡ್ಡ ಊರನ್ನು ಸೇರುತ್ತಾರೆ. ಇಂತಹ ಪರಿಸ್ಥಿತಿ ಬರುತ್ತದೆ. ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಏನಾದರೂ ನಾವು ಮಾಡಬೇಕಾಗುತ್ತದೆ. ತಾವು ನಮಗೆ ಮಾರ್ಗದರ್ಶನ ಮಾಡಬೇಕೆಂದು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ. ಈ ನಾಲ್ಕು ತಿಂಗಳಲ್ಲಿ ಏನು ಸ್ವಲ್ಪ ಮಟ್ಟಿಗೆ ಸಾಧಿಸಿದ್ದೇವೆ ಅದು It is a drop in the ocean ಯಾರು ಹಿಂದೆ ಸಾಧಿಸಿಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಪ್ರಾಮಾಣಿಕವಾಗಿ ಸಾಧಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ ಇವೊತ್ತು ನಮ್ಮನ್ನು ಅಳೆಯುವುದಕ್ಕೆ ಮುಂಚೆ ನಮ್ಮ ಸಾಧನೆಯಿಂದ ಅಲ್ಲ, ನಾವು ಹೊರಟಿರತಕ್ಕಂಥ ದಾರಿಯನ್ನು ನೋಡಿ, ಅದು ಸರಿಯಾಗಿ ಇದೆಯೇ, ಯಾವ ದಾರಿಯಲ್ಲಿ ನಾವು ಹೋಗುತ್ತಿದ್ದೇವೆ. ಅದರಿಂದ ನಮ್ಮನ್ನು ನಮ್ಮ ಮಂತ್ರಿ ಮಂಡಲವನ್ನು ಅಳೆಯಬೇಕು ಎಂದು ಬಹಳ ನಮ್ರತೆಯಿಂದ ಹೇಳುತ್ತಿದ್ದೇನೆ. ಏಕೆಂದರೆ ಹೋಗುವ ದಾರಿ ಬಹಳ ದೂರ ಇದೆ ಮತ್ತು ಬಹಳ ಮೈಲಿಗಳನ್ನು ದಾಟಬೇಕಾಗಿದೆ. ನಿಜವಾಗಿ ಕೂಡ ಕರ್ನಾಟಕ ಕನ್ನಡ ನಾಡು, ಚಿನ್ನದ ಬೀಡು ಆಗಬೇಕಾದರೆ ಬಹಳಷ್ಟು ಕೆಲಸ ಕಾರ್ಯಗಳನ್ನು ಮಾಡಬೇಕಾಗಿದೆ. ಆದರೆ ಈ ನಾಲ್ಕು ತಿಂಗಳಲ್ಲಿ ನಾವು ಯಾವ ಮಾರ್ಗದಲ್ಲಿ ಹೋಗುತ್ತಿದ್ದೇವೆಯೋ ಆ ಮಾರ್ಗ ಸರಿಯಿದೆಯೋ ಇಲ್ಲವೋ ಅಥವಾ ಆ ಮಾರ್ಗದಲ್ಲಿ ನಾವೇನಾದರೂ ಗುರಿ ಮುಟ್ಟುತ್ತೇವೆಯೋ ಇಲ್ಲವೋ ಎನ್ನುವುದನ್ನು ಮಾತ್ರ ತಾವು ಅಳೆಯಬೇಕೆಂದು ಈ ಸಂದರ್ಭದಲ್ಲಿ ತಮಗೆ ಬಹಳ ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇವತ್ತು ನಾವು ಏನೂ ಮಾಡಿರಲಿಕ್ಕಿಲ್ಲ ಅದರ ಜೊತೆಯಲ್ಲಿ ನಾವು ಇನ್ನೊಂದು ಮಾಡಿಲ್ಲ. ಏನೂ ಮಾಡಿಲ್ಲ ಎಂದರೆ ಯಾವ ಹಗರಣ ಮಾಡಿಲ್ಲ, ಏನೂ ಮಾಡಿರಲಿಕ್ಕಿಲ್ಲ. ಯಾವ ಹಗರಣವನ್ನು ಈ ೪ ತಿಂಗಳಲ್ಲಿ ಮಾಡಿಲ್ಲ. ಮಾಡುವ ಮನಸ್ಸೂ ನಮಗೆ ಇಲ್ಲ. ಯಾವ ಸ್ಕ್ಯಾಂಡಲ್ಲನ್ನೂ ನಾವು ಮಾಡುವುದಕ್ಕೆ ಹೋಗಿಲ್ಲ. ನಾವು ಮಾಡಿರುವಂಥ ಸಾಧನೆ ಬಹಳ ಕಡಿಮೆ ಇರಬಹುದು ಹೋಗುವ ದಾರಿ ಬಹಳ ಉದ್ದ ಇದೆ ಸಮಸ್ಯೆಗಳು ಬಹಳ ಗಹನವಾಗಿದೆ. ಆದಕ್ಕಾಗಿ ಮಾನ್ಯ ಸಭೆಯ ಸದಸ್ಯರು ಹೊರಗಡೆ ಒಳಗಡೆ ಸಂಪೂರ್ಣ ಸಹಕಾರವನ್ನು ನೀಡಿದರೆ ಯಾವ ಗುರಿ ಮುಟ್ಟಬೇಕೆಂದು ವಿಚಾರ ಇಟ್ಟುಕೊಂಡು ನಾವು ಮುಂದೆ ಹೋಗುತ್ತಿದ್ದೇವೆಯೋ ಆ ಗುರಿಯನ್ನು ಇವತ್ತಲ್ಲ ನಾಳೆ ಮುಟ್ಟುತ್ತೇವೆನ್ನುವ ಭರವಸೆ ನನಗಿದೆ. ಇವತ್ತು ನಮಗೆ ಈ ದೇಶದ ಜನತೆ ನೀಡಿದ ವಿಶ್ವಾಸವೇ ನಮ್ಮ ಆಸ್ತಿ ಎಂದು ನಾವು ತಿಳಿದುಕೊಂಡಿದ್ದೇವೆ ಆ ಆಸ್ತಿಯಿಂದ ನಾಡನ್ನು ಬೆಳೆಸುವುದಕ್ಕೆ ಪ್ರಯತ್ನಿಸುತ್ತೇವೆ. ಈ ನಾಡಿನ ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಮತ್ತು ನಿಜವಾದ ಕನ್ನಡ ನಾಡಿನ ನಾಲ್ಕು ಕೋಟಿ ಜನರ ಆಶೀರ್ವಾದದಿಂದ ಜನಸಾಮಾನ್ಯರ ಏಳಿಗೆಗಾಗಿ ನಾವು ಶಕ್ತಿಮೀರಿ ಪ್ರಯತ್ನ ಮಾಡುತ್ತೇವೆನ್ನುವ ಭರವಸೆಯನ್ನು ನೀಡಿ ನಾನು ಸಭಾಪತಿಯವರಿಂದ ಅಪ್ಪಣೆ ಪಡೆಯುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ನಮ್ಮ ಮನಸ್ಸಿನಲ್ಲಿರುವ ಪ್ರಶ್ನೆಗಳಿಗೆ ಪರಿಹಾರ ಪಡೆಯುವ ಪ್ರಯತ್ನ ಮಾಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಭಾಷಣದ ಪ್ರಾರಂಭದಲ್ಲಿ ವಿಚ್‌ಹಂಟಿಂಗ್ ಮಾಡುವುದಕ್ಕೆ ಮನಸ್ಸು ಇಲ್ಲ. ಆ ಉದ್ದೇಶವೂ ಇಲ್ಲ ಎಂದು ಹೇಳಿದರು. ಹಿಂದಿನ ಸರ್ಕಾರವನ್ನು ದೋಷಾರೋಪಣೆಗೆ ಗುರಿ ಮಾಡುವ ಉದ್ದೇಶ ಎಂದಲ್ಲ, ಆದರೆ ಅದನ್ನು ಬಿಟ್ಟ ನಿಮ್ಮ ಭಾಷಣದಲ್ಲಿ ಏನೂ ಮಾಡಿಲ್ಲ. ಅದಕ್ಕಾಗಿ ನನಗೆ ವ್ಯಥೆಯಾಯಿತು. ನಿಮ್ಮ ಆಡಳಿತ ಸುಧಾರಣೆಯಲ್ಲಿ ನಾನು ತಮಗೆ ಯಶಸ್ಸನ್ನು ಕೋರುತ್ತೇನೆ ನಾನು ಮಾತನಾಡುತ್ತಾ ಒಂದು ಮಾತನ್ನು ಹೇಳಿದೆ. ಹಿಂದೆ ಬ್ರಿಟಿಷ್ ಆಡಳಿತ ಇದ್ದ ಕಾಲದಲ್ಲಿ ಯಾವುದಾದರೂ ಇಷ್ಯೂಸ್ ಬಂದರೆ ಅದನ್ನು ಬ್ರಿಟಿಷ್ ರಾಯಲ್ ಕಮಿಷನ್‌ಗೆ ರೆಫರ್ ಮಾಡುತ್ತಿದ್ದರು. ಹಾಗೆಯೇ ನೀವು ಒಂದು ಸ್ಕ್ರೀನಿಂಗ್ ಕಮಿಟಿ ಹಾಗೂ ಮತ್ತೊಂದು ಆಡಳಿತ ಸುಧಾರಣಾ ಸಮಿತಿಯನ್ನು ಇನ್ನು ಒಂದು ತಿಂಗಳಲ್ಲಿ ಮಾಡುತ್ತೇವೆಂದು ಹೇಳಿದಿರಿ. ಈ ಎರಡು ಸಮಿತಿಗಳಿಗೆ ಏನಾದರೂ ಒಂದು ಕಾಲಮಿತಿ, ನಿಯಮಗಳನ್ನು ಮಾಡಬೇಕಲ್ಲವೇ ? ಈ ಬಗ್ಗೆ ಟೈಮ್ ಬಾಂಡ್ ಪ್ರೋಗ್ರಾಮ್ ಹಾಕಿದ್ದೀರಾ ? ಪದೇ ಪದೇ ಹಿಂದಿನ ಸರ್ಕಾರ ಖಾಲಿ ಟ್ರೆಜರಿ ಬಿಟ್ಟಿತ್ತು ಎನ್ನುವ ಮಾತನ್ನು ಸದನದ ಹೊರಗೆ ಹಾಗೂ ಒಳಗೆ ಹೇಳಿದ್ದೀರಿ. ಆದರೆ ಮಾನ್ಯ ಹಣಕಾಸಿನ ಸಚಿವರು ಇಲ್ಲಿ ಕೊಟ್ಟಿರತಕ್ಕ ವಿವರಣೆಯಲ್ಲಿ ಈ ವಾದಕ್ಕೆ ಪೂರಕವಾದ ವಿವರಣೆ ಎಲ್ಲೂ ಇಲ್ಲ. ಬಾಯಿಮಾತಿನಲ್ಲಿ ಖಾಲಿ ಟ್ರೆಜರಿ ಬಿಟ್ಟಿದ್ದಾರೆಂದು ಹೇಳುವಾಗ ಹಿಂದಿನ ಸರ್ಕಾರ ಆಡಳಿತ ಬಿಟ್ಟು ಒಂದು ವರ್ಷದ ಮೇಲಾಯಿತು. ಈಗಲೂ ಖಾಲಿ ಟ್ರೆಜರಿ ಬಿಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಎಂದರೆ ಇದಕ್ಕೆ ಯಾರಾದರೊಬ್ಬರು ಹೊಣೆ ಆಗಲೇಬೇಕಲ್ಲವೇ ? ಯಾವುದಾದರೂ ಒಂದು ಕಾರ್ಯಕ್ರಮದ ರೂಪದಲ್ಲಿ ಇದನ್ನು ತಾವು ಕಂಡುಹಿಡಿಯು

ಬೇಕಾಗುತ್ತದಲ್ಲವೇ ? ಏಕೆಂದರೆ ನಮಗೆ ಬಿಟ್ಟು ಹೋಗಿರುವುದು ಖಾಲಿ ಟ್ರೆಜರಿ, ಆಡಳಿತದಲ್ಲಿನ ಶಿಥಿಲತೆ ಎಂದು ಹೇಳುತ್ತಿದ್ದೀರಿ. ಆಡಳಿತದಲ್ಲಿ ನಿಮ್ಮ ಪ್ರಯೋಗ ಸಫಲವಾಗಲಿ ಎಂದು ನಮ್ಮ ಇಚ್ಛೆಯೂ ಕೂಡಾ ತಾವು ಇಲ್ಲಾದರೂ ಇರಿ. ಅಲ್ಲಾದರೂ ಇರಿ, ನಮಗೆ ನಿಮ್ಮ ಬಗ್ಗೆ ತುಂಬಾ ಗೌರವ ಇದೆ. ಗುಲ್ಬರ್ಗ ಜಿಲ್ಲೆ ಬಹಳ ಹಿಂದುಳಿದಿದೆ ಎಂದಿದ್ದೀರಿ. ಗುಲ್ಬರ್ಗ ಎರಡು ಸಾರಿ ಈ ರಾಜ್ಯಕ್ಕೆ ಮುಖ್ಯಮಂತ್ರಿಗಳನ್ನು ಕೊಟ್ಟಿದೆ. ಡೆಲ್ಲಿಯ ಮಂತ್ರಿಮಂಡಲಕ್ಕೆ ಒಬ್ಬ ಸದಸ್ಯರನ್ನು ಅದೂ ತಮ್ಮನ್ನೇ ಕೊಟ್ಟಿದೆ. ಜಿಲ್ಲೆ ಹಿಂದುಳಿದಿರುವುದು ಆ ದೃಷ್ಟಿಯಿಂದಲೇ ಎಂದು ನಾನು ತಿಳಿದು ಕೊಂಡಿಲ್ಲ. ಮುಂದೆ ನೀವು ಏನು ಮಾಡಬೇಕೆಂಬ ನಿರ್ಧಾರವನ್ನು ಚೆನ್ನಾಗಿ ಮಾಡಿದ್ದೀರಿ. ಈ ಬಗ್ಗೆ ನಿಮಗೆ ಅಭಿನಂದಿಸುತ್ತೇನೆ. ಆ ಕಾರಣವೇ ಬಹುಶಃ ಪೊಲಿಟಿಕಲ್ ಇಂಟರ್ ಫಿಯರೆನ್ಸ್ ಆಗದಹಾಗೆ ಆಡಳಿತವನ್ನು ನಡೆಸತಕ್ಕ ಒಂದು ನಿರ್ಣಯಕ್ಕೆ ಬಂದಿದ್ದೀರಿ. ತುಂಬ ಸಂತೋಷ ಆದರೆ ಆರ್ಥಿಕ ಸುಧಾರಣೆ ಬಗ್ಗೆ ಹೇಳುತ್ತಾ ಎಕ್ಸೈಸ್ ರೆವಿನ್ಯೂ ವರ್ಷದಿಂದ ವರ್ಷಕ್ಕೆ ೫ ರಿಂದ ೬ ಕೋಟಿ ಜಾಸ್ತಿ ಆಗುತ್ತಾ ಇದೆ. ನೀವು ಕೊಟ್ಟ ಲೆಕ್ಕದ ಪ್ರಕಾರ ೧೯೭೫-೭೬ ರಿಂದ ೧೯೭೬-೭೭ಕ್ಕೆ ೧೮ ಕೋಟಿ ರೂಪಾಯಿ ಜಾಸ್ತಿ ಆಯಿತು.

೧೨-೪೫ ಪಿ ಯಂ.

೧೯೭೭-೭೮ಕ್ಕೆ ೩೭ ಕೋಟಿ ಜಾಸ್ತಿಯಾಗಿದೆ. ೧೯೭೮-೭೯ಕ್ಕೆ ೩೪ ಕೋಟಿ ಜಾಸ್ತಿಯಾಗಿದೆ. ಇದು ತಾವು ಕೊಟ್ಟಿರುವ ಲೆಕ್ಕ. ೧೯೭೯-೮೦ರಲ್ಲಿ ೬೫ ಕೋಟಿ ಜಾಸ್ತಿಯಾಗಿದೆ. ಈ ಸಾರಿ ನಿಮ್ಮದು ಮೈನಸ್ ೨೬ ಕೋಟಿ ಕಳೆದವರ್ಷಕ್ಕಿಂತ ಕಡಿಮೆ. ತಾವೇನು ೩೬೦ ಕೋಟಿ ಬರಬಹುದೆಂದು ಅಂದಾಜ ಮಾಡಿದ್ದೀರಿ. ಅದರಲ್ಲಿ ೬೦ ಕೋಟಿ ರೂಪಾಯಿ ನಷ್ಟವಾಗಿದೆಯೆಂದು ಹೇಳಿದ್ದೀರಿ. ಬಹುಶಃ ಅದು ಸೇರಿಕೊಂಡರೆ ೪೨೦ ಕೋಟಿ ಯಾಗುತ್ತದೆ, ೪೨೦ ಕೋಟಿ ಯಾಗಬಾರದು ಅದು ಬೇಡವೆಂದು ವಜಾ ಮಾಡಿದ್ದೀರೋ ಏನೋ ಗೊತ್ತಿಲ್ಲ. ೩೬೦ ಕೋಟಿ ಕೊಡಿ, ೪೦ ಕೋಟಿಗಿಂತ ಅದು ಹೆಚ್ಚು ಹೋಗುವುದಿಲ್ಲ. ಚುನಾವಣೆ ಮುನ್ನ ಮಾಡಬೇಕೆಂದು ನಿರ್ಧಾರ ಮಾಡಿ ಒಂದು ಬ್ಲಾಂಕೆಟ್ ಹೇಳಿಕೆಯನ್ನು ತಾವು ಮುಖ್ಯಮಂತ್ರಿಗಳಾಗಿ ಹೇಳಿದ್ದೀರಿ. ಅವ್ಯವಹಾರ ನಡೆದಿದೆ ಎಂದು ಮುಗುಂ ಆಗಿ ಹೇಳಿ ಇಲ್ಲಿ ಏನೋ ನಡೆದಿದೆ ಏನೋ ಪರಿವರ್ತನೆಯಾಯಿತು. ೧೦ ಸಾವಿರ ಸೈಟುಗಳನ್ನು ಹಂಚುತ್ತೇವೆಂದು ಹೇಳಿದರು ಸೈಟುಗಳನ್ನು ಹಂಚಿಲ್ಲ, ಅರ್ಬನ್ ಸೀಲಿಂಗ್ ಆಕ್ಟ್‌ಗೆ ವಿರುದ್ಧವಾಗಿದೆ. ಹೌಸಿಂಗ್ ಸೊಸೈಟಿಗಳು ಬೇಕಾದಷ್ಟು ಅವ್ಯವಹಾರಗಳನ್ನು ಮಾಡಿವೆ ಎಂದು ತಾವು ಹೇಳಿದ್ದೀರಿ. ಕೋರ್ಟ್ ಇಂಟರ್‌ಫಿಯರೆನ್ಸ್ ಎಷ್ಟಾಗಿವೆ, ಸರ್ಕಾರ ಪರಿವರ್ತನೆ ಮಾಡಿರುವುದು ಎಷ್ಟಾಗಿವೆ ಎಂಬುದನ್ನು ದಯಮಾಡಿ ಸದನಕ್ಕೆ ವಿವರ ಇಡಿ, ಅದು ನನಗೂ ಗೊತ್ತಿಲ್ಲ ನಿಮ್ಮಹಾಗೆ. ಈ ವಿಚಾರವನ್ನು ತಿಳಿದುಕೊಳ್ಳಬೇಕೆನ್ನುವ ಆಸಕ್ತಿಯಿದೆ. ಸರ್ಕಾರದವರು ಇದನ್ನು ಕೊಟ್ಟರೂ ಎಂದು ಮೋಜು ಕುಟ್ಟುವುದಕ್ಕಿಂತ ಶಾಸನದಲ್ಲಿ ಎಷ್ಟರ ಮಟ್ಟಿಗೆ ಇಂಟರ್‌ಫಿಯರೆನ್ಸ್ ಆಗಿ ಕೋರ್ಟಿನಲ್ಲಿ ಕೊಟ್ಟ ಆದೇಶವನ್ನು ಪಾಲನೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿದೆ ಎನ್ನುವುದನ್ನು ದಯಮಾಡಿ ಇಡಬೇಕು. ಮತ್ತೊಂದು ವಿಚಾರ ಪುನಃ ಸರ್ಕಾರಿ ನೌಕರರಿಗೆ ಅವರ ಕುತ್ತಿಗೆಯ ಮೇಲೆ ಕತ್ತಿ ನೇತಾಡುವ ಹಾಗೆ ಕತ್ತಿ ಇಟ್ಟಿದ್ದೀರಿ. ಮಾರ್ಚ್ ೩೧,೧೯೮೧ಕ್ಕೆ ತೀರ್ಮಾನ ಮಾಡಬೇಕಾದರೆ ಈ ವರ್ಷದಲ್ಲಿ ಅದನ್ನು ಏತಕ್ಕೆ ಹೇಳಿದ್ದೀರಿ ? ಅದರ ಉದ್ದೇಶವೇನು ? ಅದು ನನಗೆ ಅರ್ಥವಾಗಲಿಲ್ಲ, ಅದರ ವಿವರಣೆ ಕೊಡುವುದಾದರೆ ಕೊಡಿ. ಮಾರ್ಚ್ ೩೧,೧೯೮೧ಕ್ಕೆ ಮಾಡುವ ನಿರ್ಣಯವನ್ನು ಈ ವರ್ಷದ ಆಯವ್ಯಯದಲ್ಲಿ ಮತ್ತು ರಾಜ್ಯಪಾಲರ ಭಾಷಣದಲ್ಲಿ ಏತಕ್ಕೆ ಪ್ರಸ್ತಾಪವಾಯಿತೋ ಅದು ನನಗೆ ಗೊತ್ತಿಲ್ಲ. ಮುಖ್ಯವಾಗಿ ರಾಜ್ಯದಲ್ಲಿ ಏಪ್ರಿಲ್ ತಿಂಗಳಾದರೂ ಇದುವರೆಗೆ ಮಳೆಯ ಸೂಚನೆಗಳು ಕಾಣುತ್ತಿಲ್ಲ ಸ್ವಲ್ಪಮಟ್ಟಿಗೆ ಕ್ಷಾಮದ ಸೂಚನೆಗಳು ಕಾಣುತ್ತಿವೆ. ಇದರ ಬಗ್ಗೆ ಏನಾದರೂ ಅಸೆಸ್‌ಮೆಂಟ್ ಮಾಡಿ ಯಾವಾಗ ಮಳೆ ಬಂದಿದೆ, ಏನು ಪರಿಸ್ಥಿತಿ ಇದೆ ತಾವು ದೆಹಲಿಗೆ ಹೋಗತಕ್ಕವರು ಇದ್ದೀರಿ, ಆ ಸಂದರ್ಭದಲ್ಲಿ ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಜೊತೆಯಲ್ಲಿ ಮುಂದಾಲೋಚನೆ ಮಾಡುತ್ತೀರಾ ? ಮುಂದೆ ಬಜೆಟ್ ಅಧಿವೇಶನ ಯಾವಾಗ ಆಗುತ್ತದೋ ನನಗೆ ಗೊತ್ತಿಲ್ಲ, ಅದರ ಸೂಚನೆಯೂ ಗೊತ್ತಿಲ್ಲ. ಮೇ, ಜೂನ್ ಆದಮೇಲೆ ಅಧಿವೇಶನ ಮಾಡುವುದಾದರೆ, ರಾಜ್ಯ ಸರ್ಕಾರ ಒಂದು ಅಸೆಸ್‌ಮೆಂಟ್ ಮಾಡಿ ತಾವು ಕೇಂದ್ರ ಸರ್ಕಾರದ ಜೊತೆಯಲ್ಲಿ ಚರ್ಚೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಾವೇರಿ ನದಿ ನೀರಿನ ವಿಚಾರದಲ್ಲಿ ತಾವು ನಾಳೆ ಮುಖ್ಯವಾದ ಚರ್ಚೆಗೆ ಹೋಗುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ಈ ಸದನವನ್ನು ಸಂಪೂರ್ಣವಾಗಿ ವಿಶ್ವಾಸಕ್ಕೆ ತೆಗೆದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಸೂಕ್ಷ್ಮವಾಗಿ ಕೆಲವು ವಿಚಾರವನ್ನು ಅಥವಾ ವಿವರಣೆಗಳನ್ನು ಹೇಳುವುದಕ್ಕೆ ಸಾಧ್ಯವಿಲ್ಲದಿದ್ದರೂ ನೀವು ತೆಗೆದುಕೊಂಡಿರುವ ನಿಲುವು ಸರಿಯಾಗಿದೆ

ಎನ್ನುವ ಭಾವನೆ ನಮಗಿದೆ. ನಾಳೆ ನಡೆಯತಕ್ಕ ಚರ್ಚೆಯಲ್ಲಿ ನಿಮಗೆ ಯಶಸ್ಸು ಸಿಗಲಿಯೆಂದು ನಾನು ರಾಜ್ಯದ ಜನತೆಯ ಪರವಾಗಿ ಹಾರೈಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಒಂದು ಹೊಸ ದಿಕ್ಕಿನಲ್ಲಿ ಹೊಸ ರೀತಿಯಲ್ಲಿ ಹೆಜ್ಜೆ ಇಡುವಂತಹ ಪ್ರಯತ್ನ ಕಾಣುತ್ತಾ ಇದೆ ಅವು ಯಶಸ್ವಿಯಾಗಲಿ ಧೈರ್ಯವಾಗಿ ಹೆಜ್ಜೆ ಮುಂದೆ ಇಡಲಿಯೆಂದು ಅವರಿಗೆ ಹೇಳುತ್ತೇನೆ. ಅವರು ಮಾತನಾಡುವ ಸಂದರ್ಭದಲ್ಲಿ ಯಾವುದಾದರೂ ಒಂದು ಸಮೂಹದ ಬಗ್ಗೆ ಒಂದು ಶಬ್ದವನ್ನು ಮಾತನಾಡಲಿಲ್ಲವೆಂದರೆ ಅದು ರೈತರ ಸಮೂಹ. ಅದಕ್ಕೋಸ್ಕರ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಸದನದಲ್ಲಿ ರೈತರ ಬಗ್ಗೆ ಬಹಳ ದೀರ್ಘವಾಗಿ ಚರ್ಚೆಯಾಗಲಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಎರಡು ದಿವಸಗಳ ಕಾಲ ಸದನವನ್ನು ಮುಂದೂಡಿ ರೈತ ಸಮುದಾಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ರೈತರು ಸಹಕಾರ ಸಂಘಗಳ ಸಾಲವನ್ನು ಕಟ್ಟುವಹಾಗೆ ಇಲ್ಲವೆಂದು ತಿಳಿದುಕೊಂಡಿದ್ದಾರೆ. ಇದು ನಾವು ನಮ್ಮ ಕ್ಷೇತ್ರಕ್ಕೆ ಹೋದ ಮೇಲೆ ಗೊತ್ತಾಗುತ್ತದೆ. ಮತ್ತೆ ನಮಗೆ ಸಾಲ ಸಿಗುತ್ತದೆಂದು ಕೈಕಟ್ಟಿ ಕುಳಿತಿದ್ದಾರೆ. ಮಳೆ ಬಂದು ಬಿತ್ತನೆ ಸಮಯ ಬರುವುದಕ್ಕೆ ಮೊದಲು ರೈತರಿಗೆ ಸಾಲದ ವ್ಯವಸ್ಥೆ ಆಗಬೇಕಾಗಿದೆ. ನಾವು ಏನು ಉತ್ತರ ಕೊಡಬೇಕು ? ಈ ದೃಷ್ಟಿಯಿಂದ ರೈತರಿಗೆ ನಿಮ್ಮ ಬಾಯಿಂದಲೇ ಈ ಮಾತು ಬರಲಿ. ಶಾಂತರೀತಿಯಿಂದ ಅವರು ರೈತಾಪಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಎರಡನೆಯದು. ನಾವು ಮಾತನಾಡುವಾಗ ಈ ಸರ್ಕಾರದ ಅನೇಕ ಲೋಪ ದೋಷಗಳು, ಅದು ಹಿಂದಿನ ಸರ್ಕಾರಕ್ಕೂ ಸಂಬಂಧಪಟ್ಟಿರಬಹುದು ಅವುಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೆವು, ಒಂದು ಒತ್ತಾಯ ನಾನು ಮಾಡುತ್ತೇನೆ...

ಅಧ್ಯಕ್ಷರು.— ಸದಸ್ಯರು ಕ್ಲಾರಿಫಿಕೇಷನ್ ಕೇಳುತ್ತಿದ್ದಾರೆ ಮತ್ತು ಮುಖ್ಯ ಮಂತ್ರಿಗಳು ಉತ್ತರ ಹೇಳಬೇಕು. ಮಾನ್ಯ ಸದಸ್ಯರು ಹೀಗೆ ಮಧ್ಯೆ ಬಂದು ಮುಖ್ಯ ಮಂತ್ರಿಯವರಿಗೆ ತೊಂದರೆ ಕೊಡಬಾರದು. These are some of the basic courtesies which we are expected to offer to other Hon. Members of the House. The Hon. Chief Minister has to reply. I do not want the Hon. Chief Minister to be disturbed by the other Hon. Members.

ಶ್ರೀ ಬಿ. ಎಸ್. ಯಡಿಯೂರಪ್ಪ.— ತಾವು ನಿಜವಾಗಿಯೂ ಇಂತಹ ಅವ್ಯವಹಾರಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎಂದರೆ, ನಾನು ಒಂದು ಮಾತು ಹೇಳಿದ್ದೆ. ಕುದುರೆಗುಂಡಿ ಬಳಿ ಮಾಲಂದೂರು ಗ್ರಾಮದಲ್ಲಿ ನೂರು ಏರೆ ದಟ್ಟ ಅರಣ್ಯವನ್ನು ಸಂದೂರಿನ ತಾರಾನಗರದ ಮೈನಿಂಗ್ ಕಂಪನಿಗೆ ವರ್ಗಾವಣೆ ಮಾಡುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಸರಿಯೋ, ತಪ್ಪೋ ಎಂದು ತಾವು ಯೋಚನೆ ಮಾಡಬೇಕು. ಅಲ್ಲಿ ಒಂದು ಕೋಟಿಗಿಂತ ಹೆಚ್ಚು ಬೆಲೆಯ ೫ ಸಾವಿರ ಸಾಗುವಾನಿ ಮರಗಳು ಇವೆ. ಇದರ ಬಗ್ಗೆ ಒಂದು ಸದನ ಸಮಿತಿಯನ್ನು ಮಾಡಿ ತನಿಖೆ ಮಾಡಿಸಬೇಕು. ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದು ನನಗೆ ಮನದಟ್ಟಾಗಿರುವುದರಿಂದ ತಮ್ಮ ಗಮನಕ್ಕೆ ತರುವಂಥ ಪ್ರಯತ್ನ ಮಾಡಿದ್ದೇನೆ. ಹಿಂದಿನ ಸರ್ಕಾರ ಮಾಡಿದಂಥ ಭ್ರಷ್ಟಾಚಾರ ಪ್ರಕರಣಗಳು ಪುನರಾವೃತ್ತಿ ಆಗದಂತೆ, ತಡೆಮಾಡುವಂಥ ಒಂದು ದಿಟ್ಟ ಹೆಜ್ಜೆಯನ್ನು ಇಡುತ್ತೀರಾ ? ಇನ್ನು ಈ ಬಗರ್ ಹುಕುಂ ಸಾಗುವಳಿ ಮಾಡುವ ಬಗ್ಗೆ ತಾವು ಹೇಳಿದ್ದೀರಿ. ಲಕ್ಷಾಂತರ ಜನ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಮೀನಿನಲ್ಲಿ ಒಂದೆರಡು ಎಕರೆ ಬಗರ್ ಹುಕುಂ ಸಾಗುವಳಿಯನ್ನು ಕಳೆದ ೨೫–೩೦ ವರ್ಷಗಳಿಂದ ಮಾಡುತ್ತಿದ್ದಾರೆ. ತಮಗೆ ಗೊತ್ತಿರುವ ಹಾಗೆ ಅರಣ್ಯ ಇಲಾಖೆಗೆ ರೆವಿನ್ಯೂ ಜಮೀನನ್ನು ವರ್ಗಾವಣೆ ಮಾಡುತ್ತಿದ್ದೀರಿ ಹಿಂದಿನ ಮುಖ್ಯ ಮಂತ್ರಿಗಳು ಇದ್ದಂಥ ಸಮಯದಲ್ಲಿ ಇದರ ಬಗ್ಗೆ ಚರ್ಚೆಯಾದಾಗ ನಾವು ಲಕ್ಷಾಂತರ ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುತ್ತಿರುವುದರಿಂದ ಅರಣ್ಯ ಇಲಾಖೆಯಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುವ ಬಗ್ಗೆ ಪರ್ಮಿಷನ್ ತೆಗೆದುಕೊಂಡು ಕನ್‌ಫರ್ಮೇಷನ್ ಮಾಡುವ ಬಗ್ಗೆ ಕೇಂದ್ರ ಸರ್ಕಾರದಿಂದ ನೀವೇ ತೆಗೆದುಕೊಳ್ಳುವಂಥ ಪ್ರಯತ್ನ ನಡೆಯುತ್ತಿತ್ತು. ಆ ತರಹ ಒಂದೂವರೆ ಲಕ್ಷ ಬಡ ಕುಟುಂಬದವರು ಇದ್ದಾರೆ. ಅದಕ್ಕೋಸ್ಕರ ಆ ಬಡವರಿಗೆ ಸಹಾಯವಾಗಲು ಬಗರ್‌ಹುಕುಂ ಸಾಗುವಳಿ ಮಾಡುವುದನ್ನು ಕನ್‌ಫರ್ಮ್ ಮಾಡುವ ದೃಷ್ಟಿಯಿಂದ ಕೇಂದ್ರ ಸರ್ಕಾರದಿಂದ ಇದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ದಿಟ್ಟ ಹೆಜ್ಜೆ ಇಡುತ್ತೀರಾ ? ಈ ಮೂರು ವಿಷಯಗಳ ಬಗ್ಗೆ ನಾನು ತಮ್ಮಿಂದ ಉತ್ತರ ಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ.— ತಾವು ಸ್ವಚ್ಛ ಮತ್ತು ದಕ್ಷ ಸರ್ಕಾರವನ್ನು ಕೊಡತಕ್ಕಂಥ ದೃಢ ಮನಸ್ಸು ಮಾಡಿದ್ದೀರಿ. ಇದರ ಬಗ್ಗೆ ನನಗಂತೂ ಸಂತೋಷ ಇದೆ. ತಾವು ಲೋಕಸಭೆಯಲ್ಲಿ

ಸದಸ್ಯರಾಗಿದ್ದಾಗ ಬಜೆಟ್ ಬಂದಾಗ ಒಂದು ಮಾತನ್ನು ಬಳಕೆ ಮಾಡಿದ್ದೀರಿ. ಅದನ್ನು ತಮಗೆ ಜ್ಞಾಪಕ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಜಮೀನ್ ಚೋರ್' ಎನ್ನತಕ್ಕಂಥ ಮಾತನ್ನು ಲೋಕಸಭೆಯಲ್ಲಿ ತಾವು ಉಪಯೋಗಿಸಿದ್ದೀರಿ. ಈಗ ತಾವು ಉತ್ತರ ಕೊಡುತ್ತಾ witchunting ದಲ್ಲಿ ನಂಬಿಕೆ ಇಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ಅದನ್ನು ಕೂಡ ನಾನು ಒಪ್ಪುತ್ತೇನೆ. ಆದರೆ ಕಾನೂನು ತನ್ನದೇ ಆದಂಥ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ ಎಂಬ ಮಾತನ್ನು ತಾವು ಹೇಳಿದ್ದೀರಿ. ಆದರೆ ಕಾನೂನನ್ನು ಜಾರಿ ಮಾಡತಕ್ಕಂಥ ಸ್ಥಾನದಲ್ಲಿ ಕುಳಿತಿರತಕ್ಕಂಥ ತಾವು ಸುಮ್ಮನೆ ಇದ್ದರೆ ಕಾನೂನು ತನ್ನಷ್ಟಕ್ಕೆ ತಾನೇ ಜಾರಿಯಾಗುವುದಿಲ್ಲ. ಆದ್ದರಿಂದ ತಾವು ಲೋಕಸಭೆಯಲ್ಲಿ ಬಳಸಿರತಕ್ಕ ಮಾತನ್ನು, ಪದವನ್ನು ತಮಗೆ ಜ್ಞಾಪಿಸಿದ್ದೇನೆ. ಇನ್ನೊಂದು ಮಾತು ಎಂದರೆ, ತಮಗೂ ಅವರಿಗೂ ಇರತಕ್ಕಂಥ, ಹಿಂದಿನ ಮುಖ್ಯ ಮಂತ್ರಿಗಳ ಜೊತೆ ಇರತಕ್ಕಂಥ ಬಾಂಧವ್ಯ ಈಗ ಬೇಕಾಗಿಲ್ಲ. ಏನು ಅನ್ಯಾಯ ನಡೆದಿದೆ, ಏನು ಅಕ್ರಮ ನಡೆದಿದೆ, ಆ ಅಕ್ರಮದ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾದದ್ದು ಈ ರಾಜ್ಯದ ಜನರ ಹಿತದೃಷ್ಟಿಯಿಂದ ಮತ್ತು ತಮ್ಮ ಸ್ವಚ್ಛ ಮತ್ತು ದಕ್ಷ ಸರ್ಕಾರ ಎನ್ನತಕ್ಕಂಥ ದೃಷ್ಟಿಯಿಂದ ಅತೀ ಅವಶ್ಯಕ ಇದೆ. ಆದ್ದರಿಂದ law will tak its own course. ಎಂದು ಸುಮ್ಮನೆ ಕುಳಿತುಕೊಳ್ಳತಕ್ಕಂಥದ್ದರಲ್ಲಿ ಏನೂ ಅರ್ಥ ಇಲ್ಲ. ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನತಕ್ಕಂಥ ಮಾತನ್ನು ದಯವಿಟ್ಟು ತಿಳಿಸಬೇಕು. ತಮಗೆ ಒಂದು ಉದಾಹರಣೆಯನ್ನು ಕೊಡುವುದಾದರೆ, ಒಂದು ರೆಸಿಡೆನ್ಷಿಯಲ್ ಲೋಕಾಲಿಟಿಯನ್ನು ಕಮರ್ಶಿಯಲ್ ಆಗಿ ಕನ್ವರ್ಟ್ ಮಾಡಿರತಕ್ಕದ್ದು. ಇದು ಕೂಡ ಸಣ್ಣ ವ್ಯವಹಾರ ಅಲ್ಲ. ಹಿಂದೆ ದ್ದಂಥ ಸರ್ಕಾರದವರು ತಮಗೆ ಮಿತ್ರರಿರಬಹುದು, ಶತ್ರು ಇರಬಹುದು. ಅದು ಬೇರೆ ವಿಚಾರ. ಈ ರಾಜ್ಯದ ಹಿತವನ್ನು ಕಾಪಾಡತಕ್ಕಂಥ ದೃಷ್ಟಿಯಿಂದ. ಅಂತಹವರ ಮೇಲೆ ಕೂಡ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನತಕ್ಕಂಥ ಮಾತನ್ನು ತಾವು ದಯವಿಟ್ಟು ತಿಳಿಸಬೇಕು. ಮತ್ತು ಎಕ್ಸೈಸ್ ವಿಚಾರದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅನೇಕ ಲೋಪದೋಷಗಳು ನಡೆದಿವೆ ಎಂಬ ಮಾತನ್ನು ಹೇಳಿದ್ದೀರಿ ಈ ಸೆಕೆಂಡ್ಸ್ ಯಾವ ರೀತಿ ಆಗುತ್ತದೆ ಎಂಬ ಮಾತನ್ನು ತಾವು ಹೇಳಿದ್ದೀರಿ. ಇದೆಲ್ಲಾ ನಡೆದಿರತಕ್ಕಂಥ ಲೋಪದೋಷಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ದಯವಿಟ್ಟು ತಾವು ವಿವರಣೆ ಕೊಡಬೇಕೆಂದು ನಾನು ತಮ್ಮಲ್ಲಿ ಮಾನ್ಯ ಅಧ್ಯಕ್ಷರ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಅವರ ಸಾಧನೆಯ ಪಟ್ಟಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ ನಂತರ ನಮ್ಮನ್ನು ಕೇಳಿದ್ದಾರೆ, ಒಳಗೂ ಸಹಕಾರ ಕೊಡಬೇಕು, ಮತ್ತೆ ಹೊರಗೂ ಸಹಕಾರ ಕೊಡಬೇಕು ಎಂದು. ನನಗೇನೋ ಆಸೆ ಇದೆ ಮುಖ್ಯ ಮಂತ್ರಿಗಳಿಗೆ ಸಹಕಾರ ಕೊಡಬೇಕು ಎಂದು. ಆದರೆ, ಇದಕ್ಕಿಂತ ಮುಂಚಿತವಾಗಿ, ಈ ಸದನದಿಂದ ನಾವು ನಾಳೆ ಆಚೆ ಹೋದಾಗ, ನಮ್ಮನ್ನು ಯಾರು ಕಳುಹಿಸಿದ್ದಾರೋ ಅವರು ಕೆಲವು ಪ್ರಶ್ನೆಗಳನ್ನು ಕೇಳುತ್ತಾರೆ. ರೈತರ ಸಮಸ್ಯೆ ಬಗ್ಗೆ ಮುಖ್ಯ ಮಂತ್ರಿಗಳು ಒಳ ಮನಸ್ಸನ್ನು ಬಿಚ್ಚಿ ಹೇಳಿಲ್ಲ. ಸಾಲದ ಬಗ್ಗೆ ಏನು ಮಾಡುತ್ತಾರೆಂದು ಹೇಳಲಿಲ್ಲ ಅದರಲ್ಲೂ ಕೇಂದ್ರ ಸರ್ಕಾರ ಪ್ರಕಟಣೆ ಮಾಡಿದಮೇಲೆ, ಆ ದಿಕ್ಕಿನಲ್ಲಿ ಈ ಸರ್ಕಾರ ಏನಾದರೂ ಕೆಲಸ ಮಾಡುತ್ತಾ ಇದೆಯೋ, ಕೇಂದ್ರ ಸರ್ಕಾರ ಯಾವುದರ ಬಗ್ಗೆ ರಾಜ್ಯ ಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡಬೇಕೆಂದು ಹೇಳಿದೆ. ಸಹಕಾರಿ ಸಾಲದ ಬಗ್ಗೆ, ಈ ದಿಕ್ಕಿನಲ್ಲಿ ಈ ಸರ್ಕಾರ ಆಲೋಚನೆ ಮಾಡಿದೆಯೋ ಎನ್ನತಕ್ಕಂಥ ಪ್ರಶ್ನೆಯನ್ನು ನಮ್ಮ ಮತದಾರರು ಕೇಳುತ್ತಾರೆ. ಕೇಂದ್ರ ಸರ್ಕಾರದ ಜೊತೆ ಮಾತುಕತೆ ಮಾಡುವವರೆಗೆ, ಕಾನೂನು ಬಾಹಿರವಾಗಿ ಜಪ್ತಿ ಕಾರ್ಯಕ್ರಮ ವಸೂಲಿ ಕಾರ್ಯಕ್ರಮ ನಡೆಯುತ್ತದೆ ಎಂಬುದನ್ನು ಮುಖ್ಯ ಮಂತ್ರಿಗಳು ಹೇಳಿದರೋ ಎಂದು ಕೇಳುತ್ತಾರೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಸ್ಪಷ್ಟಪಡಿಸಬೇಕು.

ಶ್ರೀ ವಾಟಾಳ್ ನಾಗರಾಜ್.— ಮುಖ್ಯ ಮಂತ್ರಿಗಳಿಗೆ ಕೆಲವು ವಿಚಾರಗಳನ್ನು ಕೇಳುವುದಕ್ಕೆ ಮುಂಚೆ, ಚಾಮರಾಜನಗರಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಕೈಗೊಳ್ಳಲಾಗುತ್ತದೆಂದು ಭರವಸೆ ಕೊಟ್ಟಿದ್ದಾರೆ. ೧೯೮೬ನೇ ಇಸವಿಗೆ ಕಾವೇರಿ ಯೋಜನೆ ಬರಬೇಕೆಂದು ಸತತವಾಗಿ ಹೋರಾಟ ಮಾಡುತ್ತಿದ್ದೆವು. ಈ ಕಾರ್ಯ ಕೈಗೊಂಡಿರುವುದಕ್ಕಾಗಿ ಮುಖ್ಯ ಮಂತ್ರಿಗಳಿಗೆ ಹಾಗೂ ಹಣಕಾಸಿನ ಸಚಿವರಿಗೆ ತಮ್ಮ ಮೂಲಕ ಅಭಿನಂದನೆ ಸಲ್ಲಿಸುತ್ತೇನೆ. ಮತ್ತೆ ಮುಖ್ಯ ಮಂತ್ರಿಗಳು ಆಡಳಿತ ಸುಧಾರಣೆಯ ಬಗ್ಗೆ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಆದರೆ ೫ ವರ್ಷಗಳ ಕಾಲ ಈ ಮಂತ್ರಿ ಮಂಡಲ ಉಳಿಯತಕ್ಕಂಥ ಭದ್ರತೆ ಬಗ್ಗೆ ಸ್ವಲ್ಪ ಆತಂಕ ಬರುತ್ತಿದೆ. ನಾನು ಈ ಸರ್ಕಾರ ಇರಬೇಕೆಂದು ಹೇಳುತ್ತೇನೆ ಆದರೆ ನಿನ್ನೆ ೧೦೭ ಜನರ ಸಹಿ ಸಂಗ್ರಹಣೆ ಶುರುವಾಗಿದೆ. ಅವರು ಅನೇಕ ರಚನಾತ್ಮಕ ವಿಚಾರಗಳನ್ನು ಹೇಳಿದ್ದಾರೆ...

ಅಧ್ಯಕ್ಷರು.— ನಿಮಗೆ ಅವಕಾಶ ಕೊಟ್ಟಿರುವುದು, ಮುಖ್ಯ ಮಂತ್ರಿಗಳ ಉತ್ತರದಿಂದ ಉದ್ಭವಿಸಿರತಕ್ಕ ಕೆಲವು ವಿಚಾರಗಳಿಗೆ ಕ್ಲಾರಿಫಿಕೇಷನ್ ಕೇಳಿ ಎಂದು ನೀವು ಹೊಸ ಭಾಷಣ ಮಾಡು ವುದಕ್ಕೆ ಅವಕಾಶ ಕೊಟ್ಟಿಲ್ಲ.

ಶ್ರೀ ವಾಟಾಳ್ ನಾಗರಾಜ್.— ನಾನು ಅವರು ಇರಬೇಕೆಂಬ ಇಚ್ಛೆಯುಳ್ಳವನು. ಅವರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅದನ್ನು ಆಡಳಿತದಲ್ಲಿ ನಡೆಸಬೇಕು. ಇವರ ೫ ವರ್ಷಗಳ ಅವಧಿ ಯಲ್ಲಿ ಸಮಗ್ರವಾಗಿ ಹೊಸ ಆಡಳಿತವನ್ನು ಕೊಡಲಿ, ನಾನು ಸ್ವಾಗತ ಮಾಡುತ್ತೇನೆ. ಆದರೆ ಅವರಲ್ಲಿ. ೧೭೭ ಜನರು ಸಹಿ ಮಾಡಿರತಕ್ಕ ಪಟ್ಟಿ ಹೋಗಿದೆ...

ಅಧ್ಯಕ್ಷರು.— ಈ ಸರ್ಕಾರ ಭದ್ರವಾಗಿರುತ್ತದೆ, ಅದರ ಬಗ್ಗೆ ಕಳವಳ ಬೇಡ. ಕ್ಲಾರಿಫಿಕೇಷನ್ ಕೇಳುವ ಹಾಗಿದ್ದರೆ ಕೇಳಿ.

ಶ್ರೀ ವಾಟಾಳ್ ನಾಗರಾಜ್.— ತಾವು ಏನು ಸ್ಕ್ರೀನಿಂಗ್ ಕಮಿಟಿ ಮಾಡುತ್ತೀರಿ, ಈ ಸಮಿತಿ ಬರೀ ವರದಿ ಕೊಡತಕ್ಕ ಸಮಿತಿಯೋ ಅಥವಾ ಬರೀ ಅರ್ಜಿ ಹಾಕತಕ್ಕ ಸಮಿತಿಯೋ ? ಇದಕ್ಕೆ ಕಾನೂನುಬದ್ಧವಾಗಿ ಏನೇನು ಅಧಿಕಾರ ಕೊಡುತ್ತೀರಿ ? ಮೊನ್ನೆ ಸರ್ಕಾರಿ ನೌಕರರು ಸತ್ಯಾಗ್ರಹ ಮಾಡಿದರು. ಅವರು ತಮ್ಮ ಬೇಡಿಕೆಗಳನ್ನು ಒತ್ತಾಯ ಮಾಡಿ, ಮುಷ್ಕರ ಮಾಡಿದರು. ಅವರಲ್ಲಿ ಎ ಮತ್ತು ಬಿ ವರ್ಗದ ನೌಕರರಿಗೆ ಮೂರು ದಿವಸಗಳ ಸಂಬಳ ನೀಡಿದೆ. ಇವರಿಗೆ, ಸತ್ಯಾಗ್ರಹದ ಅವಧಿಯ ಮೂರು ದಿನಗಳ ಸಂಬಳವನ್ನು ಕೊಡಬೇಕು. ಇದರಿಂದ ಈ ನೌಕರರಿಗೆ ತೊಂದರೆ ಯಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು ತಮ್ಮ ಹತ್ತಿರ ಬಂದು ಒಂದು ವಿಚಾರವನ್ನು ಹೇಳಿದ್ದೆ. ಬೆಳಗಾವಿ ನಗರಸಭೆ ಚುನಾವಣೆಯನ್ನು ತಾವು ಒಂದು ಹಿತದೃಷ್ಟಿಯಿಂದ ಮುಂದಕ್ಕೆ ಹಾಕಬೇಕು. ಎಲ್ಲಾ ನಗರಸಭೆ ಚುನಾವಣೆಗಳನ್ನು ಬೇಕಾದರೆ ಮುಂದಕ್ಕೆ ಹಾಕಿ ನನ್ನ ಅಭ್ಯಂತರ ಇಲ್ಲ. ಬೆಳಗಾವಿ ನಗರಸಭೆ ಚುನಾವಣೆಯನ್ನು ನಡೆಸಿದರೆ ಅದು ಸಮಗ್ರವಾಗಿ ನಮ್ಮ ಹಿತಕ್ಕೆ ಧಕ್ಕೆ ತರುತ್ತದೆ, ಬಹಳ ಅನ್ಯಾಯವಾಗುತ್ತದೆ. ಅಲ್ಲಿ ವಿಭಾಗಗಳನ್ನು ಸಮಗ್ರವಾಗಿ ಬದಲಾವಣೆ ಮಾಡಬೇಕೆಂಬುದು ಒಂದು. ಮತ್ತೊಂದು ವಿಚಾರ. ರಾಜ್ಯಪಾಲರ ಭಾಷಣದಲ್ಲಿ ಇದೆ. ಆದರೆ ತಮ್ಮ ಉತ್ತರದಲ್ಲಿ ಅದು ಬರಲಿಲ್ಲ. ಇದು ಅನೇಕ ಸಲ ಈ ಸಭೆಯಲ್ಲಿ ನಾನು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಕೆ. ಹೆಚ್. ಪಾಟೀಲರು ಇದು ತೀರ್ಮಾನಕ್ಕಾಗಿ ಹೋಗಿರುವ ಪ್ರಶ್ನೆ ಎಂದರು. ಆದರೂ ಪದೇ ಪದೇ ಮಹಾರಾಷ್ಟ್ರ ಶಾಸನಸಭೆಯಲ್ಲಿ ಅಲ್ಲಿನ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಮತ್ತು ರಾಜ್ಯಪಾಲರ ಭಾಷಣದಲ್ಲಿ ಗಡಿ ವಿಭಾಗದಲ್ಲಿ ಜನಮತಗಣನೆ ಬಗ್ಗೆ ಒಂದು ಒಲವನ್ನು ತೋರಿಸಬೇಕೆಂದು ಕೇಂದ್ರ ಸರಕಾರದ ಮೇಲೆ ಒಂದಲ್ಲ ಅನೇಕ ಸಾರಿ ಒತ್ತಡ ತರುತ್ತಿದ್ದಾರೆ ಕೇಂದ್ರ ಸರಕಾರ ಏನಾದರೂ ಅವರ ಒತ್ತಡಕ್ಕೆ ಮಣಿದು ಮಹಾಜನ ವರದಿಯ ನೀತಿಯನ್ನು ಬದಲಾವಣೆ ಮಾಡಿ ಬೇರೆ ರೂಪಕ್ಕೆ ಏನಾದರೂ ಬರುತ್ತದೆಯೋ, ಇದರ ಬಗ್ಗೆ ಹೇಳಬೇಕೆಂದು ಒತ್ತಾಯ ಮಾಡುತ್ತೇನೆ.

† ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ).— ಮಾನ್ಯ ಅಧ್ಯಕ್ಷರೇ, ಒಂದು ತುರ್ತು ಪ್ರಾರ್ಥನೆಯನ್ನು ಚೀಟಿ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೆ. ಅವರು ಅದರ ಬಗ್ಗೆ ವಿಶ್ಲೇಷಣೆ ಮಾಡಿದರು. ಅದಕ್ಕಾಗಿ ನಾನು ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಅದರಲ್ಲಿ ಮುಖ್ಯವಾದ ಒಂದು ವಿಷಯ ಎಂದು ಹೇಳಿದರೆ ವಿಶ್ವಭಾರತಿ ಹೌಸಿಂಗ್ ಕೋ–ಆಪರೇಟೀವ್ ಸೊಸೈಟಿಯನ್ನು, ನಾನಾ ಮುಖಗಳ ಸೊಸೈಟಿಯನ್ನಾಗಿ ಏನು ನಡೆಸಿಕೊಂಡು ಬರುತ್ತಿದ್ದಾರೆ ಕೃಷ್ಣಭಟ್ ಎನ್ನುವವರು, ಅವರು ಈಗ ಅಲ್ಲಿನ ೭೦೦ ಸೈಟುಗಳನ್ನು ಏನು ವಿಲೇವಾರಿ ಮಾಡಿದ್ದಾರೆ, ಆ ಸೈಟ್‌ನಲ್ಲಿ ಮನೆಗಳನ್ನು ಕಟ್ಟಿಕೊಂಡಿರುವವರಿಗೆ ಅನಾವಶ್ಯಕವಾಗಿ ಅಧರ್ಮವಾಗಿ ಡಿಮ್ಯಾಂಡ್ಸ್ ಮೇಲೆ ಡಿಮ್ಯಾಂಡ್ಸ್ ಹಾಕುತ್ತಿದ್ದಾರೆ. ಹಣ ಕೊಡುವುದಕ್ಕೆ ಸಾಧ್ಯ ಇಲ್ಲ ಎಂದ ತಕ್ಷಣ ಅವರ ಮೇಲೆ ಕ್ರಿಮಿನಲ್ ಕೇಸಸ್ ಫೈಲ್ ಮಾಡಿ ಪೋಲೀಸ್ ಸ್ಟೇಷನ್‌ಗಳಿಗೆ ಮತ್ತು ಕೋರ್ಟುಗಳಿಗೆ ಎಳೆಯು ತ್ತಿದ್ದಾರೆ. ಮತ್ತು ಅದಕ್ಕಿಂತ ಹೆಚ್ಚಾಗಿ ಏನು ಮಾಡುತ್ತಿದ್ದಾರೆ ಎಂದರೆ ಅವರಿಗೆ ನೀರನ್ನು ಕೊಡು ವುದನ್ನು ನಿಲ್ಲಿಸುವಂತಹ ಕೆಲಸ ಮಾಡುತ್ತಿದ್ದಾರೆ. ಕೆಲವರು ದುಡ್ಡು ಕಟ್ಟಿದ ಮೇಲೆ ನೀರು ಬಿಟ್ಟಿದ್ದಾರೆ. ಮತ್ತು ಅವರನ್ನು ಬೆದರಿಸುತ್ತಿದ್ದಾರೆ. ನೀರು ನಿಲ್ಲಿಸುತ್ತೇವೆಂದು ಹೇಳುತ್ತಿದ್ದಾರೆ. ನೀರನ್ನು ನಿಲ್ಲಿಸದ ರೀತಿ, ಜನಸಾಮಾನ್ಯರಿಗೆ ಸಹಾಯ ಮಾಡುವಂತಹದರಲ್ಲಿ ಏನು ಕ್ರಮ ತೆಗೆದು ಕೊಳ್ಳುತ್ತೀರಿ ಎಂದು ಕೇಳುತ್ತೇನೆ.

† SRI QAMARUL ISLAM.–Mr. Speaker Sir, I want clarification from the Hon'ble Chief Minister regarding the implementation of 15 point programme for the minorities, because, 20 point programme has

been expressed in the Governor's Address and it is a policy decision taken by government to implement it very seriously. Sir, you are aware that the per capita income of the minorities is just equal to Scheduled Castes or 0.5% more than Scheduled Castes. As such you can understand the economical backwardness of the minorities of the State. Therefore, I want to know from the Hon'ble Chief Minister what steps are being taken or going to be taken for the implementation of 15 point programme for uplifting the minorities.

Secondly, for development of 'Kannada' many programmes have been chalked out. But, I am sorry, when minority people want to learn Kannada the Government is not ready to provide Kannada teacher's posts in every Urdu School. Now Kannada is compulsory and we want to learn Kannada, but as I said there are no posts of Kannada teachers in Urdu Primary Schools, I want that priority should be given to it and in this House the Chief Minister should declare that Kannada teachers posts will be created in almost all the Urdu primary schools.

Thirdly, regarding "Urdu" language, There is Gujral Committee recommendations. The Congress Government in U. P. and Bihar, in about 12 districts, 'Urdu' was made the second "Official Language". Here, I want, at least in districts where Urdu language is used widely by people, if they have crossed the criteria recommended by the Gujral Commission, whether this government is going to give that status ? Because that was assured in the KPCC (I) election manifesto also, and you have said, for you that manifesto is Quran, Geetha and Bible. I am giving that reference and I am quoting that only. I want clarification.

† ಶ್ರೀ ಪಿ.ಜಿ.ಆರ್. ಸಿಂಧ್ಯ — ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ನಾವೇನೂ ಸಾಧನೆ ಮಾಡಲಿಲ್ಲ ಆದರೆ ಅದೇ ರೀತಿ ಹಗರಣಗಳನ್ನು ಮಾಡಿಲ್ಲವೆಂದು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ತಮ್ಮ ಗುರಿಯನ್ನು ಹೇಳಿದ್ದಾರೆ. ಆ ಬಗ್ಗೆ ನಾವು ಟೀಕೆ ಮಾಡುವುದಕ್ಕೆ ಹೊರಟರೆ ನಿಮಗೆ ಅಧಿಕಾರ ಇಲ್ಲ ಅದಕ್ಕೆ ಹೊಟ್ಟೆ ಕಿಚ್ಚಿಗೆ ಈ ರೀತಿ ಮಾತನಾಡುತ್ತಿದ್ದೀರಿ ಎನ್ನುವ ಭಾವನೆ ಬರುತ್ತದೆ. ನೀವು ನಿಮ್ಮ ಗುರಿಯನ್ನು ಯಾವಾಗ ಪೂರೈಸುತ್ತೀರಿ ಎನ್ನುವುದನ್ನು ಕಾದು ನೋಡೋಣ. ಮಾನ್ಯ ಮುಖ್ಯಮಂತ್ರಿಗಳು ಈ ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡುತ್ತಾ ಹೇಳಿದರು ಪಟ್ಟಣ ಪ್ರದೇಶಗಳಿಗೆ ಎರಡೂವರೆ ಕೋಟಿ ರೂಪಾಯಿಗಳನ್ನು ನಾನು ಈ ಸಾರಿ ಹೆಚ್ಚಿಗೆ ಕೊಟ್ಟಿದ್ದೇನೆ, ಅದೇ ರೀತಿ ಹಳ್ಳಿಗಾಡು ಪ್ರದೇಶಗಳಿಗೂ ಎರಡೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ, ಅಂದರೆ ಒಟ್ಟು ೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ ಎಂದು ಹೇಳಿದರು. ಆದರೆ ವಸ್ತು ಸ್ಥಿತಿಯಲ್ಲಿ ನಾವು ಗಮನಿಸಿದರೆ ೪–೫ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ಉದಾಹರಣೆಗೆ ಧಾರವಾಡಜಿಲ್ಲೆ ತೆಗೆದುಕೊಳ್ಳಿ. ನಾನು ಈ ವಿಷಯದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಮಾತನಾಡಬೇಕೆಂದು ಇದ್ದೆ ಆದರೆ ಪರಿಸ್ಥಿತಿಗಳಿಂದ ಆ ವಿಷಯವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಆಗಲಿಲ್ಲ. ನೀವು ಕೊಟ್ಟಿರುವ ಎರಡೂವರೆ ಕೋಟಿ ರೂಪಾಯಿಗಳಲ್ಲಿ ೧೭೫ ತಾಲ್ಲೂಕುಗಳಿಗೆ ಹಂಚಿಕೆ ಮಾಡಿದರೆ ಒಂದೊಂದು ತಾಲ್ಲೂಕಿನಲ್ಲಿ ೮–೧೦ ಬೋರ್‌ವೆಲ್‌ಗಳನ್ನು ಮಾತ್ರ ಮಾಡಿಸುವುದಕ್ಕೆ ಆಗುತ್ತದೆ ಒಂದು ಬೋರ್‌ವೆಲ್‌ಗೆ ಸುಮಾರು ೨೫ ಸಾವಿರ ರೂಪಾಯಿಗಳು ಆಗುತ್ತದೆ. ನೀವು ಕೊಟ್ಟಿರುವ ಹಣ ಯಾವ ಕಡೆ ಸಾಕಾಗುತ್ತದೆ. ಏನೇನು ಸಾಕಾಗುವುದಿಲ್ಲ. ಇದನ್ನು ಹೆಚ್ಚು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಎರಡನೆಯದಾಗಿ, ಪಟ್ಟಣ ಪ್ರದೇಶಗಳಿಗೆ ಕೊಟ್ಟಿರತಕ್ಕಂಥ ಎರಡೂವರೆ ಕೋಟಿ ರೂಪಾಯಿಗಳು ಏನೇನೂ ಸಾಕಾಗುವುದಿಲ್ಲ. ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ಜಾಸ್ತಿಯಾಗಿದೆ. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಸುಮಾರು

೩೦೦ ಅಡಿ ಕೊರೆದರೂ ನೀರು ಸಿಗುವುದಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಆದ್ದರಿಂದ ಸರ್ಕಾರ ಹೆಚ್ಚು ಹಣ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಆಮೇಲೆ ನಮ್ಮ ಹಣಕಾಸಿನ ಸಚಿವರು ಬಜೆಟ್ ಮಂಡನೆ ಮಾಡಿದಾಗ ನಾನು ಮಾತನಾಡುತ್ತಾ ಬಡವರಿಗೆ ಬರತಕ್ಕಂಥ ಒ.ಎ.ಪಿ ಹಣ ಸರಿಯಾಗಿ ಬರುತ್ತಿಲ್ಲವೆಂದು ನಾನು ಸರ್ಕಾರದ ಗಮನಕ್ಕೆ ತಂದಿದ್ದೆ. ಆ ಬಗ್ಗೆ ಇದುವರೆಗೂ ಯಾವ ಕ್ರಮವನ್ನು ಸಹ ತೆಗೆದುಕೊಂಡಿಲ್ಲ. ಒ.ಎ.ಪಿ. ಹಣ ಬಡವರಿಗೆ ಸುಮಾರು ೩-೪ ತಿಂಗಳುಗಳಿಂದಲೂ ಬರುತ್ತಿಲ್ಲ. ಈ ಬಗ್ಗೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಅಸೆಂಬ್ಲಿ ಮುಗಿಸಿ ಹೊರಗಡೆ ಹೋದರೆ ರೈತರು ನಮ್ಮನ್ನು ಕೇಳುತ್ತಾರೆ. ರೈತರು ಸಾಲ ಮಾಡಿ ಬಾವಿ ತೆಗೆಯಿಸಿಕೊಂಡಿದ್ದು ಪವರ್ ಕನಕ್ಷನ್‌ಗೆ ಅಪ್ಲೈ ಮಾಡಿ ಒಂದೂವರೆ ವರ್ಷದಿಂದ ಕಾಯುತ್ತಿದ್ದಾರೆ. ಅವರಿಗೆ ಒಂದು ಪೋಲ್ ಎರಡು ಪೋಲ್ ಮಾತ್ರ ಬೇಕಾಗಿರುತ್ತದೆ. ಈ ವಿಷಯವನ್ನು ನಾನು ಕಳೆದ ಅಧಿವೇಶನದಲ್ಲಿಯೂ ಸಹ ಪ್ರಸ್ತಾಪ ಮಾಡಿದ್ದೆ, ಮೊನ್ನೆಯೂ ಸಹ ಪ್ರಸ್ತಾಪ ಮಾಡಿದ್ದೇನೆ ಈ ಬಗ್ಗೆ ನನಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ಉತ್ತರ ಕೊಡಬೇಕೆಂದು ಹೇಳುತ್ತೇನೆ. ಇನ್ನು ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಟೆಲಿಫೋನ್ ಹಗರಣದ ಬಗ್ಗೆ ಒಂದು ಮಾತನ್ನು ಹೇಳಿದರು ಅದೇನೆಂದರೆ ಹಿಂದಿನ ಮುಖ್ಯಮಂತ್ರಿಗಳು ಟೆಲಿಫೋನ್ ಕದ್ದು ಕೇಳಿದ್ದಕ್ಕೆ ಅಧಿಕಾರ ಬಿಡುವಂತಹ ಪ್ರಸಂಗ ಬಂತು ಎಂದು. ಆದರೆ ನಮ್ಮ ನಾಯಕರಾದ ಹೆಗಡೆಯವರು ತಮ್ಮ ನೈತಿಕ ಹೊಣೆಗಾರಿಕೆ ಹೊತ್ತು ರಾಜೀನಾಮೆ ಕೊಟ್ಟಿರತಕ್ಕಂಥಾದ್ದು ಅವರಿಗೆ ಗೊತ್ತಿರತಕ್ಕಂಥ ವಿಚಾರ. ತಾವು ಅಧಿಕಾರಕ್ಕೆ ಬಂದ ತಕ್ಷಣ ಒಂದು ಮಾತು ಹೇಳಿದಿರಿ ಅದೇನೆಂದರೆ ನಾವು ಟೆಲಿಫೋನ್ ಕದ್ದು ಕೇಳದಂತೆ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರವನ್ನು ಬರೆದಿದ್ದೇನೆ ಎಂದು. ಅದನ್ನು ನಾವು ಸ್ವಾಗತ ಮಾಡುತ್ತೇವೆ, ಮತ್ತು ಶ್ಲಾಘನೆ ಮಾಡುತ್ತೇವೆ. ಮಾನ್ಯ ಅಧ್ಯಕ್ಷರೇ ನನಗೆ ಗೊತ್ತಿರುವ ಹಾಗೆ ವಿರೋಧಪಕ್ಷದ ನಾಯಕರ ಮನೆಗಳ ಮೇಲೆ ಪೋಲೀಸ್ ಗುಪ್ತದಳದವರು ಗಮನ ಇಟ್ಟಿದ್ದಾರೆ. ಅವರ ಚಲನವಲನಗಳನ್ನು ಗಮನಿಸಿ ಎಂದು ತಾವೇನಾದರೂ ಆದೇಶವನ್ನು ಕೊಟ್ಟಿದ್ದೀರಾ ? ನಾವು ಎಲ್ಲಿ ಹೋದರೂ, ಬಂದರೂ ಅವರು ಇದನ್ನು ಗಮನಿಸುತ್ತಿದ್ದಾರೆಂದು ನನಗೆ ಗೊತ್ತಾಗಿದೆ. ಈ ಬಗ್ಗೆ ತಾವು ಉತ್ತರ ಹೇಳಬೇಕು.

† ಶ್ರೀ ಎಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವುಗಳಲ್ಲಿ ನಾನು ಮೊದಲನೆಯದಾಗಿ ಹೇಳುವುದಾದರೆ ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಅನೇಕ ಅವ್ಯವಹಾರಗಳು ನಡೆದಿವೆ ಎನ್ನುವ ಬಗ್ಗೆ ಅವ್ಯವಹಾರಗಳು ಆಗಲು ಕಾರಣ ಆಗ ಆಡಳಿತದಲ್ಲಿದ್ದಂತಹವರು, ಇವರು ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಕಾರಣಕರ್ತರು ಎಂದು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ ಆ ಕಡತಗಳು ಈಗ ನಿಮ್ಮ ಹತ್ತಿರವೇ ಇವೆ. ನೀವು ಅವೆಲ್ಲವನ್ನೂ ತರಿಸಿ ನೋಡಬಹುದು. ಯಾವ ಮಂತ್ರಿಗಳೇ ಆಗಲಿ ಅವರು ಜನಪರವಾದ ತೀರ್ಮಾನಗಳನ್ನೇ ತೆಗೆದುಕೊಳ್ಳುತ್ತಾರೆ. ಅವರು ಅಂತಹ ತೀರ್ಮಾನ ತೆಗೆದುಕೊಳ್ಳುವಾಗ ಏನಾದರೂ ಲಾಭ ಮಾಡಿದ್ದರೆ ಖಂಡಿತವಾಗಿ ಅದು ಅಪರಾಧವಾಗುತ್ತದೆ. ಅದನ್ನು ವಿಚಾರಣೆ ಮಾಡಲಿಕ್ಕೆ ನಮ್ಮ ತಕರಾರು ಏನೂ ಇಲ್ಲ ಎಂದು ನಾನು ಸವಾಲು ಮಾಡುತ್ತೇನೆ. ಅದನ್ನು ಬಿಟ್ಟು, ಪದೇ ಪದೇ ಈ ಮಾತುಗಳನ್ನು ಹೇಳುವುದರಿಂದ ಸರಿ ಆಗುವುದಿಲ್ಲ. ಇವತ್ತಿನದಿನಸ ಈ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿಗಳ ಅವ್ಯವಹಾರಗಳನ್ನು, ಕೊನೆಗಾಣಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಿದ ಕೀರ್ತಿ ನಮ್ಮ ಸರ್ಕಾರಕ್ಕೆ ಹೋಗಬೇಕು, ಬೇರೆ ಯಾರಿಗೂ ಅಲ್ಲ. ಜಿ. ವಿ. ಕೆ. ರಾವ್ ವರದಿಯನ್ನು ತಾವು ತರಿಸಿ ನೋಡಿ. ಆ ಬಗ್ಗೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ ? ಏನೇನು ಕ್ರಮವನ್ನು ತೆಗೆದುಕೊಳ್ಳಬೇಕೆನ್ನುವ ಮಾತನ್ನು ನಾವು ಹೇಳಿದ್ದೇವೆ. ಏನು ಅವ್ಯವಹಾರ ಆಗಿದೆ ಎನ್ನುವ ಮಾತನ್ನು ಹೇಳಿದ್ದೇವೆ. ಅದನ್ನು ತಡೆಗಟ್ಟಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇವೆ. ಈ ಸದಸ್ಯರುಗಳಿಗೆ ನಿವೇಶನವನ್ನು ಕೊಡುವಂಥ ಒಂದು ನೀತಿಯನ್ನು ಅನುಸರಿಸಲಿಕ್ಕೆ ಒಂದು ಹೊಸ ನೀತಿಯನ್ನು ಪ್ರಸ್ತಾವನೆ ಆ ಕಾಲದಲ್ಲೇ ಮಾಡಿದೇವೆ. ಅದನ್ನು ಜಾರಿಗೆ ತರಲಿಕ್ಕೆ ಅವರು ಮನಸ್ಸು ಮಾಡಿದ್ದಾರೆಯೋ ಎರಡನೆಯದಾಗಿ ಆಗಲೇ ಭಾಷಣ ಮಾಡುತ್ತಾ ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. ಎಕ್ಸೈಸ್ ಲಾಬಿ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಈ ಎಕ್ಸೈಸ್ ಬಾಬಿನಿಂದ ಬರತಕ್ಕಂಥ ಆದಾಯವನ್ನು ಹೆಚ್ಚು ಮಾಡಲಿಕ್ಕೆ ಇವತ್ತಿನ ದಿವಸ ಸಾರಾಯಿ, ಐ.ಎಂ.ಎಫ್.ಎಲ್., ಅಂಗಡಿಗಳನ್ನು, ಅಂಗಡಿವಾರು ಹರಾಜು ಮಾಡುವ ಮೂಲಕ. ತಮಿಳುನಾಡು, ಆಂಧ್ರದಲ್ಲಿ ಯಾವ ನೀತಿಯನ್ನು ಅನುಸರಿಸುತ್ತಿದ್ದಾರೋ ಅಂಥಾ ನೀತಿಯನು ಅನುಸರಿಸಿದರೆ ಕೋಟ್ಯಾಂತರ ರೂಪಾಯಿಗಳ ಹೆಚ್ಚು ಲಾಭ ಬರುವಂಥ ಸಂದರ್ಭ ಇದೆ ಇದು ತಮಗೆ ಗೊತ್ತಿದೆ. ಇಂಥಾ ಹೊಸ ನೀತಿಯನ್ನು ಅನುಸರಿಸಲಿಕ್ಕೆ ತಾವು ಪ್ರಯತ್ನ ಮಾಡುತ್ತೀರಾ ? ಕೊನೆಯದಾಗಿ ಒಂದು ವಿಚಾರ ಹೇಳುತ್ತೇನೆ. ಇವತ್ತು ೧೮೦೦ ಜನ ನೌಕರರು ಎಂ.ಎಸ್.ಕೆ. ಮಿಲ್, ಅವರ

ಊರಿನಲ್ಲಿ, ಗುಲ್ಬರ್ಗಾದಲ್ಲಿ ಇದೆ. ಕಳೆದ ೮ ದಿವಸಗಳಿಂದ ಅವರು ಮುಷ್ಕರ ಹೂಡಿದ್ದಾರೆ. ಇದಕ್ಕೆ ಎನ್.ಟಿ.ಸಿ. ವ್ಯಾಪ್ತಿ ಇದೆಯೆಂದು ನನಗೆ ಗೊತ್ತಿದೆ. ಆದರೂ ಸಹ ಇದರಲ್ಲಿ ನಮ್ಮ ಸರ್ಕಾರದ ಹೊಣೆ ಇದೆ. ಈ ಮುಷ್ಕರವನ್ನು ತಪ್ಪಿಸಲಿಕ್ಕೆ ಏನಾದರೂ ಪ್ರಾಮಾಣಿಕ ಪ್ರಯತ್ನ ಮಾಡಬೇಕೆನ್ನುವ ಮಾತನ್ನು ಹೇಳುತ್ತಾರೆಯೇ ?

† ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು, ನೇರವಾಗಿ ಜನತಾ ಮತ್ತು ಜನತಾದಳ ಸರ್ಕಾರದ ಮೇಲೆ ಆಪಾದನೆ ಮಾಡಿದ್ದಾರೆ. ಬಹಳ ಕಡಿಮೆ ಅವಧಿಯಲ್ಲಿ ನಾನು ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿದ್ದೆ. ಹಿಂದಿನ ಸರ್ಕಾರದವರು ೧೦ ಸಾವಿರ ಸೈಟುಗಳನ್ನು ಕೊಡುತ್ತೇವೆಂದು ಹೇಳಿ ಸೈಟುಗಳನ್ನೇ ಕೊಡಲಿಲ್ಲವೆಂದು ಹೇಳಿದರು. ನಾನು ಮುಖ್ಯ ಮಂತ್ರಿಗಳು ಪುನಃ ಫಿಗರ್ಸ್‌ಗಳನ್ನು ವೆರಿಫೈ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ, ೧೦ ಸಾವಿರ ಸೈಟುಗಳನ್ನು ಒಂದೇ ಸಾರಿ ಕೊಡುತ್ತೇವೆಂದು ಹೇಳಿಲ್ಲ. ೮ ವರ್ಷದ ಅವಧಿಯಲ್ಲಿ ಎರಡು ಸಾವಿರ ಎರಡು ಸಾವಿರ ರೀತಿಯಲ್ಲಿ ಸೈಟುಗಳನ್ನು ಕೊಡಬೇಕೆಂದು ಗುರಿ ಇಟ್ಟುಕೊಂಡಿದ್ದೆವು. ಆದರೆ, ನಾವು ಗುರಿ ಮುಟ್ಟಲಿಕ್ಕೆ ಆಗಲಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಮುಖ್ಯಮಂತ್ರಿಗಳು ೧೯೮೩ನೇ ಇಸವಿಯ ನಂತರ ಮತ್ತು ರಾಮಕೃಷ್ಣ ಹೆಗಡೆಯವರು ಹಾಗೂ ಬೊಮ್ಮಾಯಿಯವರು ಮುಖ್ಯಮಂತ್ರಿ ಆಗಿದ್ದಾಗ ಬಿ ಡಿ ಎ. ಯಿಂದ ಎಸ್.ಸಿ./ಎಸ್.ಟಿ. ಮತ್ತು ಇತರೇ ವೀಕರ್ ಸೆಕ್ಷನ್‌ಗೆ ಎಷ್ಟು ಸೈಟು ಕೊಟ್ಟರೆಂದು ಹಾಗೂ ಬೇರೆ ಬೇರೆ ಪಿರಿಯಡ್ ಎಷ್ಟು ಕೊಟ್ಟಿದ್ದಾರೆಂದು ಸ್ಪಷ್ಟವಾಗಿ ಹೇಳಬೇಕು. ಅದರ ಅವಶ್ಯಕತೆ ಇದೆ. ಇದರಿಂದ ಸದನಕ್ಕೆ ನಿಜವಾಗಿ ಪರಿಸ್ಥಿತಿ ತಿಳಿಯಲಿಕ್ಕೆ ಸಾಧ್ಯವಾಗುತ್ತದೆ. ಎರಡನೆಯದು, ಬಹಳಷ್ಟು ಎಕ್ಸ್‌ಮ್‌ಷನ್ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಇದರ ಬಗ್ಗೆ ಬಹಳ ದೊಡ್ಡ ಫಿಗರ್ಸ್‌ನ್ನೇ ಕೊಟ್ಟಿದ್ದಾರೆ. ಅರ್ಬನ್ ಸೀಲಿಂಗ್ ಆ್ಯಕ್ಟ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾದ ಮೇಲೆ ಅಥವಾ ಬೊಮ್ಮಾಯಿಯವರು ಮುಖ್ಯಮಂತ್ರಿಯಾದ ಮೇಲೆ ಬಂದಿಲ್ಲ. ನೀವು ಹಿಂದೆ ಮುಖ್ಯಮಂತ್ರಿಗಳು ಆದ ಕಾಲದಿಂದಲೂ ಈ ಆ್ಯಕ್ಟ್ ಇದೆ. ಅವಾಗಿನಿಂದ ಅಗ್ರಿಕಲ್ಚರಲ್‌ಗೆ ಎಷ್ಟು, ರೆಸಿಡೆನ್‌ಷಿಯಲ್‌ಗೆ ಎಷ್ಟು ಕಮರ್ಷಿಯಲ್‌ಗೆ ಎಷ್ಟು, ಯಾವ ಯಾವ ಸರ್ಕಾರದ ಕಾಲದಲ್ಲಿ ಎಷ್ಟೆಷ್ಟು ಜಾಗಗಳನ್ನು ಕೊಟ್ಟಿದ್ದಾರೆ ಎಂಬ ಮಾಹಿತಿಯನ್ನು ಸಭೆಯ ಮುಂದೆ ಇಡಿ. ಅಗ್ರಿಕಲ್ಚರಲ್ ಲ್ಯಾಂಗಡ್ ಲಿಬರಲ್ ಆಗಿ ಎಕ್ಸಮ್‌ಷನ್ ಕೊಡುತ್ತಾರೆ. ರೆಸಿಡೆನ್‌ಷಿಯಲ್ ಮತ್ತು ಕಮರ್ಷಿಯಲ್ ಲ್ಯಾಂಡ್‌ಗೆ ಎಕ್ಸ್‌ಮ್‌ಷನ್ ಕೊಡಬೇಕಾದರೆ ಕಷ್ಟ ವಾಗುತ್ತದೆ. ಅಗ್ರಿಕಲ್ಚರಲ್ ಲ್ಯಾಂಡ್‌ಗೆ ಕೊಡಬೇಕಾದರೆ ಏನೂ ತೊಂದರೆ ಇಲ್ಲ. ಹೀಗಾಗಿ ಪ್ರತಿಯೊಂದು ಡಿಪಾರ್ಟ್‌ಮೆಂಟಿನಿಂದ ಎಷ್ಟೆಷ್ಟು ಆಯಿತೆಂದು ದಯಮಾಡಿ ತಾವು ಫಿಗರ್ಸ್‌ಗಳನ್ನು ಸದನದ ಮುಂದೆ ಇಡಬೇಕು. ಇನ್ನು ಮೂರನೆಯದು ತಾವು ಹೇಳಿದ್ದೀರಿ ಯಾವುದೋ ಒಂದು ಹೋಟೆಲ್‌ಗೆ ಕಮರ್ಷಿಯಲ್ ಮಾಡಿಬಿಟ್ಟರೆಂದು. ಅದು ನನಗೆ ಗೊತ್ತಿಲ್ಲ. ಅದನ್ನು ತಿಳಿಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ, ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುತ್ತೇನೆ. ಮುಂಚೆ ಒಂದು ಪದ್ಧತಿ ಇತ್ತು, ಯಾರೊ ಒಬ್ಬ ಅರ್ಜಿಯನ್ನು ಡೆವಲಪ್‌ಮೆಂಟ್ ಅಥಾರಿಟಿಗೆ ಕೊಟ್ಟರೆ, ನೇರವಾಗಿ ಅವರು ರೆಕಮೆಂಡ್ ಮಾಡುತ್ತಿದ್ದರು. ಮಂತ್ರಿಗಳು ಅದಕ್ಕೆ ಒಪ್ಪಿಗೆ ಕೊಡುತ್ತಿದ್ದರು. ಆದರೆ, ನಾವು ಅಲ್ಲಿ ಇದ್ದಾಗ, ಒಂದು ಬಿಲ್‌ನ್ನು ಇಂಟ್ರಡ್ಯೂಸ್ ಮಾಡಿದೆವು. ಚೇಂಜ್ ಆಫ್ ಲ್ಯಾಂಡ್ ಮಾಡಬೇಕಾದರೆ ಮಂತ್ರಿ ಮನಸ್ಸಿಗೆ ಬಂದ ಪ್ರಕಾರ ನಡೆಯಬಾರದು, ಅಥವಾ ಸರ್ಕಾರದ ಮನಸ್ಸು ಪ್ರಕಾರ ನಡೆಯಬಾರದು, ಅದಕ್ಕೆ ಒಂದು ಪ್ರೊಸೀಜರ್ ಇರಬೇಕು. ಯಾವ ಡೆವಲಪ್‌ಮೆಂಟ್ ಅಥಾರಿಟಿ, ಬೆಳಗಾವಿ ಇರಬಹುದು, ಹುಬ್ಬಳ್ಳಿ ಇರಬಹುದು, ಮಂಗಳೂರು ಇರಬಹುದು, ಗುಲ್ಬರ್ಗಾ ಇರಬಹುದು, ಅದು ರೆಕಮೆಂಡ್ ಮಾಡಬೇಕಾದರೆ ಮುಂಚೆ ಈ ಚೇಂಜ್ ಆಫ್ ಲ್ಯಾಂಡ್‌ಯೂಸ್ ಬಗ್ಗೆ ಅಪ್ಲಿಕೇಷನ್ ಬಂದರೆ ಮೊದಲು ಪೇಪರ್‌ನಲ್ಲಿ ಪಬ್ಲಿಕೇಷನ್ ಮಾಡಬೇಕು. ಅದರ ಬಗ್ಗೆ ಅಬ್ಜೆಕ್ಷನ್ ಕಾಲ್‌ಫರ್ ಮಾಡಬೇಕು. ಅಬ್ಜೆಕ್ಷನ್ ಏನಿವೆ ಎಂದು ನೋಡಿ ಅವರು ರೆಕಮೆಂಡ್ ಮಾಡಿದ ನಂತರ ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥ ಒಂದು ಬಿಲ್‌ನ್ನು ಇಲ್ಲಿ ಇಂಟ್ರಡ್ಯೂಸ್ ಮಾಡಿದ್ದೆವು. ಆ ಸಮಯದಲ್ಲಿ ಮಾನ್ಯ ಸದಸ್ಯರು ಅಲ್ಲಿ ಕುಳಿತಿರುವವರು ಇಲ್ಲಿ ಕುಳಿತಿದ್ದಾಗ ಆ ಬಿಲ್‌ನ್ನು ಇಂಟ್ರಡ್ಯೂಸ್ ಮಾಡಿದ್ದಾಗ ಅವರು ವಿರೋಧ ಮಾಡಿದ್ದರು. ಅಲ್ಲಿ ಯಾವುದು ಭ್ರಷ್ಟಾಚಾರ ನಡೆಯಬಾರದೂ ಸರಿಯಾಗಿ ನಡೆಯಬೇಕೆಂದು ಬಿಲ್ ಇಂಟ್ರಡ್ಯೂಸ್ ಮಾಡಿದಾಗ ತಾವು ಇಲ್ಲಿ ಕುಳಿತಿದ್ದಾಗ ವಿರೋಧ ಮಾಡಿದಿರಿ. ಆದರೆ ರಾಷ್ಟ್ರಪತಿ ಆಡಳಿತದಲ್ಲಿ ಅದೇ ಬಿಲ್ ಆರ್ಡಿನೆನ್ಸ್ ಮಾಡುವುದಕ್ಕೆ ತಾವು ದೆಹಲಿಗೆ ಕಳುಹಿಸಿದ್ದೀರಿ. ಆ ಆರ್ಡಿನೆನ್ಸ್ ಯಾವುದೂ ಇಲ್ಲಿ ಬಂದಿಲ್ಲ. ಆ ಬಿಲ್‌ನ್ನು ದಯಮಾಡಿ ಇಂಟ್ರಡ್ಯೂಸ್ ಮಾಡಿ.

೧-೧೫ ಪಿ. ಎಂ.

ಆ ಬಿಲ್‌ನ್ನು ದಯುವಿಟ್ಟು ಇಂಟ್ರಡ್ಯೂಸ್ ಮಾಡಿ, ಅದರಿಂದ ಚೇಂಜ್ ಆಫ್ ಪ್ಯಾಟರ್ನ್‌ನಲ್ಲಿ ದುರ್ವ್ಯವಹಾರ ಆದರೆ ಅದನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಬಿಟ್ಟು ನೀವು ಹೆಜ್ಜೆ ಹೆಜ್ಜೆಗೂ ನೀವೊಂದು ಹೇಳುವುದು, ಅದಕ್ಕೆ ನಾವೊಂದು ಉತ್ತರವನ್ನು ಕೊಡುವುದು. ನೀವು ಭ್ರಷ್ಟಾಚಾರಣ ಇದೆ ಎಂದು ಹೇಳುವುದು, ನಾವು ಇಲ್ಲ ಎಂದು ಹೇಳುವುದು. ಆದುದರಿಂದ ದಯಮಾಡಿ ಜನತಾ ದಳ, ಜನತಾ ಸರಕಾರದ ಅವಧಿಯಲ್ಲಿನ ಎಲ್ಲಾ ಕಡತಗಳನ್ನು ಪರಿಶೀಲನೆ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಿ, ಎಲ್ಲೆಲ್ಲಿ ಅನ್ಯಾಯವಾಗಿದೆ, ಎಲ್ಲೆಲ್ಲಿ ಭ್ರಷ್ಟಾಚಾರವಾಗಿದೆ ಅದನ್ನು ಹೊರಗೆ ತನ್ನಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್, — ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಅನೇಕ ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳ ಬಗ್ಗೆ ಸ್ಪಷ್ಟೀಕರಣ ಹೇಳಿದ್ದಾರೆ. ನಾನು ನನ್ನ ಭಾಷಣದಲ್ಲಿ ಆ ತರಹದ ಅನೇಕ ಸಮಸ್ಯೆಗಳ ಬಗ್ಗೆ ಸವಿಸ್ತಾರವಾಗಿ ಹೇಳಿದ್ದೇನೆ. ಈ ಸ್ಕ್ರೀನಿಂಗ್ ಸಮಿತಿಯನ್ನು ನಾವು ಮಾಡಿರುವಂಥಾದ್ದು, ಸರ್ವೀಸ್ ರೂಲ್ಸ್ ೨೮೫ ಪ್ರಕಾರ ಅಧಿಕಾರಿಗಳಿಗೆ ಕಡ್ಡಾಯ ನಿವೃತ್ತಿಯನ್ನು ಮಾಡುವುದಕ್ಕಾಗಿ ಮಾಡಿದುದು. ಅದಕ್ಕೆ ಯಾವುದೂ ಟೈಮ್ ಲಿಮಿಟ್ ಇರುವುದಿಲ್ಲ. ಅದು ಕಂಟಿನ್ಯೂಯಸ್ ಬಾಡಿ. ಇದನ್ನು ಮಾಡುವ ಮುನ್ನಾ ಸರಕಾರಿ ಆದೇಶವು ಹೊರಡುವ ಮುನ್ನ ರೂಲ್ಸ್ ಮತ್ತು ರೆಗ್ಯುಲೇಶನ್ಸ್‌ನ್ನು ಯಾವರೀತಿಯಿಂದ ಮಾಡಬೇಕೆಂಬುದನ್ನು ಸರಕಾರಕ್ಕೆ ಈ ಸಮಿತಿ ಶಿಫಾರಸ್ಸು ಮಾಡುತ್ತದೆ. ಸರಕಾರ ಅದರ ಮೇಲೆ ಯೋಗ್ಯವಾದ ನಿರ್ಣಯವನ್ನು ತೆಗೆದುಕೊಳ್ಳುತ್ತದೆ.

ಈಗ ನಿವೃತ್ತಿ ವಯಸ್ಸನ್ನು ಕಡಿಮೆ ಮಾಡುವ ಬಗ್ಗೆ ಒಂದು ವರ್ಷ ಕಾಲ ಅದನ್ನು ಮುಂದಕ್ಕೆ ಹಾಕಿದ್ದೀರಿ, ನಿಮಗೆ ಮುಂದಕ್ಕೆ ಹಾಕುವ ವಿಚಾರ ಇದ್ದಿದ್ದರೆ ಅದನ್ನು ಈಗ ಹೇಳುವ ಅವಶ್ಯಕತೆ ಏನಿತ್ತು ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದ್ದಾರೆ. ನಾನು ಸ್ಪಷ್ಟವಾಗಿ ಹೇಳಿದ್ದೇನೆ; ಇದೊಂದು ಬಹಳ ಗಹನವಾದಂಥ ವಿಷಯ. ಇವನ್ನು ಲಘುವಾಗಿ ತೆಗೆದುಕೊಂಡು ಇದರ ಮೇಲೆ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಅದಕ್ಕಾಗಿ ಅಂಥ ಸಮಸ್ಯೆಗಳ ಬಗ್ಗೆ ಸಾಕಷ್ಟು ಚರ್ಚೆಯಾಗಲಿ, ಆ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಅದನ್ನು ತಿಳಿದುಕೊಂಡು, ಅದರ ಮೇಲೆ ಒಂದು ನಿರ್ಣಯವನ್ನು ನಾವು ಮಾಡಬಹುದು. ಸರಕಾರ ಯಾವುದೇ ರೀತಿಯ ತರಾತುರಿಯಿಂದ ಇದರ ಬಗ್ಗೆ ನಿರ್ಧಾರ ಮಾಡಬಾರದು. ಈ ಸಮಸ್ಯೆಯ ಬಗ್ಗೆ ಡಿಬೇಟ್ ಆಗಬೇಕು, ಯಾವುದೇ ಡಿಬೇಟ್ ಆಗಬೇಕಾದರೆ ಅದರ ಬಗ್ಗೆ ಪ್ರಸ್ತಾಪ ಮಾಡಲಾರದೆ ಹೋದರೆ ಅದು ಡಿಬೇಟ್ ಆಗುವುದಿಲ್ಲ, ಆ ಉದ್ದೇಶದಿಂದ ನಾವು ಹೀಗೆ ಮುಂಚೆ ಪ್ರಸ್ತಾಪ ಮಾಡಿದ್ದೇವೆ. ಸಾರ್ವಜನಿಕರಲ್ಲಿ ಈ ವಿಚಾರದಲ್ಲಿ ಇವೊತ್ತು ಮಾಡುತ್ತಾರೋ, ನಾಳೆ ಮಾಡುತ್ತಾರೋ ಎಂಬ ಬಗ್ಗೆ ಅನಿಶ್ಚಿತತೆಯು ಇರಬಾರದು ಎಂಬ ಕಾರಣಕ್ಕಾಗಿ ಒಂದು ವರ್ಷದೊಳಗಾಗಿ ಈ ಬಗ್ಗೆ ಸರಕಾರವು ಯಾವುದೇ ನಿರ್ಣಯವನ್ನು ತೆಗೆದುಕೊಳ್ಳುವುದಿಲ್ಲ ಎಂದು ನಾನು ಘೋಷಣೆ ಮಾಡಿದ್ದೇನೆ. ಹಾಗೆಯೇ ವಿರೋಧಪಕ್ಷದ ನಾಯಕರು ಈ ಸಲದ ರಾಜ್ಯದ ಪರಿಸ್ಥಿತಿಯು ಅಷ್ಟು ಚೆನ್ನಾಗಿ ಇಲ್ಲ, ಈಗಾಗಲೇ ಕ್ಷಾಮದ ಲಕ್ಷಣಗಳು ಕಂಡುಬರುತ್ತಾ ಇವೆ, ಅದರ ಬಗ್ಗೆ ಸರಕಾರದವರು ಏನು ಯೋಚನೆ ಮಾಡಿದ್ದೀರಿ ಎಂದು ಕೇಳಿದ್ದಾರೆ. ಆ ವಿಚಾರವಾಗಿ ಯಾವುದೇ ಕ್ರಮವನ್ನು ನಾವು ಇವೊತ್ತೇ ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲ. ಹಾಗೆ ಏನಾದರೂ ಅಭಾವ ಪರಿಸ್ಥಿತಿಯು ಕಾಣಿಸಿಕೊಳ್ಳುವುದಿದ್ದರೆ ಅದರ ನಿರ್ದಿಷ್ಟ ಲಕ್ಷಣಗಳು ಸಾಧಾರಣವಾಗಿ ಮೇ ತಿಂಗಳಲ್ಲಿ ಕಾಣಿಸಿಕೊಳ್ಳಲು ಪ್ರಾರಂಭವಾಗುತ್ತವೆ. ಆ ಪರಿಸ್ಥಿತಿ ಬಂದಾಗ ಅಧಿಕಾರಿಗಳ ರಿಪೋರ್ಟ್ ತರಿಸಿಕೊಂಡು ಆ ರಿಪೋರ್ಟ್‌ನ ಆಧಾರದ ಮೇಲೆ, ಕೇಂದ್ರ ಸರ್ಕಾರದ ಜೊತೆಯಲ್ಲಿ ಸಂಪರ್ಕಮಾಡಿ, ಈ ಅಭಾವದಿಂದ ಪೀಡಿತರಾದವರಿಗೆ ಪರಿಹಾರ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದಕ್ಕಿಂತ ಮುಂಚೆಯೇ ನಾವು ಅಭಾವ ಬರುತ್ತದೆ ಎಂದು ಲೆಕ್ಕ ಮಾಡಿ ಒಂದು ಯೋಜನೆಯನ್ನೇನಾದರೂ ಮಾಡಿ ಅದನ್ನು ಕೇಂದ್ರ ಸರಕಾರಕ್ಕೆ ಒಯ್ದರೆ ಅವರು ಇದನ್ನು ಲಘುವಾಗಿ ತೆಗೆದುಕೊಳ್ಳುವ ಸಾಧ್ಯತೆ ಇರಬಹುದು. ಇವರು ದುಡ್ಡು ತೆಗೆದುಕೊಳ್ಳುವುದಕ್ಕಾಗಿ ಒಂದು ನೆಪ ಹಾಕಿಕೊಂಡು ಬಂದಿದ್ದಾರೆ ಎನ್ನುವ ಭಾವನೆಯೂ ಬರುತ್ತದೆ. ಆದುದರಿಂದ ಸರಕಾರ ಈಗಲೇ ಆ ಕುರಿತು ಯೋಜನೆ ಮಾಡುವುದಕ್ಕಾಗುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ.

ಇನ್ನು ಕಾವೇರಿ ನದಿ ನೀರಿನ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ಎಲ್ಲಾ ಮಾನ್ಯ ಸದಸ್ಯರುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇವೊತ್ತು ನಾನು ಆ ಬಗ್ಗೆ

ಸ್ಪಷ್ಟವಾಗಿ ಹೇಳುತ್ತೇನೆ. ನಾಳೆ ಅಲ್ಲಿ ನಾನು ಮಾತನಾಡುವಾಗ ಕರ್ನಾಟಕ ರಾಜ್ಯದ, ಅದರಲ್ಲಿಯೂ ಕಾವೇರಿ ನದಿ ಪಾತ್ರದಲ್ಲಿರುವ ಜನರ ಹಿತರಕ್ಷಣೆ ಮಾಡುವುದಕ್ಕೋಸ್ಕರವಾಗಿ ಮಾತನಾಡುತ್ತೇನೆ. ನಾಳೆ ಅಲ್ಲಿಗೆ ಹೋಗಿ ಏನೋ ಹೇಳುವುದು, ಏನೋ ಕೇಳಿ ಬರುವುದು ಈ ಕೆಲಸವನ್ನು ನಾನು ಮಾಡುವುದಿಲ್ಲ. ಹಾಗೆಯೇ ಅಂಥ ಸಮಸ್ಯೆಗಳು ಬಂದಾಗ ತಮ್ಮ ಜೊತೆಯಲ್ಲಿ ಅವಶ್ಯಕತೆ ಇದ್ದಾಗ ಸಮಾಲೋಚನೆ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ರಾಜ್ಯದ ಸಮಸ್ಯೆ, ರಾಜ್ಯದ ರೈತರ ಸಮಸ್ಯೆ, ಅದರಲ್ಲಿಯೂ ಕಾವೇರಿ ನದಿಪಾತ್ರದ ಜನರ ಸಮಸ್ಯೆಯ ಬಗ್ಗೆ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಮ್ಮೆಲ್ಲರ ಅಭಿಪ್ರಾಯಗಳನ್ನು ತೆಗೆದುಕೊಂಡು, ಯಾವ ಸಲಹೆಗಳು ಬರುತ್ತವೆಯೋ ಅವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸಮಯ ಬಂದಾಗ ತಮ್ಮ ಜೊತೆಯಲ್ಲಿ ಸಮಾಲೋಚನೆ ಈ ಬಗ್ಗೆ ಮಾಡುತ್ತೇನೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮಾನ್ ಯಡಿಯೂರಪ್ಪನವರು ಮತ್ತು ನಂಜುಂಡಸ್ವಾಮಿಯವರು ರೈತರ ಬಗ್ಗೆ ಕೇಳಿದ್ದಾರೆ. ಈ ಸಲ ನಾನು ಹೋಗುತ್ತಿದ್ದೇನೆ ಈಗಾಗಲೇ ಹೋದ ಸಲ ನಾನು ಮಾತನಾಡುವಾಗ ಹೇಳಿದ್ದೆ. ಇನ್ನು ಮುಂದೆ ಸಾಲ ಸಿಗಬೇಕಾದರೆ ನಾವು ಏನು ಮಾಡಬೇಕು ಎಂದು ಅದನ್ನು ಪ್ರಯತ್ನ ಮಾಡುವುದಕ್ಕಾಗಿ ನಾವೆಲ್ಲರೂ ಒಂದು ನಿಯೋಗ ಹೋಗೋಣ ಬನ್ನಿ ಎಂದು. ಅಲ್ಲಿ ಹೋಗಿ ಏನು ಚರ್ಚೆ ಮಾಡಬೇಕೆಂಬುದನ್ನು ನಮಗೆ ತಿಳಿಸಿದರೆ ನಿಮ್ಮ ಜತೆ ನಾವು ಚರ್ಚೆ ಮಾಡಿ ನಿರ್ಣಯ ಮಾಡಿಕೊಳ್ಳುತ್ತೇವೆಂಬ ಮಾತನ್ನು ಹೇಳಿದ್ದೇನೆ. ಇದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳಬೇಕೋ ನೋಡೋಣ. ಆದರೆ ಈ ಮಧ್ಯದಲ್ಲಿ ನಾನು ದಿಲ್ಲಿಗೆ ಹೋದಾಗ ಒಂದು ವೇಳೆ ಅವಕಾಶ ಸಿಕ್ಕಿದರೆ ಕೇಂದ್ರದ ಹಣಕಾಸಿನ ಸಚಿವರನ್ನು ಭೇಟಿಯಾಗಿ ಅವರು ಏನು ವಿಚಾರ ಮಾಡಿದ್ದಾರೆ, ಈ ಸಹಕಾರಿ ಕ್ಷೇತ್ರದ ಸಾಲ ಮನ್ನಾ ಮಾಡುವ ಬಗ್ಗೆ ಅವರ ಮನಸಿನಲ್ಲಿ ಏನಿದೆ ಎಂದು ನಾನು ತಿಳಿದುಕೊಳ್ಳುತ್ತೇನೆ. ಮತ್ತು ಈಗಾಗಲೇ ಇದರ ಯೋಜನೆ ಮಾಡಿ ಕಳಿಸಿಕೊಡಿ ಎಂದು ಹೇಳಿದ್ದಾರೆ. ನಮ್ಮ ಅಧಿಕಾರಿಗಳೂ ಕೂಡ ಯೋಜನೆ ಮಾಡುತ್ತಿದ್ದಾರೆ. ಆ ಸಮಯದಲ್ಲಿ ಏನು ಮಾಡಬೇಕೆಂದು ನೋಡೋಣ. ಆ ಮೇಲೆ ನಂಜುಂಡಸ್ವಾಮಿಯವರು ಸಾಲ ರಿಕವರಿಗಾಗಿ ಅಧಿಕಾರಿಗಳು ರೈತರನ್ನು ಒತ್ತಾಯ ಮಾಡುತ್ತಿದ್ದಾರೆ ಅವರಿಗೆ ನಾವು ಏನು ಹೇಳಬೇಕು ಎಂದು ಕೇಳಿದರೆ. ನಾನು ಇಷ್ಟೇ ಹೇಳುತ್ತೇನೆ ಅನೇಕ ಸಲ ಈ ಸದನದಲ್ಲಿ ಹೇಳಿದ್ದೇನೆ ಇವತ್ತು ರೈತರ ಸಾಲ ವಸೂಲು ಮಾಡಬೇಡಿ ಎಂದು ಹೇಳಲಾರದೆ ಇರುವುದಕ್ಕೆ ಕಾರಣವಿಷ್ಟೆ. ಕೇಂದ್ರ ಹಣಕಾಸಿನ ಸಚಿವರು ಕೂಡ ರಿಕವರಿ ಸ್ಟಾಪ್ ಮಾಡಿದ್ದೇವೆಂದು ಹೇಳಬೇಡಿ ಎಂದಿದ್ದಾರೆ. ನಬಾರ್ಡ್‌ನವರೂ ಕೂಡ ರಿಕವರಿ ಸ್ಟಾಪ್ ಮಾಡಿದರೆ ನಮ್ಮನ್ನು ಕಷ್ಟಕ್ಕೆ ಈಡುಮಾಡುತ್ತಾರೆಂಬ ದೃಷ್ಟಿಯಿಂದ ರಿಕವರಿ ಮುಂದುವರಿಸಿ ಎಂದು ಹೇಳಿದ್ದೇನೆಯೇ ಹೊರತು, ಒತ್ತಾಯ ಮಾಡಿ ಎಂದು ಹೇಳಲಿಲ್ಲ. ಈ ವಾತಾವರಣದಲ್ಲಿ ಯಾರು ಕೊಡುತ್ತಾರೋ ತೆಗೆದುಕೊಳ್ಳುತ್ತಾರೆ ಕೊಡದೇ ಹೋದರೆ ನಾವು ಒತ್ತಾಯ ಮಾಡುವ ಹಾಗಿಲ್ಲವೆಂದು ಮತ್ತೊಮ್ಮೆ ಸ್ಪಷ್ಟೀಕರಿಸುತ್ತೇನೆ. ಆ ಮೇಲೆ ಯಡಿಯೂರಪ್ಪನವರು ಕೇಳುತ್ತಿದ್ದರು ಸಂಡೂರು ಮೈನ್ಸ್ ಬಗ್ಗೆ ನನಗೆ ಗೊತ್ತಿಲ್ಲ. ನಾನು ತಿಳಿದುಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಫೆಲಿಂಗ್ ಆರ್ಡರನ್ನು ಮಾಡಿ. ಎಂದು ಒತ್ತಾಯ ತರುತ್ತಿದ್ದಾರೆ, ದಯವಿಟ್ಟು ಅದನ್ನು ತಡೆ ಮಾಡಿ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಯಡಿಯೂರಪ್ಪನವರಿಗೆ ಭರವಸೆ ಕೊಡುತ್ತೇನೆ. ನಾನು ಬಂದ ತಕ್ಷಣವೇ ಅದಕ್ಕೆ ಸಂಬಂಧಪಟ್ಟ ಸಚಿವರು, ಕಾರ್ಯದರ್ಶಿಗಳ ಜತೆ ಚರ್ಚಿಸಿ ಸಂಬಂಧಪಟ್ಟ ಫೈಲ್ ತರಿಸಿ ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಮತ್ತು ಯಡಿಯೂರಪ್ಪನವರು ಹೇಳುತ್ತಿದ್ದರು ಅನೇಕ ಕಡೆ ಸರ್ಕಾರಿ ಭೂಮಿ ಇದ್ದುದ್ದನ್ನು ಫಾರೆಸ್ಟ್‌ನವರಿಗೆ ಕೊಟ್ಟುಬಿಟ್ಟಿದ್ದೀರಿ ಅದನ್ನು ಮತ್ತೆ ತೆಗೆದುಕೊಂಡು ಹಂಚುವುದು ಹೇಗೆ ಎಂದು. ಇದರಲ್ಲಿ ಸಿ ಮತ್ತು ಬಿ ಭೂಮಿ ಕೆಲವು ಕಡೆ ಕೊಟ್ಟಾಗಿದೆ. ಆದರೆ ಕೆಲವು ಕಡೆ ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದು ರೆಕಾರ್ಡ್ ಮಾಡದೇ ಇರುವ ಭೂಮಿ ಇದ್ದರೆ ಅದನ್ನು ಬಡವರಿಗೆ ಹರಿಜನರಿಗೆ ಹಂಚುವ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ಆದರೆ ಈಗಾಗಲೇ ಫಾರೆಸ್ಟ್ ಇಲಾಖೆಗೆ ಕೊಟ್ಟಿರುವ ರೆಕಾರ್ಡ್ ಕೇಂದ್ರಕ್ಕೆ ಹೋಗದೆ ನಿಂತ ಭೂಮಿಯನ್ನು ಬಿಡಿಸಿಕೊಳ್ಳಲು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುತ್ತೇವೆ, ಈ ಸಂಬಂಧದಲ್ಲಿ ಮಾನ್ಯ ಯಡಿಯೂರಪ್ಪನವರ ಸಹಾಯವನ್ನು ಕೋರುತ್ತೇನೆ. ನಾನು ಅನೇಕ ವಿಚಾರಗಳನ್ನೂ ಹೇಳಿದ್ದರೂ ಕೂಡ ಯಾರ ಹೆಸರನ್ನೂ ಪ್ರಸ್ತಾಪ ಮಾಡದೆ ಹೇಳಿದ್ದೇನೆ. ಅರ್ಬನ್ ಲ್ಯಾಂಡ್ ಸೀಲಿಂಗ್ ಬಗ್ಗೆ ಹೇಳಿದ್ದೇನೆ. ಅದರಲ್ಲಿ ಮಾನ್ಯ ಸದಸ್ಯ ದೇಶಪಾಂಡೆಯವರ್ ಹೇಳಿದರು ಅದು ಅಗ್ರಿಕಲ್ಚರಲ್ ಲ್ಯಾಂಡ್ ಇರಬಹುದು ಅದಕ್ಕೇ ಕೊಟ್ಟಿದ್ದೇವೆಂದು. ಇಲ್ಲ, ಅರ್ಬನ್ನು

ಲ್ಯಾಂಡ್ ಸೀಲಿಂಗ್‌ನಲ್ಲಿ ಒರುವ ಭೂಮಿಗೆ ಎಕ್ಸೆಂಪ್‌ಶನ್ ಕೊಟ್ಟಿರುವುದನ್ನು ಮಾತ್ರ ನಾನು ಹೇಳಿದ್ದೇನೆ. ಮತ್ತು ಇದೆಲ್ಲಾ ಕೋರ್ಟಿನಿಂದ ಕೊಟ್ಟಿದ್ದಲ್ಲ ಸರ್ಕಾರವೇ ಎಕ್ಸೆಂಪ್‌ಶನ್ ಕೊಟ್ಟಿದ್ದಾರೆಯೋ ಹೊರತು ಕೋರ್ಟಿನಿಂದ ಎಕ್ಸೆಂಪ್‌ಶನ್ ತಂದಿದ್ದರೆ ಆ ಪ್ರಶ್ನೆ ಬರುತ್ತಿರಲಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.— ತಾವು ಮುಖ್ಯಮಂತ್ರಿಯಾಗಿದ್ದಾಗ ಎಷ್ಟಾಯಿತು? ದೇವರಾಜ ಅರಸು ಇದ್ದಾಗ ಎಷ್ಟಾಯಿತು? ಗುಂಡೂರಾಯರಿದ್ದಾಗ ಎಷ್ಟಾಯಿತು ಎಲ್ಲ ಒಂದು ಎನ್‌ಕ್ವಯರಿ ಮಾಡಿಸಿ.

ಶ್ರೀ ವೀರೇಂದ್ರ ಪಾಟೀಲ್.—ಯಾವ್ಯಾವ ಸರ್ಕಾರ ಎಷ್ಟೆಷ್ಟು ಎಕ್ಸೆಂಪ್‌ಶನ್ ಕೊಟ್ಟಿದೆ ಎನ್ನುವುದನ್ನು ಬೇಕಾದರೆ ನಾವು ಒದಗಿಸಿಕೊಡುತ್ತೇವೆ. ಆದರೆ ಇವತ್ತು ಆ ಮಾಹಿತಿ ನನ್ನ ಹತ್ತಿರ ಇಲ್ಲ.

ಒಬ್ಬ ಮಾನ್ಯ ಸದಸ್ಯರು.— ಈ ಫಿಗರ್ಸ್‌ನಿಂದ ಎಕ್ಸೆಂಪ್‌ಶನ್ ಎಲ್ಲಾ ಹೆಗಡೆಯವರ ಕಾಲದಲ್ಲೇ ಆಯಿತು ಎಂಬ ಅಭಿಪ್ರಾಯ ಬರಬಾರದು ನೋಡಿ.

ಶ್ರೀ ವೀರೇಂದ್ರ ಪಾಟೀಲ್.—ಯಾರು ಹೇಳಿದರು: ನಾನು ಹೇಳಿದ್ದೇನೇ? ಒಬ್ಬರ ಹೆಸರನ್ನೂ ನಾನು ತೆಗೆದುಕೊಂಡಿಲ್ಲ. ತಾವೇ ಊಹಾಪೋಹ ಮಾಡುತ್ತಾ ಇದ್ದೀರಿ ಅದಕ್ಕೆ ಅದರ ಅರ್ಥ ಬೇರೆ ಆಗುತ್ತದೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಬೆಳಗಾಂ ಕಾರ್ಪೊರೇಷನ್ ಚುನಾವಣೆಯ ಬಗ್ಗೆ ಮಾನ್ಯ ವಾಟಾಳ್‌ನಾಗರಾಜ್‌ರವರು ಹೇಳಿದ್ದಾರೆ. ಅಲ್ಲಿ ನಮ್ಮ ಕಷ್ಟ ಏನು ಇದೆ ಎಂದರೆ ಒಂದು ಸಲ ಚುನಾವಣೆಗಳು ಎಲ್ಲಾ ಕಾರ್ಪೊರೇಷನ್‌ಗಳಲ್ಲಿಯೂ ಆಗುತ್ತವೆ ಎಂದು ಹೇಳಿದಾಗ ಬೆಳಗಾಂನಲ್ಲಿ ಆಗುವುದಿಲ್ಲ ಎಂದು ಹೇಳುವುದಕ್ಕೆ ಆಗುತ್ತದೆಯೇ? ಅದು ಕಾನೂನು ಬದ್ಧವಾಗುವುದಿಲ್ಲ. ಅದಕ್ಕಾಗಿ ಕಾನೂನುಬಾಹಿರವಾಗುವಂಥ ಕೆಲಸ ಮಾಡಿ ಯಾರಾದರೂ ಮತ್ತೆ ಕೋರ್ಟಿಗೆ ಹೋಗತಕ್ಕಂಥ ಅವಕಾಶವನ್ನು ಮಾಡಿಕೊಡುವುದು ಸರಿಯಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಶ್ರೀಮಾನ್ ಅನಂತಕೃಷ್ಣರವರು ವಿಶ್ವಭಾರತಿ ಹೌಸಿಂಗ್ ಸೊಸೈಟಿಯವರು ಅಲ್ಲಿ ನೀರನ್ನು ಕೊಡುವುದರಲ್ಲಿ ಮತ್ತು ಎರಡನೇಯ ರೀತಿಯಾಗಿ ಬಹಳ ಮಟ್ಟಿಗೆ ತೊಂದರೆಯನ್ನು ಸದಸ್ಯರಿಗೆ ಕೊಡುತ್ತಿದ್ದಾರೆ ಎನ್ನತಕ್ಕಂಥ ವಿಚಾರವನ್ನು ಹೇಳಿದ್ದಾರೆ. ಈ ಮೊದಲೇ ನನ್ನ ಹತ್ತಿರ ಇದನ್ನು ಒಂದು ಸಲ ಪ್ರಸ್ತಾಪ ಮಾಡಿದ್ದರು. ಇದರ ಬಗ್ಗೆ ಏನು ಸೂಕ್ತವಾದಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ನೋಡಿಕೊಂಡು ನಾನು ತೆಗೆದುಕೊಳ್ಳುತ್ತೇನೆ. ಶ್ರೀಮಾನ್ ಕಮರುಲ್ ಇಸ್ಲಾಂ ರವರು ಹುಡ್ಕೋ ಮತ್ತು ಮೈನಾರಿಟಿ ಪ್ರೋಗ್ರಾಮ್ ಬಗ್ಗೆ ಸರ್ಕಾರವನ್ನು ಕೇಳಿದ್ದಾರೆ, ಮೈನಾರಿಟಿಯ ೧೫ ಪಾಯಿಂಟ್ ಪ್ರೋಗ್ರಾಮನ್ನು ಮೈನಾರಿಟಿ ಸಲುವಾಗಿ ಯಾವ ರೀತಿಯಿಂದ ಅದು ಕಾರ್ಯರೂಪಕ್ಕೆ ಬರುತ್ತದೆ ಎನ್ನುವುದನ್ನು ನಾವು ರೆವ್ಯೂ ಮಾಡುತ್ತಿದ್ದೇವೆ, ಇದರಲ್ಲಿ ಏನಾದರೂ ದೋಷಗಳು ಕಂಡು ಬಂದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಶ್ರೀಮಾನ್ ಏಕಾಂತಯ್ಯನವರು ಎಂ. ಎಸ್. ಕೆ. ಮಿಲ್ ಬಗ್ಗೆ ಕೇಳಿದರು, ಇದು ಬಹಳ ದುರ್ದೈವ. ನಾನು ಪಾರ್ಲಿಮೆಂಟ್ ಮೆಂಬರ್ ಇದ್ದಾಗಲೂ ಇದರ ಬಗ್ಗೆ ಬಹಳ ಮಟ್ಟಿಗೆ ಪ್ರಯತ್ನವನ್ನು ಮಾಡಿದೆ. ಅಲ್ಲಿನ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡಿಸಬೇಕು, ಎಲ್ಲಾ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಪ್ರಯತ್ನ ಮಾಡಿದೆ, ಅಲ್ಲಿ ಒಂದೇ ಒಂದು ಸಮಸ್ಯೆ ಉಳಿದಿರುವುದು, ಎಲ್ಲಾ ಪರಿಹಾರವಾಗಿದೆ. ಅಲ್ಲಿ ಇವತ್ತು ಬದಲಿ ವರ್ಕರ್‌ಗಳನ್ನು ಅವರನ್ನು ಹಿಂದಿನ ಮ್ಯಾನೇಜರ್‌ರವರು ಪರ್ಮನೆಂಟ್ ವರ್ಕರ್ಸ್ ಎಂದು ಮಾಡಿದ್ದಾರೆ ಈಗ ಇವರು ಪರ್ಮನೆಂಟ್ ಅಲ್ಲ ಎಂದು ಒಂದು ತಕರಾರನ್ನು ಹಾಕಿದ್ದಾರೆ. ಇದು ಕೋರ್ಟ್‌ಗೆ ಹೋಗಿದೆ. ದುರ್ದೈವದಿಂದ ಕೋರ್ಟ್‌ನಲ್ಲೂ ಕೂಡಾ ಇನ್ನೂ ತೀರ್ಮಾನ ಆಗುತ್ತಿಲ್ಲ. ಅದಕ್ಕಾಗಿ ನಾವು ಈಗಾಗಲೇ ಮ್ಯಾನೇಜ್‌ಮೆಂಟ್ ಮೇಲೆ ಒತ್ತಾಯ ಮಾಡಿದ್ದೇವೆ. ಅವರನ್ನೂ ಕೂಡಾ ಪರ್ಮನೆಂಟ್ ವರ್ಕರ್ಸ್ ಎಂದು ಮಾಡಿ ಏನು ಅನುಕೂಲವನ್ನು ಅವರಿಗೆ ಮಾಡಿಕೊಟ್ಟಿದ್ದೀರೋ ಅದನ್ನೇ ಇವರಿಗೂ ಮಾಡಿ ಎಂದು ಹೇಳಿದ್ದೇವೆ, ಈ ಪ್ರಶ್ನೆ ಇತ್ಯರ್ಥಆಗುವವರೆಗೂ ಎಂದು ಹೇಳಿದ್ದೇವೆ. ಇದು ದುರ್ದೈವ. ನಾವು ಹೇಳಿದಂತೆ ಮ್ಯಾನೇಜ್‌ಮೆಂಟ್‌ನವರು ನಡೆಯುತ್ತಿಲ್ಲ. ಅದಕ್ಕಾಗಿ ಮೊನ್ನೆ ಲೇಬರ್ ಕಮಿಷನರ್‌ರವರಿಗೆ ಅವರನ್ನು ಮತ್ತೆ ಕರೆಯಿಸಿ ಅವರಿಗೂ ಕೂಡಾ ಒತ್ತಾಯ ಮಾಡಬೇಕು ಎಂದು ಹೇಳಿದ್ದೇವೆ. ಅದು ಏನಾಗುತ್ತದೋ ನೋಡಿಕೊಂಡು ಮ್ಯಾನೇಜ್‌ಮೆಂಟಿನ ಮೇಲೆಪ್ರಭಾವ ಬೀರಿ ನನ್ನಿಂದ ಎಷ್ಟರಮಟ್ಟಿಗೆ ಸಾಧ್ಯವಿದೆಯೋ ಆ ಅನುಕೂಲ ಮಾಡಿಕೊಡುವುದಕ್ಕೆ ಬಹಳ ಪ್ರಯತ್ನ ಮಾಡುತ್ತೇನೆ ಎನ್ನುವ ವಿಚಾರವನ್ನು ಹೇಳುತ್ತೇನೆ. ನಾನು ದೆಹಲಿಗೆ ಹೋಗಬೇಕಾಗಿರುವುದರಿಂದ ಅನೇಕ ವಿಚಾರಗಳನ್ನು ಹೇಳುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಸದಸ್ಯರುಗಳು ಆಸಕ್ತಿಯಿಂದ ಈ ಒಂದು ವಿಚಾರದಲ್ಲಿ ಭಾಷಣವನ್ನು ಮಾಡಿದ್ದಾರೆ ಅನೇಕ ವಿಚಾರಗಳನ್ನು ವ್ಯಕ್ತಮಾಡಿದ್ದಾರೆ, ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತೊಮ್ಮೆ ಅವರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—''೧೯೮೦ನೇ ಇಸವಿಯ ಮಾರ್ಚ್ ೧೫ ರಂದು ವಿಧಾನಮಂಡಲದ ಸದಸ್ಯರನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆಯನ್ನು ಕೋರುತ್ತೇನೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

ಅಧ್ಯಕ್ಷರು.—ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

ಗಮನ ಸೆಳೆಯುವ ಸೂಚನೆಗಳು

(i) Government of India directions re-gfilling up of backlog Vacancies for SCs/STs.

SRI M. MALLIKARJUNA KHARGE.—I would like to call the attention of the Hon'ble Chief Minister to the situation arisen due to sudden stoppage of special recruitment drive for SC/ST as per the directions of Government of India for filling up the backlogs.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಇದು ಅನ್ವಯವಾಗುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅನ್ವಯವಾಗುವುದಿಲ್ಲ ಎಂದು ಹೇಳಿದ್ದರೂ Home Secretary ಯವರು Indiscriminate recruitment ಮಾಡಬಾರದು ಎಂದು ಹೇಳಿ ಸರ್ಕ್ಯುಲರನ್ನು ಇಷ್ಯೂ ಮಾಡಿದ್ದಾರೆ. ಮುಂದೆ ಏನಾಗಿದೆ ಎಂದು ಹೇಳಿದರೆ ಕೆಲವು ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗಳು ಮತ್ತು ಕಾರ್ಪೊರೇಷನ್ಸ್‌ಗಳು ಕೂಡಾ ಈ ರೆಕ್ರೂಟ್‌ಮೆಂಟ್‌ನ್ನು ಮಾಡಿ ಅಪಾಯಿಂಟ್‌ಮೆಂಟ್ಸ್‌ಗಳನ್ನು ಶುರು ಮಾಡತಕ್ಕಂಥ ಸ್ಟೇಜ್‌ನಲ್ಲಿ ಸ್ಟಾಪ್ ಮಾಡಿದ್ದಾರೆ, ಕೆಲವು ನೋಟೀಫಿಕೇಷನ್ಸ್‌ಗಳನ್ನು ಇಷ್ಯೂ ಮಾಡಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ತಮ್ಮ ಅಪ್ಪಣೆ ಪಡೆದ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ದಿನಾಂಕ. ೧೨-೭-೧೯೭೮ ಮತ್ತು ೨೨-೭-೧೯೭೮ರಲ್ಲಿ ಸರ್ಕಾರ ಆದೇಶಗಳನ್ನು ಹೊರಡಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿನ ಜನಾಂಗದವರಿಗೆ ೧-೧-೧೯೭೮ರ ರಿಂದ ಸಿಗಬೇಕಾದ ರಿಕ್ತ ಸ್ಥಾನಗಳಲ್ಲಿ, ಅರ್ಹ ಅಭ್ಯರ್ಥಿಗಳು ಇಲ್ಲವೇ ತುಂಬಲಾಗದ ರಿಕ್ತ ಸ್ಥಾನಗಳನ್ನು ಗುರುತಿಸಿ ಅವುಗಳನ್ನು ''ಬ್ಯಾಕ್‌ಲಾಗ್'' ಎಂದು ಪರಿಗಣಿಸಿ ಒಂದು ವಿಶೇಷ ಪ್ರಯತ್ನ ಮಾಡಿ. ಈ ಬ್ಯಾಕ್‌ಲಾಗ್ ರಿಕ್ತ ಸ್ಥಾನಗಳನ್ನು ತುಂಬಲು ಸೂಚಿಸಲಾಗಿದೆ. ಇದರಂತೆ ನೇಮಕಾತಿ ಪ್ರಾಧಿಕಾರಗಳು ರಿಕ್ತ ಸ್ಥಾನಗಳನ್ನು ಗುರುತಿಸಿ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಮತ್ತು ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಆಯ್ಕೆ ಪ್ರಾಧಿಕಾರಕ್ಕೆ ಅವುಗಳನ್ನು ಬಿಡುಗಡೆ ಮಾಡಿರುತ್ತಾರೆ. ಇದರನ್ವಯ ಆಯ್ಕೆಯ ಕಾರ್ಯಕ್ರಮ ಪ್ರಗತಿಯಲ್ಲಿದೆ.

ವಿವಿಧ ಇಲಾಖೆಗಳಲ್ಲಿ ಅನುಸರಿಸುತ್ತಿರುವ ನೇಮಕಾತಿ ಪದ್ಧತಿಗಳ ಪುನರ್ ಪರಿಶೀಲನೆಯ ದೃಷ್ಟಿಯಿಂದ ಎಲ್ಲ ಇಲಾಖೆಗಳಲ್ಲಿಯೂ ನೇರ ನೇಮಕಾತಿಯನ್ನು ಸಧ್ಯಕ್ಕೆ ತಡೆ ಹಿಡಿಯಲು ಆದೇಶ ನೀಡಲಾಗಿದೆ. ಈ ತಡೆಯಾಜ್ಞೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಬ್ಯಾಕ್‌ಲಾಗ್ ರಿಕ್ತ ಸ್ಥಾನಗಳಿಗೆ ಮಾಡುವ ನೇಮಕಾತಿಗೆ ಅನ್ವಯಿಸುವುದೇ ಎಂಬ ಬಗ್ಗೆ ಕೆಲವು ಇಲಾಖೆಗಳಿಂದ ಸ್ಪಷ್ಟೀಕರಣ ಕೋರಿ ಪ್ರಸ್ತಾವನೆಗಳು ಬಂದಿವೆ. ಈ ಬಗ್ಗೆ ಸೂಕ್ತ ಸ್ಪಷ್ಟೀಕರಣವನ್ನು ನೀಡಲಾಗುತ್ತಿದ್ದು ಬ್ಯಾಕ್‌ಲಾಗ್ ರಿಕ್ತ ಸ್ಥಾನಗಳನ್ನು ಭರ್ತಿ ಮಾಡಲು ತುರ್ತು ಕ್ರಮಗಳನ್ನು ಕೈಗೊಳ್ಳಲಾಗುವುದು.

(ಉಪಾಧ್ಯಕ್ಷರು ಪೀಠದಲ್ಲಿದ್ದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ಚೀಫ್ ಸೆಕ್ರೆಟರಿಯವರಿಂದ ಒಂದು ಆದೇಶ ಹೋಗಿದೆ. ಕೆಲವು ಡಿಪಾರ್ಟ್‌ಮೆಂಟ್‌ಗಳಲ್ಲಿ ಕ್ಲಾರಿಫಿಕೇಷನ್ ಕೇಳಿದ ಮೇಲೆ ಇನ್‌ಡಿಸ್ಕ್ರಿಮಿನೇಟಾಗಿ